# ಕೈಲಾಸದಲ್ಲಿ ಕಮ್ಯುನಿಷ್ಟರು





ಎಸ್. ವೆಂಕಟರಾಜ

ಕುರಾವಾರ್ಶಿಗಾಣಿ

# ಶುರಾ ಮಾಶಿಗಾನಿ

# ಕೈಲಾಸ ಹತ್ತಿ ಕಮ್ಯುನಿಷ್ಟರು

(ನಾಟಕ)

ಎಸ್. ವೆಂಕಟರಾಜ

೧೯೫೬

ಶ್ರೀಕೃಷ್ಣಪ್ರಕಾಶನ, ಉಡುಪಿ

ಬೆಲೆ: ಒಂದು ರೂಪಾಯಿ

ಮುದ್ರಕರು:

ಮೆಜೆಸ್ಟಿಕ್ ಪ್ರೆಸ್,

ಉಡುಪಿ





ಬರೆದ ಕಾಲ 27—2—1948 — 1—3—1948



ಪ್ರಕಾಶಕರು:

ಶ್ರೀ ಕೃಷ್ಣ ಪ್ರಕಾಶನ,

ಉಡುಪಿ.

# ಮುನ್ನುಡಿ

ಕೈಲಾಸದಲ್ಲಿ ಕಮ್ಯುನಿಷ್ಟರನ್ನು ಕಂಡು ಪುರೋಗಾಮಿಗಳಂತೆಯೇ ಪ್ರತಿಗಾಮಿಗಳೂ ಹೌಹಾರಬಹುದು. ಸಂಪ್ರದಾಯವಾದಿಗಳು ಇದೇನು ದೈವದ್ರೋಹವೆಂದು ಮೂಗು ಮುರಿಯಬಹುದು. ಆದರೆ ಯಾವ ಸನಾತನಿಗಳ ಪುರಾಣೇತಿಹಾಸಗಳಿಗಿಂತ ಹೆಚ್ಚಿನ ಹಾವಳಿಯನ್ನೇನೂ ನಾನು ಮಾಡಿರುವುದಿಲ್ಲ. ನಮ್ಮ ದೇವ ದೇವತೆಗಳನ್ನು ಪುರಾಣಗಳಿಗಿಂತ ಮಿಕ್ಕಿ ನಾನೇನೂ ವಿರೂಪಗೊಳಿಸಿರುವುದಿಲ್ಲ. ಪುರಾಣಗಳ ಹಲವಾರು ಆಭಾಸಗಳಿಂದ ಆ ದೇವತೆಗಳು ಪಾರಾಗಿ ಮತ್ತೂ ಸಂಭಾವಿತರಾಗಿಯೇ ಬಾಳಿರುವುದಾದರೆ ನನ್ನ ನಿರೂಪಣೆಯು ಅವರ ಅಂತಹ ಘನಸ್ಥಿಕೆಗೆ ಎಳ್ಳಷ್ಟೂ ಕುಂದು ತರಲಾರದು. ಅದೂ ಅಲ್ಲದೆ ಅಂತಹ ಆಭಾಸಗಳನ್ನೆಲ್ಲ ಪುರಾಣವಾದಿಗಳು ಲೀಲೆ ಎಂಬ ಒಂದೇ ಮಾತಿನಿಂದ ಮುಗಿಸಿಬಿಡಬಲ್ಲರಾದರೆ ನಾನೂ ಇವೆಲ್ಲಾ ಮಾನುಷಾರ್ಥವಾದ ಲೀಲೆಗಳೆಂದೇ ಹೇಳಿರುವೆನು. ಆದುದರಿಂದ ಸಂಪ್ರದಾಯವಾದಿಗಳೊಡನೆ ನನ್ನ ಲೆಕ್ಕಾಚಾರ ತೀರಿದಂತೆಯೇ ಸರಿ.

ಇದೊಂದು ನಾಟಕ ಎನುವುದಕ್ಕಿಂತಲೂ ವಿಡಂಬನಾತ್ಮಕವಾದ ಪ್ರಹಸನವೆನುವುದೇ ಉಚಿತವಾಗಿದೆ. ಇದರಲ್ಲಿ ನಾಯಕರಾರು? ನಾಯಿಕೆ ಯಾರು? ಪ್ರತಿನಾಯಕರಾರು?–ಎಂಬ ನಿರ್ಧಾರವಿಲ್ಲ. ಎರಡು ವಿರುದ್ಧ ಅತಿರೇಕಗಳ ಪರಸ್ಪರ ಸಂಘರ್ಷಣೆ—ಅದರ ಪರಿಣಾಮ ಇದೇ ಇಲ್ಲಿಯ ವಿಚಾರ. ಆದುದರಿಂದ ಇಲ್ಲಿ ನಾಯಕ—ಪ್ರತಿನಾಯಕ ಸ್ಥಾನವು ಸಾಂಘಿಕವಾಗಿದೆ. ಅದರ ಬೀಜಾರೋಪ ಅಂತೆಯೇ ಉಪಸಂಹಾರವೂ ನಾರದ ತುಂಬುರರಿಂದ ನಡೆಯುತ್ತದೆ. ಬೀಜದ ಬೆಳವಣಿಗೆ ದೇವಲೋಕದಲ್ಲಿ ಅದರ ಪರಿಣಾಮವೂ ಅಲ್ಲೇ ತೊಡಗಿ ಪರಿಣಾಮದ ಪ್ರತಿಸ್ಪಂದವು ಭೂಲೋಕದಲ್ಲಿ ಕೇಳ ಬರುತ್ತದೆ. ಅಂತೂ ಇಲ್ಲಿ ಮಾನವನು ಅತಿಮಾನವನಾಗಿ ಬಾಳಿದಾಗ ದೇವಲೋಕದಲ್ಲಿ ದೇವತ್ವದ ಸ್ತಿಮಿತವಾಗುವುದು–ಸ್ಥಗಿತವಾಗುವುದು. ಇಲ್ಲಿಯ ಅಹಿಂಸಾತತ್ವದ ಆವಿಷ್ಕಾರವು ದೇವಲೋಕಕ್ಕೂ ಮಾರ್ಗದರ್ಶಕವಾಗುವುದು. ಅಂತೆಯೇ ಇಲ್ಲಿ ಭೂ ಸ್ವರ್ಗಗಳಿಗೆ ಸೇತು ಬಿಗಿದಿದೆ.

ಈ ಮಾತು ಇಲ್ಲಿ ಮನನೀಯವಾಗಿದೆ—ದೊಡ್ಡವರ ದೊಡ್ಡತನದ ಅಹಂಕಾರ—ಬಡವರ ಬಡತನದ ಅತೃಪ್ತಿಯ ಕಾರ್ಪಣ್ಯ ಇವೆರಡೂ ಹಿತ ಮಿತವಾಗಿದ್ದರೇನೇ ಸುಂದರ ಸಮಾಜದ ನಿರ್ಮಾಣವಾಗಬಹುದು. ಕಾಲ ಕಾಲಕ್ಕೂ ಕ್ರಾಂತಿಯು ವಿಹಿತವಾಗಿರುವುದು. ಆದರೆ ಅದು ಸೌಹಾರ್ದ ಸಿಕ್ತವಾಗಿರಬೇಕು—ದ್ವೇಷಪೂರಿತವಾದುದಲ್ಲ! ದ್ವೇಷದ ಕಿಡಿ ದ್ವೇಷದ ಬೆಂಕಿಯನ್ನಷ್ಟೇ ಉರಿಸೀತು ಹೊರತು ಅನ್ಯೋನ್ಯ ಸಾಹಚರ್ಯದ ವಿಶ್ವಾಸ ಬುದ್ಧಿಯ ವಿಕಾಸವನ್ನಲ್ಲ. ಅಂತಹ ವಿಕಾಸಕ್ಕೂ ವಿನಾಶಕ್ಕೂ ಹೊಂದಿಕೆ ಯಾಗಿರುವ ಮಾರ್ಗವೊಂದೇ—ಅದೇ ನಿಜವಾದ ಗಾಂಧೀವಾದ!

ನಿಜವಾದ ಗಾಂಧೀವಾದ!—ಗಾಂಧೀವಾದದ ವಸ್ತು ಪ್ರದರ್ಶನ ಮಾತ್ರವಲ್ಲ. ರಾಜಘಾಟಿನ ಗಾಂಧೀ ಸಮಾಧಿಗೆ ಪದೇ ಪದೇ ಹೊರೆ ಹೊರೆ ಹೂ ಸುರಿದೊಡನೆ ಸಮಾಜವು ಸುಸ್ಥಿರವಾಗಲಾರದು. ಅಧಿಕಾರ ಲಾಲಸೆಯ ಅಹಂಭಾವ—ಸ್ಥಾನಗೌರವದ ಅಹಂಭಾವ—ಸ್ವಾರ್ಥಸಮ ಷ್ಟಿಯ ಅಹಂಭಾವ—ಈ ಅಹಂಕಾರತ್ರಯಗಳ ದುರ್ವಾಸನೆಯು ಕಳೆದು ಸತ್ಯ—ಸೇವೆಗಳ ಅರಳುಮಲ್ಲಿಗೆ ಪರಿಮಳಿಸಬೇಕು. ಅಂತಹ ಹೂ ಹೂಗಳ ಬಾಂಧವ್ಯದ ಬಿಗಿತದಲ್ಲಿ ಜನತೆಯ ಸೌಮನಸ್ಯವು ಕೂಡಿಬಂದಿತೆಂದರೆ ಅಂತಹ ಸುಹೃದ್ ಸಮುದಾಯವೇ ಒಂದು ವಿಶಿಷ್ಟ ಜನಾಂಗದ ಮಾಲೆ ಯಾಗಬೇಕು. ಅಂತಹ ಸತ್ಯ ಸೇವೆಗಳ ಅಭಾವವೇ ದ್ವೇಷಕ್ಕೆ ಪ್ರಚೋದ ನೆಕೊಟ್ಟು ಅತೃಪ್ತಿಯ ವಾತಾವರಣವನ್ನು ನಿರ್ಮಿಸುವುದು. ಅದೇತಾನೇ ಕಮ್ಯುನಿಸಂ!

ಎಂಟು ವರ್ಷಗಳ ಹಿಂದೆ ಬರೆದು ಮುಗಿಸಿದ ಈ ನಾಟಕ-ಈಗಲೀಗ ಕಮ್ಯುನಿಸಮಿನ ಉದ್ಬೋಧಕ ರಾಷ್ಟ್ರಗಳಲ್ಲೂ ಅನಿವಾರ್ಯವಾಗಿ ಹಲವು ಮಾರ್ಪಾಟುಗಳು ನಡೆದು ಕ್ರಾಂತಿಯ ರಕ್ತಘೋಷಣೆಯು ಕಂಠವು ಕುಂಠಿ ತವಾಗಿ ಹೊಸಸೃಷ್ಟಿಯ ಹೊಸ ಬೆಳಕೊಂದು ಹಬ್ಬತೊಡಗಿದೆ—ಎಂಬು ದನ್ನು ನಾವೀಗ ಸಂತೋಷದಿಂದ ಸಮೀಕ್ಷಿಸಬೇಕಾಗಿದೆ. ಇದರಿಂದಾಗಿ ಕಮ್ಯುನಿಷ್ಟರ ತೀವ್ರ ಮನೋವೃತ್ತಿಯಲ್ಲಿ ಸಾತ್ವಿಕ ಪ್ರವೃತ್ತಿಯ ಬದಲಾವ ಣೆಯು ನಡೆದು ದೇಶದ ಮುನ್ನಡೆಯ ಶಾಂತ ಮಾರ್ಗದಲ್ಲಿ ಅವರದೂ ಹಿತ

ಮಿತವಾದ ಹೆಜ್ಜೆಯು ಇತರ ಸೋದರರೊಡನೆ ಕೂಡಿ ಸಮಾನತಾಭಾವವು ಸೌಹಾರ್ದಮುಖೇನ ಮುಂಬರಿಯಬಹುದೆಂದು ಹಾರಯಿಸುವುದು ಸುತ ರಾಂವಿಹಿತವಾಗಿದೆ. ಇಂತಹ ಹಾರಯಿಕೆಯು ವಿಶ್ವದ ಶಾಶ್ವತ ಸುಭದ್ರ ತೆಯ ದೃಷ್ಟಿಯಿಂದ ಸಫಲವಾಗಲಿ! ಸಮಾನತಾವಾದವು ರೋಗದ ಬಿರು ಗಾಳಿಯಂತೆ ಶೋಷಕವಾಗಿ ದೇಶದಲ್ಲಿ ಬೀಸದೆ ಆರೋಗ್ಯದ ತಂಗಾಳಿ ಯಂತೆ ಪೋಷಕವಾಗಿ ಸದ್ಭಾವನೆಯಿಂದ ತುಂಬಿಹರಿಯಲಿ!

ಈ ನಾಟಕವನ್ನು ಅಭಿನಯಿಸಲು ಅನುಕೂಲವಾಗುವಂತೆ ಬರೆದು ದಾಗಿದೆ. ಇದರ ಪಾತ್ರ ವರ್ಗದ ಪಟ್ಟಿ ಕೊಂಚ ವಿಸ್ತಾರವಾಗಿ ಕಾಣ ಬಹುದು. ಆದರೆ ಹಲ ಕೆಲವು ಅಭಾಷಿತ--ಅಮುಖ್ಯ--ಏಕ ಪ್ರವೇಶ ಇವು ಗಳನ್ನೆಲ್ಲಾ ಹೊಂದಿಸಿಕೊಂಡರೆ ಅಂತೆಯೇ ಕೆಲವು ಮೊದಲಿನ ಅಂಕದ ಪಾತ್ರಗಳನ್ನು ಎರಡನೇ ಅಂಕಕ್ಕೆ ಅನುಗೊಳಿಸಿದರೆ(ಅದಕ್ಕೆ ಅಂಕ ವ್ಯವಧಾ ನದಲ್ಲಿ ಸಾಕಷ್ಟು ಸಮಯವಿದೆ)ಅಂತಹ ವಿಸ್ತಾರವಾದ ಪಟ್ಟಿ ಸಾಧಾರಣ ವಾಗಿ ಸಂಕೋಚವಾಗುವುದು. ಇನ್ನಿದು ಪೌರಾಣಿಕ---ಸಾಮಾಜಿಕ ಇವೆ ರಡರ ಕಲಸು ಮೇಲೋಗರವಾಗಿರುವುದರಿಂದ ಸ್ವಭಾಷಿತವನ್ನು ಬಳಕೆಗೆ ತಾರದಿರುವುದರಿಂದ ಇದಕ್ಕಿಂತ ಕಡಿಮೆ ಮಾಡಲು ಸಾಧ್ಯ ಬರಲಿಲ್ಲವೆಂದು ಹೇಳಬೇಕಾಗಿದೆ. ಅಂತೂ ಇದೊಂದು ನವೀನ ರೀತಿಯ—ಪೌರಾಣಿಕ ವೇಷ ಭೂಷಣಗಳ ಪಾತ್ರ ಸೃಷ್ಟಿಯ—ನೃತ್ಯಗಾನ ತಾಂಡವವೇ ಮೊದ ಲಾದ ವ್ಯಾಪಕ ರೂಪದ ಆಕರ್ಷಣೆಯ ಸಮುಚ್ಚಯವಾಗಿರುವುದರಿಂದ, ವಿಚಾರ ದೃಷ್ಟಿಯಿಂದಲೂ ವಿಹಾರ ದೃಷ್ಟಿಯಿಂದಲೂ ರಂಗ ಭೂಮಿಯ ಮೇಲೆ ಯಶಸ್ವಿಯಾಗಬಹುದೆಂದು ನಂಬಿರುವೆನು.

೨೫—೮—೧೯೫೭ ಎಸ್. ವೆಂಕಟರಾಜ.

# ಪಾತ್ರ ಪರಿಚಯ

## ಪುರುಷ (ಮುಖ್ಯ)

| | | | | | | |
|---|---|---|---|---|---|---|
| ನಾರದ— | ಅಂಕ ೧ | ಪ್ರವೇಶ | ೧, ೨, ೩, ೪, ೫, ೬ | ಅಂಕ ೨ | ಪ್ರ. | ೨, ೩, ೪, ೫ |
| ತುಂಬುರ- | ,, | ,, | ೧, ೨, ೪, ೫, ೬ | ,, | ,, | ೨ ೩, ೫ |
| ಬ್ರಹ್ಮ— | | | | ,, | ,, | ೧, ೨, ೫ |
| ವಿಷ್ಣು— | | | | ,, | ,, | ೧, ೨, ೫ |
| ಈಶ್ವರ— | ,, | ,, | ೫, | ,, | ,, | ೨, ೫ |
| ಇಂದ್ರ— | ,, | ,, | ೩, ೭, | ,, | ,, | ೨, ೫ |
| ನಂದಿ— | ,, | ,, | ೫, ೬, | ,, | ,, | ೨, ೪, ೫ |
| ಭೃಂಗಿ— | ,, | ,, | ೫, ೬, | ,, | ,, | ೨, ೪, ೫ |
| ಶೃಂಗಿ— | ,, | ,, | ೫, ೬, | ,, | ,, | ೨, ೪, ೫ |
| ಗರುಡ— | ,, | ,, | ೬, | ,, | ,, | ೪, ೫ |
| ಸನಕ— | ,, | ,, | ೬, | ,, | ,, | ೪, ೫ |
| ಅಗ್ನಿ— | ,, | ,, | ೩, ೭, | | | |
| ವರುಣ— | ,, | ,, | ೩, ೭, | | | |

### (ಅಮುಖ್ಯ)

| | | | | | | |
|---|---|---|---|---|---|---|
| ಹಿಂದು— | ,, | ,, | ೧, | | | |
| ಮುಸಲ್ಮಾನ— | | ,, | ೧, | | | |
| ಕೆಲವರು— | ,, | ,, | ೧, | | | |

### (ಅಭಾಷಿತ)

| | | | | | | |
|---|---|---|---|---|---|---|
| ಕೆಲವು ಭೂತಗಳು— | ,, | | ೫, | ,, | ,, | ೨ |
| ಸೇವಕರು | ,, | ,, | ೩, ೭, | | | |
| ಅರ್ಜುನ- | | | | ,, | ,, | ೫ |

ಸ್ತ್ರೀ (ಮುಖ್ಯ)

| | | | | | | |
|---|---|---|---|---|---|---|
| ರಂಭೆ— | ಅಂಕ ೧ | ಪ್ರವೇಶ | ೩, ೬, ೭, | ಅಂಕ ೨ | ಪ್ರವೇಶ | ೪, ೫ |
| ಊರ್ವಶಿ- | ,, | ,, | ೩, ೬, ೭, | ,, | ,, | ೪, ೫ |
| ತಿಲೋತ್ತಮೆ— | | ,, | ೩, ೬, ೭, | ,, | ,, | ೪, ೫ |
| ಶಚೀದೇವಿ- | ,, | ,, | ೩, ೭, | ,, | ,, | ೫ |
| ಪಾರ್ವತಿ- | ,, | ,, | ೫, | | ,, | ೨, ೫ |

(ಅಮುಖ್ಯ)

| | | | | | | |
|---|---|---|---|---|---|---|
| ಲಕ್ಷ್ಮಿ— | | | | ,, | ,, | ೫ |
| ಸರಸ್ವತಿ— | | | | ,, | ,, | ೫ |
| ವನಜ— | ,, | ,, | ೧ | | | |
| ಮಾಲಿನಿ- | ,, | ,, | ೧ | | | |

# ದೃಶ್ಯ ಪರಿಚಯ

★

| | | | | |
|---|---|---|---|---|
| ಅಂಕ | ೧ | ದೃಶ್ಯ | ೧ | ಉಪವನ |
| ,, | ,, | ,, | ೨ | ಬೀದಿ |
| ,, | ,, | ,, | ೩ | ಮಹಲು (೨) |
| ,, | ,, | ,, | ೪ | ಬೀದಿ |
| ,, | ,, | ,, | ೫ | ಮಹಲು |
| ,, | ,, | ,, | ೬ | ಉಪವನ |
| ,, | , | ,, | ೭ | ಮಹಲು (೨) |
| ಅಂಕ | ೨ | ದೃಶ್ಯ | ೧ | ಬೀದಿ |
| ,, | ,, | ,, | ೨ | ಮಹಲು |
| ,, | ,, | ,, | ೩ | ಬೀದಿ |
| ,, | ,, | ,, | ೪ | ಉಪವನ |
| ,, | ,, | ,, | ೫ | ಮಹಲು (೨) |

**ಅಂಕ ವಿನ್ಯಾಸ—**

೧ ಅಂಕದ ಪರದೆ (ಹಿಂದುಸ್ಥಾನದ ಮಧ್ಯೆ ಧ್ವಜದೊಡನೆ ಗಾಂಧೀಜಿಯ ಪೂರ್ಣ ಚಿತ್ರವಿರುವುದು)

೨ ಬೀದಿ

೩ ಉಪವನ

೪ ಮಹಲು (೧)

೫ ಮಹಲು (೨)

---

**ಸೂಚನೆ:—** ಈ ನಾಟಕದಲ್ಲಿ ಕೆಂಪು ಬಾವುಟವೆಂದರೆ ಕ್ರಾಂತಿಯ ಚಿಹ್ನೆಯಾದ ಬರೇ ಕೆಂಪು ಬಣ್ಣದ ಬಾವುಟ.

# ಕೈಲಾಸದಲ್ಲಿ ಕಮ್ಯುನಿಷ್ಟರು

**ಅಂಕ ೧** **ದೃಶ್ಯ ೧ ಉಪವನ**

—ಬೆಳಗಿನ ಹೊತ್ತು. ಬೈರಾಗಿಯ ವೇಷದಲ್ಲಿ ನಾರದನು ಹರಿನಾಮ ಸ್ಮರಣೆ ಮಾಡುತ್ತ ಪ್ರವೇಶಿಸುವನು—

**ನಾರದ**—ಜಯ ಜಯ ಜಗನ್ನಾಥ ಜಗದಂತರಾತ್ಮ
ಜಯ ಸಚ್ಚಿದಾನಂದ ಸುಖ ಸತ್ಯಕಾಮ
ಜಯ ವಿಶ್ವರೂಪ ಶುಭಚರಿತಾಭಿರಾಮ
ಜಯ ಜಯೋದಿತನಾಮ ಶ್ರೀರಾಮ ರಾಮ
ಮಯಣ ಗೂಡಿನ ಮೇಲೆ ಮಧುವು ತುಂಬಿದ ರೀತಿ
ಜಗದೊಳದ್ಭುತವು ನಿನ್ನಯ ವಿಶ್ವ ಲೀಲೆ!
ಜೇನು ತೀರಿದ ಮೇಲೆ ಮಯಣವೇತರ ನಂಟು?
ಈರೇಳು ಲೋಕವಿದು ಬರಿದು ಮಧುಶಾಲೆ

(ಕೈಯೆತ್ತಿ) ಜಯರಮಾಪತೇ ಶ್ರೀಮನ್ನಾರಾಯಣ! ಎಲ್ಲವೂ ನಿನ್ನ ಮಾಯೆಯಪ್ಪ ಮಾಯೆ! ಭಗವಂತಾ—(ತೆರೆಯ ಒಳಗಡೆಯಿಂದ ಯಾರೋ ಕರೆಯುವರು)

ನಾರದಾ—ನಾರದ—

**ನಾರದ**—(ಅಂಜಿಕೆಯಿಂದ) ಅರೆ! ಯಾರಪ್ಪ ಅದು? (ಅಡಗಿ ಅಡಗಿ ನಿಂತಿರುವಾಗ ತುಂಬುರನ ಪ್ರವೇಶ)

**ತುಂಬುರ**—ನಾರದಾ—ನಾರದ

**ನಾರದ** - (ಮುಂದೆ ಬಂದು ಉಸಿರುಬಿಟ್ಟು)ಓಹೋ ನೀನೇಯೋ ಪುಣ್ಯಾತ್ಮ? ನಾನು ಯಾರವರು ನನ್ನ ಹೆಸರೆತ್ತಿ ಕೂಗುವವರು ಎಂದು ಬೆಚ್ಚಿಬೆರಗಾಗಿ ಹೋದೆ!

**ತುಂಬುರ**—ಮತ್ತೆ ನಾರಾಯಣ ನಾರಾಯಣ ಎಂದು ಊರುಕೂಡುವಂತೆ ಒದರಾಡುತ್ತ ಇದ್ದಿಯಲ್ಲ? ಒಂದಿಷ್ಟು ಎಚ್ಚರಬೇಡವೆ? ವಿವೇಕ ಬೇಡವೆ? ಇದೇನು ಸ್ವರ್ಗಲೋಕದ ಸಭೆಯಲ್ಲಿ ಭಕ್ತಿಯ ನಟನೆ ಮಾಡಿದಂತಲ್ಲ. ಮೈ ಮೇಲೆ ಎಚ್ಚರ ಬೇಕಯ್ಯ ಎಚ್ಚರಬೇಕು!

**ನಾರದ**—ಹೋಗಲಿ ಬಿಡು- ನೀನು ನಿನ್ನ ಸಂಚಾರಗಳನ್ನೆಲ್ಲ ಯಶಸ್ವಿಯಾಗಿ ತೀರಿಸಿ ಬಂದಿರುವಿಯಷ್ಟೆ?

**ತುಂಬುರ**—ಹೌದು ನಾರದ. ಪರಮೇಶ್ವರನ ಕೃಪೆಯಿಂದಾಗಿ ನಾನು ನನ್ನ ಪ್ರಯಾಣವನ್ನು ಸುಖವಾಗಿ ತೀರಿಸಿ ಬಂದಿರುವೆನು. ಹೇಗೆ? ನಿನ್ನ ಪ್ರಯಾಣವು ಹಿತಕರವಾಗಿದ್ದಿತೆ? ಮೊತ್ತ ಮೊದಲಿಗೆ ನಿನ್ನ ಅನುಭವಗಳನ್ನು ಕೊಂಚ ಹೇಳು ನೋಡೋಣ.

**ನಾರದ**--ಆಗಲಿ. ಎರಡುವರೆ ಸಾವಿರ ವರ್ಷಗಳ ನಂತರ ನಾನು ಶ್ರೀಮನ್ನಾರಾಯಣ ಮತ್ತು ಮಹಾಲಕ್ಷ್ಮಿಯವರ ಅಭಿಲಾಷೆಗಳನ್ನು ಪೂರೈಸುವ ಸಲುವಾಗಿ ಭೂಲೋಕಕ್ಕೆ ಬಂದಿರುವೆನಷ್ಟೆ?

**ತುಂಬುರ**—ಏನು? ಎರಡುವರೆಸಾವಿರ ವರ್ಷಗಳ ನಂತರ!

**ನಾರದ**—ಹೌದು. ಭಗವಾನ್ ಬುದ್ಧನ ಕಾಲದಲ್ಲಿ ನಾನೊಮ್ಮೆ ಅವನ ಪುಣ್ಯ ದರ್ಶನಕ್ಕಾಗಿ ಈ ಲೋಕಕ್ಕೆ ಬಂದಿದ್ದು ಈ ಪ್ರಾಂತಗಳಲೆಲ್ಲ ಅಡ್ಡಾಡಿ ಇಲ್ಲಿಯ ಉದಾತ್ತ ಸಂಸ್ಕೃತಿಗಳನ್ನೆಲ್ಲ ತಿಳಿದು ಹೋಗಿದ್ದೆ. ಆದರೆ ಈಗಿನ ಪರಿಸ್ಥಿತಿಯೇನು?

**ತುಂಬುರ**—ಏನಾಗಿ ಹೋಗಿದೆ?

**ನಾರದ**—ಮೊದಲಿದ್ದ ಆ ಪರ್ಣಶಾಲೆಗಳೆಲ್ಲಿ? ಆ ಹೋಮ ಧೂಮಗಳೆಲ್ಲಿ? ಆ ದಾನ ಧರ್ಮಗಳ ವಿಪುಲತೆಯೆಲ್ಲಿ? ಅವೆಲ್ಲಾ ಹೋಗಿ ಈಗ ದೊಡ್ಡ ದೊಡ್ಡ ಕಾರ್ಖಾನೆಗಳು ಮೇಲೆದ್ದು ಬಾಯ್ದೆರೆದು ಹೊಗೆ ಕಾರುತ್ತಿರುವುವು! ಮನುಷ್ಯನಿಗೇನು ಇಂತಹ ಹೊಗೆಯ ಮೇಲೆ ಪ್ರೀತಿಯೋ ನಾನರಿಯೆ! ಕಾರ್ಖಾನೆಯ ಹೊಗೆಯು ವಾತಾವರಣವನ್ನು ತುಂಬಿರುವುದು ಸಾಲದೆ ಪ್ರತಿಯೊಬ್ಬನೂ ಒಂದೊಂದು ಹೊಗೆಯ ಬತ್ತಿಯನ್ನು ಬಾಯಲ್ಲಿಟ್ಟುಕೊಂಡು ಹೊಟ್ಟೆ ತುಂಬಿಸಿ ಮತ್ತೆ ಹೊಗೆ ಕಾರುತ್ತಿರುವನು! ಒಬ್ಬೊಬ್ಬನೂ ಒಂದೊಂದು ಚಿಕ್ಕ ಚಿಕ್ಕ ಕಾರ್ಖಾನೆಯೋ ಏನೋ! ನೋಡು—ನಾನೂ ಕೂಡಾ ಆತುರದಿಂದ ಅಂತಹ ಹೊಗೆಬತ್ತಿಯನ್ನು ಹೇಗೋ ಸಂಗ್ರಹಿಸಿ ನಮ್ಮ ದೇವಲೋಕದ ಕಡೆ ಕೊಂಡೊಯ್ಯುವುದಕ್ಕಾಗಿ ಇರಿಸಿ ಕೊಂಡಿರುವೆನು. (ಎಂದು ಜೋಳಿಗೆ ತೋರಿಸುವನು.)

**ತುಂಬುರ**—ಅದು ಬಹಳ ಒಳ್ಳೆದಾಯಿತು ನೋಡು. ನಮ್ಮ ದೇವತೆಗಳಿಗೆ ಅದೊಂದು ಸೌಭಾಗ್ಯವೇಕೆ ಕಡಿಮೆಯಾಗಬೇಕು? ಮತ್ತೆ?

**ನಾರದ**—ಮತ್ತೇನು? ಆ ಮಹಾ ಮಹಾ ಮಠಗಳ ಅನ್ನ ಸತ್ರಗಳೆಲ್ಲಾ ಹೋಗಿ ದಾನ ಧರ್ಮಗಳು ನಾಶವಾಗಿ ಬೇರೆ ದೊಡ್ಡ ದೊಡ್ಡ ಅನ್ನ ಸತ್ರಗಳು ಹೋಟೆಲ್ ಎಂಬ ಶುಭ ನಾಮಧೇಯದಿಂದ ವಿಲಾಸ—ಭವನ—ಸಮಾಜ—ಮಂದಿರವೇ ಮೊದಲಾದ ವಿಚಿತ್ರ ರೂಪದಿಂದ—ಹೆಚ್ಚೇಕೆ? ಇನ್ನೂ ಸ್ವಲ್ಪ ಸಮಯದಲ್ಲೇ ಆ ಮಠ ಈ ದೇವಸ್ಥಾನಗಳೆಂಬ ಹೆಸರಿನಿಂದಲೂ ಮೇಲೆದ್ದು ಬಂದು ಜನರನ್ನು ಗುಲಾಮರನ್ನಾಗಿ ಮಾಡಿ ಸಂಪೂರ್ಣ ಸೂರೆಗೊಳ್ಳಲೂ

ಬಹುದು! ಆದರೂ ಪ್ರತಿ ಮನುಷ್ಯನು ಇಂತಹ ಹೋಟೆಲುಗಳ ಹಿತ ರಕ್ಷಣೆಗಾಗಿ ಅರೆ ಪಾವು ಅಕ್ಕಿಯನ್ನೇ ಉಪಯೋಗಿಸಬೇಕೆಂದು ಖಡ್ಡಾಯವಾಗಿ ರೇಶನ್ ಎಂಬುದಾಗಿ ಶಾಸನ ಮಾಡಿಕೊಂಡಿರುವನಂತೆ! ಮತ್ತೆ ನೋಡು—ಅಂದಿನ ಕಾಲದಲ್ಲಿ ರಾಜರಾಜರು ಯುದ್ಧ ಹೂಡಿಕೊಂಡು ಸಾಯುವುದಿದ್ದಿತಷ್ಟೆ?

**ತುಂಬುರ**—ಸಹಜ. ಅದೇ ನ್ಯಾಯವಾದ ಯುದ್ಧ—ವೀರ ಸ್ವರ್ಗ!

**ನಾರದ**—ಆದರೆ ಈಗ ಹಾಗಲ್ಲ. ರಾಜನು ಪ್ರಜೆಗಳೊಂದಿಗೆ ಯುದ್ಧ ಹೂಡಿ ದಿನ ನಿತ್ಯ ಕಾದುವುದನ್ನು ಕಂಡಿರುವೆನು. ಮೊನ್ನೆ ಮೊನ್ನೆಯತನಕ ದೇಶದ ಶಾಂತ ಪ್ರಜೆಗಳನ್ನು ರಾಜನು ಬೇಕಾದಂತೆ ಹೊಡಿಸಿ ಬಡಿಸಿ ಕಾರಾಗೃಹದಲ್ಲಿ ತುಂಬುತಿದ್ದನಂತೆ! ಈ ಎಲ್ಲಾ ತುಮುಲುಗಳ ಮಧ್ಯದಲ್ಲಿ ನೋಡು—ನಾನೊಂದು ಅದ್ಭುತ ವ್ಯಕ್ತಿಯನ್ನು ಕಂಡಿದ್ದೇನೆ.

**ತುಂಬುರ**—ಯಾರದು ಅಂತಹ ವ್ಯಕ್ತಿ? ಅವನದೇನು ಮಹತ್ವವಿದೆ?

**ನಾರದ**—ನೋಡು ತುಂಬುರ! ಎರಡುವರೆ ಸಾವಿರ ವರ್ಷಗಳ ಹಿಂದೆ ನಾನು ಯಾವ ಶಾಂತಮೂರ್ತಿಯನ್ನು ಕಂಡು ಕೈಮುಗಿದಿದ್ದೆನೋ

**ತುಂಬುರ**—ಸಹಜ. ಅದು ಪರಮಾತ್ಮನ ಬುದ್ಧಾವತಾರ.

**ನಾರದ** - ಸರಿ. ಆದರೆ ಈ ಮಧ್ಯದಲ್ಲಿ ಯಾವ ದೇವರು ಭೂಲೋಕದಲ್ಲಿ ಅವತಾರ ಮಾಡಿದರೋ ನನಗಂತೂ ತಿಳಿದು ಬಂದಿಲ್ಲ. ಆದರೆ ಆ ವ್ಯಕ್ತಿ ಆ ಶಾಂತಮೂರ್ತಿ ಆ ಸಹನಾ ಸ್ವರೂಪ ಆ ತ್ಯಾಗದ ಪ್ರತೀಕ ಆ ಅಹಿಂಸಾ ಪ್ರವೃತ್ತಿ ಆ ಮಹಾತ್ಮನನ್ನು ಕಂಡು ನಾನು ಬೆಚ್ಚು ಬೆರಗಾದೆ! ವಿಷ್ಣುವು ಈ ಹಿಂದೆ ತನ್ನ ಹತ್ತು ಅವತಾರಗಳಲ್ಲಿ ಒಂದೊಂದು ಗುಣಗಳನ್ನು ಆದರ್ಶವಾಗಿ ದಿಗ್ದರ್ಶನಗೊಳಿಸಿರುವನಲ್ಲ?

**ತುಂಬುರ**—ಹೌದು. ತನ್ನ ದಶಾವತಾರಗಳಿಂದ.

**ನಾರದ** –ಅವುಗಳನ್ನೆಲ್ಲ ಇಲ್ಲಿ ಏಕತ್ರಿತವಾಗಿ ಕಂಡಿರುವೆನು. ಆ ಮಹಾತ್ಮನು ಕೈದುಗೊಳ್ಳದೆ ಮಹಾ ಯೋಧನಾಗಿರುವನು. ಪರರಿಗೆ ಕೇಡು ಬಗೆಯದೆ ರಾಜ್ಯ ನಿರ್ಮಾಪಕನಾಗಿರುವನು. ಅಂತಹ ಅಜಾತ ಶತ್ರು—ಶತ್ರುಂಜಯ—ಆ ದಿವ್ಯಾತ್ಮನನ್ನು ಕಂಡು ಆಶ್ಚರ್ಯ ಗೊಂಡಿರುವೆನು. ನೋಡು ತುಂಬುರ! ಎಲ್ಲಿಯಾದರೂ ಭಗವದ್ಗೀತೆಯೊಂದಿಗೆ ಖುರಾನಿನ ಪಠನವಾದುದನ್ನು ಕೇಳಿರುರುವೆಯೆ?

**ತುಂಬುರ**—ಇಲ್ಲವೇಯಿಲ್ಲ

**ನಾರದ**—ಮೇಲು ಕೀಳೆಂಬ ಭಾವವಿಲ್ಲದೆ ಮನುಷ್ಯ ಮನುಷ್ಯರಾಗಿ ಜನರು ಹೆಗಲು ಕೂಡಿಸಿದುದನ್ನು ಕಂಡಿರುವೆಯೆ?

**ತುಂಬುರ**—(ಸಂಶಯದಿಂದ) ಇದೇನು ನಾರದಾ! ಧರ್ಮ ಸಾಂಕರ್ಯ!

**ನಾರದ**—ಅಲ್ಲವೇ ಅಲ್ಲ. ನೀನಿನ್ನೂ ಚಿಕ್ಕ ಮಗು! ನಿನಗಿದೆಲ್ಲಾ ಅರ್ಥವಾಗಬೇಕಾದರೆ ತಲೆ ನರೆತು ಹಲ್ಲು ಉದುರಬೇಕಾಗಿದೆ! ಹೋಗಲಿ ಬಿಡು. ನೀನು ಎಲ್ಲೆಲ್ಲಾ ತಿರುಗಿ ಏನೆಲ್ಲಾ ಕಂಡಿರುವಿ ಹೇಳು!

**ತುಂಬುರ**–ನಾನು ನಿನ್ನನ್ನು ಬೀಳ್ಕೊಟ್ಟು ದಕ್ಷಿಣಾಭಿಮುಖವಾಗಿ ಪ್ರಯಾಣ ಬೆಳಸಿದೆನಲ್ಲ? ಹಾಗೆ ಹೋಗುತ್ತ ದಾರಿಯುದ್ದಕ್ಕೂ ನೀನು ಹೇಳಿದ ಮಹಾತ್ಮನ ಶುಭನಾಮವನ್ನು ಎಲ್ಲೆಲ್ಲೂ ಕೇಳುತಿದ್ದೆನು. ಎಷ್ಟೋ ದಿಕ್ಕಿನಲ್ಲಿ ಬಾವುಟವೇರಿಸಿ ಜನರು ಅದರ ಸುತ್ತಲೂ ಅವನ ಪುಣ್ಯ ಕೀರ್ತಿಯನ್ನು ಹಾಡುತ್ತ ಶಾಂತ ಯುದ್ಧಕ್ಕೆ ಸನ್ನದ್ಧರಾಗಿದ್ದಂತೆ ನಿಂತಿದ್ದರು.

**ನಾರದ**—(ನಗುತ್ತ) ಮತ್ತೆ ನೀನೇ ಅದೇನು ಧರ್ಮ ಸಾಂಕರ್ಯವೆಂದು ಹೇಳಿದೆಯಲ್ಲ?

**ತುಂಬುರ**—ಹೌದು. ನಾನು ಹೋದಾಗ ಕುಂಭಕೋಣದತ್ತ ಕಡೆ ಯಾರೋ ಹಾಗೆಂದರು.

**ನಾರದ**—ಆದಕ್ಕಾಗಿಯೇ ಕುಂಭಕೋಣ ಎನುವುದು. ನಾನು ನನ್ನ ಕಾಲದಲ್ಲಿ ಹಿಂದಿನ ಶಾಸ್ತ್ರಗಳನ್ನು ಒಪ್ಪದೆ ನನ್ನದೇ ಸಂಹಿತೆಯನ್ನು ಬರೆದು ಧರ್ಮ ಪ್ರವರ್ತಕನಾಗಿರುವೆನು. ಮತ್ತೆ ಈಗಿನ ಜನಾಂಗ ಮೂರು ಸಾವಿರ ವರ್ಷಗಳ ನಂತರ ತಮಗಾಗಿ ತಮ್ಮ ಸಂಹಿತೆಗಳನ್ನು ಬರೆದು ಅನುವರ್ತಿಸುವುದರಲ್ಲಿ ತಪ್ಪೇನು ಬಂದಿತು? ಆಯಾ ಕಾಲದ ಒಳ್ಳಿತು ಕೆಟ್ಟುದಕ್ಕೆ ನಾನೇಕೆ-ಮನುವೇಕೆ-ಪರಾಶರನೇಕೆ? ಶ್ರೀರಾಮನು ತನ್ನ ಕಾಲದಲ್ಲಿ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆತರುವುದಕ್ಕಾಗಿ ಯಾವ ಸ್ಮೃತಿಯ ಆಧಾರವನ್ನೂ ಕಂಡುಕೊಳ್ಳಲಿಲ್ಲ. ಶ್ರೀಕೃಷ್ಣ ಪರಮಾತ್ಮನು ಕುರುಕ್ಷೇತ್ರದ ದಾಯಾದಿಗಳ ಯುದ್ಧದಲ್ಲಿ ಯಾವ ಧರ್ಮ ಶಾಸ್ತ್ರವನ್ನು ಎರವು ತೆಗೆದುಕೊಳ್ಳಲಿಲ್ಲ. ಅದು ಅವನದೇ ಗೀತೆ—ಕಾಲಧರ್ಮದ ಅಮರಗೀತೆ! ಆಯಾಕಾಲಕ್ಕೆ ವಾತಾವರಣಕ್ಕೆ ದೇಶಾಚಾರಕ್ಕೆ ಉಚಿತವಾದುದೇ, ಅಂದಿನ ಜನಾಂಗದ ಅಭ್ಯುದಯಕ್ಕೆ ಸಹಕಾರಿಯಾದುದೇ ಧರ್ಮಶಾಸ್ತ್ರ! ಅದರ ಪ್ರವರ್ತಕನು ಯಾರಾದರೇನು? ಅವನೇ ಯುಗಪುರುಷ!

**ತುಂಬುರ**—ಸಹಜ. ಒಪ್ಪಿದೆನು. ನಾನು ನನ್ನ ದಕ್ಷಿಣ ದೇಶಗಳ ಪ್ರಯಾಣದಲ್ಲಿ ಅಂತಹ ಒಂದು ಹೊಸಧರ್ಮದ ಆವಿರ್ಭವವನ್ನು ಕಾಣುತಿದ್ದೆನು. ಕಟ್ಟಕಡೆಗೆ ಕೇರಳದತ್ತ ಕಡೆ ಹೋದಾಗ—

**ನಾರದ**—ಅಲ್ಲೇನಾಯಿತು? ಕೇರಳವು ಒಂದು ಸೊಗಸಾದ ದೇಶತಾನೆ?

**ತುಂಬುರ**—ಅದು ನಿನ್ನ ಮೊದಲಿನ ನೆನಪಿರಬಹುದು. ಆದರೆ ಈಗ ಅಲ್ಲೇನಿದೆ? ಅರೆಬತ್ತಲೆ ಜನಾಂಗ—ಹಸಿವು ಹಿಂಗದ ಜನಾಂಗವು ಹೆಜ್ಜೆ ಹೆಜ್ಜೆಗೆ ಹೆಚ್ಚುತ್ತಾ ನಡೆದಿದೆ! ನಾನೊಬ್ಬ ಬೈರಾಗಿಯಾಗಿ ಭಿಕ್ಷೆಬೇಡುತ್ತಾ ನಡೆದರೆ ನನ್ನ ಸುತ್ತ ಮುತ್ತಲೂ ಅಂತವರನ್ನೇ ಕಾಣುತ್ತಾಯಿದ್ದೇನೆ. ಅದೇನು ಬಿಕ್ಕೆಬೇಡುವವರ ರಾಜ್ಯವೋ ಏನೋ! ನನಗೆ ಸಿಕ್ಕಿದ ಒಂದು ಹಣ್ಣನ್ನು ಸುಲಿದು ತೊಗಟೆ ಬಿಸುಟರೆ ನಾನು ಹಣ್ಣು ತಿನ್ನುವಹೊತ್ತಿಗೆ ಆ ತೊಗಟೆ

ಗಾಗಿ ಎಷ್ಟೋ ಮಕ್ಕಳ ಒಂದು ಕದನವೇ ನಡೆಯುತ್ತಿದ್ದಿತು! ನಾರದಾ—ಸೊಗಸಾದ ತುಂಬಿದ ನೀರಿನ ಆ ರಾಜ್ಯದಲ್ಲಿ ದಾರಿದ್ರ್ಯವೂ ತುಂಬಿಹರಿಯುತ್ತಿದೆಯೊ ಎಂಬ ಸಂಶಯ ನನಗೆ ಬಲವಾಗಿದೆ!

**ನಾರದ**—ಹಾಗಾದರೆ ನಾನು ಅಂದು ಕಂಡ ಕೇರಳವೆಲ್ಲಿ? ಆ ಸೌಂದರ್ಯವೆಲ್ಲಿ?

**ತುಂಬುರ**—ಸೌಂದರ್ಯವು ಸಾಯಲಿ! ಆ ಹೊಲೆತನಕ್ಕೆ ಏನುಹೇಳಬೇಕು? ಅದರಿಂದಾಗಿ ಅಂತಹ ಬಡತನದಿಂದಾಗಿ ಅಲ್ಲಿಯ ಜನರಲ್ಲಿ ಆತ್ಮತೃಪ್ತಿಯಿಲ್ಲ. ತೃಪ್ತಿಯಿಲ್ಲದಿರುವುದರಿಂದಲೇ ಸಹನೆಯು ಕಳೆದುಹೋಗಿ ಮನಸ್ಸಿನ ಅಸೂಯೆಯು ಕೈಕಾಲುಬಿಟ್ಟು ಕೆದರಿದೆ. ಹೀಗಾಗಿ ಅಲ್ಲಿಯೊಂದು ಹೊಸ ಪಂಥವು ತೊಡಗಿದೆ!

**ನಾರದ**—ಏನದು? ಯಾರು ಅದರ ಪ್ರವರ್ತಕ?

**ತುಂಬುರ**—ಅದರ ಪ್ರವರ್ತಕರು ಯಾರೋ ನನಗೆ ತಿಳಿದಿಲ್ಲ. ಆದರೆ ಎಲ್ಲರೂ ಕೆಲಸಮಾಡದೆ ಕೆಲಸಮಾಡಿದವನಿಂದ ಪಾಲನ್ನು ಕೇಳತೊಡಗಿರುವರು.

**ನಾರದ**—ಅದು ಹೇಗೆ ಸಾಧ್ಯವೊ?

**ತುಂಬುರ**—ಅದು ಬಹಳ ಸುಲಭ ನೋಡು. ನೀನು ಕೆಲಸಮಾಡಿ ಹೊಟ್ಟೆ ತುಂಬಿಸುತ್ತಿದ್ದಾಗ ನಾನು ಬಂದು ಕೆಲಸಮಾಡದೆ ಹೇಳಲಿದ್ದೇನೆ ಎಲೋ! ನೀನು ಏಕೆ ಕೆಲಸಮಾಡುತ್ತಿದ್ದೀಯೊ? ಯಾರಿಗಾಗಿ? ಅವನಿಗಾಗಿ ನೀನು ದುಡಿದು ಅವನ ಹೊಟ್ಟೆಯು ತುಂಬುವುದಾದರೆ ನೀನು ಏಕೆ ದುಡಿಯಬೇಕು? ನೀನು ದುಡಿಯುವುದು ಬೇಡ—ನಾನೂ ದುಡಿಯುವುದಿಲ್ಲ. ಮತ್ತೆ ಅವನ ಹೊಟ್ಟೆ ಹೇಗೆ ತುಂಬುವುದೋ ನೋಡೋಣ! ಈ ತತ್ವ ಎಷ್ಟು ಸುಲಭ ನೋಡು! ಇದೇ ಸಮಾನತಾವಾದ!

**ನಾರದ**—ಈ ಮತದ ಪ್ರವರ್ತಕನಾರು? ಗುರು ಯಾರು?

**ತುಂಬುರ**—ನನಗಲ್ಲಿ ಯಾವ ಜಗದ್ಗುರುವೂ ಕಂಡು ಬಂದಿಲ್ಲ. ಎಲ್ಲರೂ ಅನುಯಾಯಿಗಳು. ಎಲ್ಲಿಂದಲೋ ಒಂದು ಕೆಂಪು ಬಾವುಟ ಎರವು ತಂದು ಹಿಡಿದು ಅಡ್ಡಾಡುತಿದ್ದಾರೆ. ಮತ್ತೆ ಕೆಲ ಕೆಲ ವೊಮ್ಮೆ ಕೆಲಕೆಲರು ಎತ್ತಲೋ ಹೋಗಿ ತಮ್ಮ ತಲೆಗಳನ್ನು ಇಂತಹ ಅಮೂಲ್ಯ ವಿಚಾರಗಳಿಂದ ತುಂಬಿಸಿ ಸಾಣೆ ಹಿಡಿಸಿಕೊಂಡು ಬರುತ್ತಾರಂತೆ!

**ನಾರದ**—ಅದೇಕೆ?

**ತುಂಬುರ**—ಅದೇಕೆಂದರೆ—ಇವರು ಅನುಯಾಯಿಗಳು ಮಾತ್ರ. ಆದುದರಿಂದ ಆದೇಶಕ್ಕಾಗಿ ಅವರು ಬೇರೆ ಕಡೆಗೆ ಹೋಗಿ ತಮ್ಮ ತಲೆಗೆ ಇದ್ದಲಿ ತುಂಬಿಸಬೇಕಾಗುತ್ತದೆ. ಆದುದರಿಂದಲೇ ಅವರು ಪರಸ್ಪರ ಬಾಂಧವ್ಯದ ಗೆಳೆಯರಾಗಿಲ್ಲ. ಆದರೆ ಕಮ್ರೇಡುಗಳಾಗಿದ್ದಾರೆ. ಇವರು ಆತ್ಮವನ್ನು ಆತ್ಮೀಯತೆಯಿಂದ ತಿಳಿದಿಲ್ಲ. ಬರೇ ಔಪಚಾರಿಕವಾದ ಸಮಾನತಾವಾದದಿಂದ.

**ನಾರದ**—ಹಾಗಾದರೆ ಅವರ ತಲೆಯಲ್ಲಿ ನಿಜವಾಗಿ ಏನಿದೆ?

**ತುಂಬುರ**—ಮೂರು ತಿಂಗಳುಗಳ ಬೋನಸ್ಸು—ಮಜೂರರಿಗೆ ಕಡಿಮೆ ಕೆಲಸ—ಹೆಚ್ಚು ಸಂಬಳ—ಮಜೂರರ ಹಕ್ಕು ಬಾಧ್ಯತೆಗಳ ಸೌಲಭ್ಯ—ಇಷ್ಟೆ! ಜನಸಂಖ್ಯೆಯು ಹೆಚ್ಚಿ ದಾರಿದ್ರ್ಯ ತುಂಬಿದ ದೇಶದಲ್ಲಿ ಇದು ಕೇಳಲು ಎಷ್ಟು ಹಿತವಾಗಿದೆ ಗೊತ್ತೆ? ಇದು ಯಾರಿಗೆ ಬೇಕಾಗಿಲ್ಲ? ಎಲ್ಲರೂ ಆ ಬಾವುಟದ ಅಡಿಯಲ್ಲಿ—

**ನಾರದ**—ಆ ಎರವುತಂದ ಬಾವುಟ?

**ತುಂಬುರ**—ಹೌದು. ಆ ಬಾಡಿಗೆ ತಂದ ಬಾವುಟ!

**ನಾರದ**—ಅವರೇಕೆ ಅವರದೇ ಬಾವುಟವನ್ನು ಕಂಡುಹಿಡಿದು ಮೇಲೇರಿಸಬಾರದು?

**ತುಂಬುರ**—ಆ ಮೆದುಳು ಪರದೇಶದ್ದಾದುದರಿಂದ ಅಂತಹ ಸ್ವತಂತ್ರ ವಿಚಾರವು ತಲೆಗೆ ಹತ್ತಲಿಲ್ಲ.

**ನಾರದ**—ಈ ಮತದವರಿಗೆ ಏನು ಹೆಸರು?

**ತುಂಬುರ**—ಕಮ್ರೇಡ್ ಕಮ್ಯುನಿಷ್ಟರು! ಹಾಗೆಂದು ಕರೆದುಕೊಳ್ಳಬೇಕೆಂದು ಆ ಕಡೆಯಿಂದ ಆಜ್ಞೆ ಬಂದಿದೆಯಂತೆ!

**ನಾರದ**—ಅದೂ ಆ ಬಾಡಿಗೆಯ ಬಾವುಟ—ತಲೆಯೊಂದಿಗೇನೇ?

**ತುಂಬುರ**—ಹಾ ಹಾಗೆಯೇಯಿರಬಹುದು. ಅಂತೂ ನಾನು ನೋಡಿದ ರೀತಿಯಲ್ಲಿ ಅವರ ಪಿಡುಗು ಬಹಳವಾಗಿ ಬೆಳೆದು ಹೋಗಿದೆ. ಎಷ್ಟೋ ತಡವೆ ನನಗೆ ತಿಳಿದ ವಿಷಯಗಳಿಂದ ಅವರು ತಾವು ಕೆಲಸಮಾಡದೆ ಕೆಲಸಮಾಡಿದ ಪುಣ್ಯಾತ್ಮರಿಂದ ಕಪ್ಪಕಾಣಿಕೆ ವಸೂಲುಮಾಡಿದುದೂಯಿದೆ!

**ನಾರದ**—ಇವರು ಯಾವ ನಿಷ್ಠರು?

**ತುಂಬುರ**—ನಿಷ್ಠರೋ ಅನಿಷ್ಠರೊ—ಅಂತೂ ಕಮ್ಯುನಿಷ್ಠರು—ಕಮ್ಯುನಿಷ್ಠರು!

**ನಾರದ**—ಹಾಗಾದರೆ ನಾನು ಕಂಡುಕೊಂಡ ಊರಿಗಿಂತಲೂ ನೀನು ಸುತ್ತಾಡಿದ ಊರು ಬಹಳ ಚೆಲೋದು! ನಮ್ಮಂತಹ ಸೋಮಾರಿ ಬೈರಾಗಿಗಳಿಗೆ ಹೇಳಿಸಿದ ಊರು!

**ತುಂಬುರ**—ಏಕೆ? ಅದರ ಮಲಯವಾತ ಈ ಕಡೆಯೂ ಬೀಸುತ್ತ ಬಂದಿದೆಯೆಂದು ಕೇಳಿದ್ದೇನೆ. ಅದಕ್ಕಾಗಿಯೇ ಅವರಿಗೆ ಆ ಕಡೆಯಿಂದ ಧಾರಾಳ ಹಣ ಬರುತ್ತಿದೆಯೆಂದೂ ಕೇಳಿದ್ದೇನೆ.

**ನಾರದ**—ಏಕೆ? ಯಾವ ಕಡೆಯಿಂದ?

**ತುಂಬುರ**—ಅದೇ—ಆ ತಲೆ ಮತ್ತು ಬಾವುಟವು ಬಂದ ಕಡೆಯಿಂದ ವಿಚಾರಕ್ಕಾಗಿ ಅಲ್ಲ—ಪ್ರಚಾರಕ್ಕಾಗಿ!

**ನಾರದ**—ಓ ಈಗ ತಿಳಿಯಿತು. ಬಾ ನಾವು ಕೊಂಚ ಆ ಕಟ್ಟೆಯ ಮೇಲೆ ಕುಳಿತು ದಣಿವಾರಿಸಿಕೊಳ್ಳೋಣ (ಮುಂದೆ ನೋಡಿ) ಅದು ಯಾರು ಈ ಕಡೆ ಬರುತಿದ್ದಾರೆ?

**ತುಂಬುರ**—ಯಾರೋ ದಾರಿಹೋಕರಿರಬಹುದು. (ಈ ಕಡೆ ನೋಡಿ) ಈ ಕಡೆಯಿಂದಲೂ ಯಾರೋ ಬರುತ್ತಿದ್ದಾರೆ. ಬಾ. ತುಸು ಸರಿದು ನಿಲ್ಲೋಣ. (ಆ ಕಡೆಯಿಂದ ಒಬ್ಬ ಮುಸಲ್ಮಾನ ಈ ಕಡೆ ಯಿಂದ ಒಬ್ಬ ಹಿಂದುವು ಬಂದು ಇದಿರಿದಿರು ಕೂಡಿ ಕ್ಷಣ ಕಾಲ ನಿಂತು)

**ಹಿಂದು**—ರಾಮ್ ರಾಮ್.

**ಮುಸಲ್ಮಾನ**—ರಹೀಂ ರಹೀಂ

**ಹಿಂದು**—ಕ್ಷೇಮವೇನು?

**ಮುಸಲ್ಮಾನ**—ಅಲ್ಲಾನ ಅನುಗ್ರಹದಿಂದ. ತಾವು?

**ಹಿಂದು**—ರಾಮನ ದಯೆಯಿಂದ. (ಇಬ್ಬರು ಎದೆ ಎದೆ ತಾಗಿಸಿಕೊಂಡು.)

**ಹಿಂದು**—ರಾಮ್ ರಾಮ್.

**ಮುಸಲ್ಮಾನ**—ರಹೀಂ ರಹೀಂ—(ಇಬ್ಬರೂ ಆ ಕಡೆ ಈ ಕಡೆ ತೆರಳುವರು)

**ನಾರದ**–ನೋಡಿದೆಯಾ ತುಂಬುರ! ಇದು ನಾನು ಕಂಡ ದೇಶದ ಸಂಪತ್ತು! ಆ ಮಹಾ ವ್ಯಕ್ತಿಯ ಅದ್ಭುತವಾದ ತತ್ವೋಪದೇಶ! ಇಂತಹ ಸಹನೆಯಿಂದಾಗಿ ದೇಶವು ಎಷ್ಟು ಸುಖ ಸಮೃದ್ಧವಾಗಿದೆ! ಜನಾಂಗಗಳು ಅಣ್ಣ ತಮ್ಮಂದಿರಂತೆ ಬಾಳಿ ಬದುಕಿವೆ! ಇದೇ ಆ ಮಹಾತ್ಮನ ಮಂತ್ರ ಶಕ್ತಿ! ನೋಡು—ಅದಾರು ಮತ್ತೆ ಈ ಕಡೆ ಬರುತಿದ್ದಾರೆ? (ತೆರೆಯಕಡೆ ನೋಡುವನು.)

**ತುಂಬುರ**--(ಆಶ್ಚರ್ಯದಿಂದ) ಅವರೇನು ಗಂಡಸರೋ? ಹೆಂಗಸರೋ?

**ನಾರದ**—ಯಾರೇ ಬರಲಿ. ನಾವು ಸ್ವಲ್ಪ ಮರೆಯಾಗಿ ನಿಂತು ನೋಡೋಣ. (ಎಂದು ಸರಿದು ನಿಲ್ಲುವರು)

(ಇಬ್ಬರು ಪಂಜಾಬಿ ತೊಡಿಗೆಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿನಿಯರ ಪ್ರವೇಶ. ಒಬ್ಬಳ ಕೈಯಲ್ಲಿ ಒಂದು ಚರ್ಮದ ಕೈಚೀಲ ಪುಸ್ತಕ—ಮತ್ತೊಬ್ಬಳ ಕೈಯಲ್ಲಿ ನಾಲ್ಕು ಪುಸ್ತಕಗಳು)

**ವನಜ**—ನೋಡೇ ಮಾಲಿನಿ. ನಾನು ಏನು ಮಾಡಲಿ ಹೇಳು? ನಮ್ಮ ಶಾಲೆಯಲ್ಲಿ ನಾಡದು ನನ್ನದು ಭರತನೃತ್ಯ ಹಾಕಬೇಕೆಂದು ಒತ್ತಾಯ ಮಾಡುತಿದ್ದಾರೆ.

**ಮಾಲಿನಿ**—ಚೆನ್ನಾಯಿತಲ್ಲ. ಯಾರು ಬೇಡವೆಂದರು? ಒಂದಿಗೆ ಸಂಗೀತವನ್ನು ಸೇರಿಸಿಬಿಡು. ನೀನೇನು ಹೇಳು—ಭಲೇ ಜಾಣೆ ಹುಡುಗಿ! ನಿನ್ನ ಸಂಗೀತ ನಾಟ್ಯವಿಲ್ಲದಿದ್ದರೆ ನಮ್ಮ ಶಾಲೆಯ ನಾಟಕ ಯಾರಿಗೂ ಒಗ್ಗುವುದೇಯಿಲ್ಲ.

**ವನಜ**—ಸಾಕೇ ಬಿಡು. ನೀನಾದರೆ ಹೊಲಿಗೆ ಹಾಕಿ ಕೆರಂ ಆಡಿ ಬಹುಮಾನ ಹೊಡೆದು ಬಿಡುತ್ತಿ. (ಜ್ಞಾಪಕಗೊಂಡು) ಓ ನೆನಪಾಯಿತು! ನಾಲ್ಕು ದಿನಗಳಿಂದಲೂ ಯೋಚಿಸುತ್ತಾಯಿದ್ದೇನೆ. ನೀನು ಆ ದಿವಸ ಹೇಳಿದ ಕಸೂತಿ ಅರ್ಧದಲ್ಲೇ ಮರೆತುಹೋಯಿತು. ಸ್ವಲ್ಪ ನೆನಪು ಕೊಡೆ (ಹೊಲಿಗೆ ತೆರೆದು ತೋರಿಸಿದಳು.)

**ಮಾಲಿನಿ**—ನಾನೇನು ಸೂಜಿದಾರ ಹಿಡಿದು ದಾರಿ ಮೇಲೆ ಪ್ರದರ್ಶನ ಮಾಡಬೇಕೆ?

**ವನಜ**—(ಹಿಂದಿರುಗಿ ನೋಡಿ) ಬೇಡ. ಬಾ! ಆ ಕಟ್ಟೆ ಮೇಲೆ ತುಸು ಕುಳಿತುಕೊಳ್ಳೋಣ. ನಿನಗೇನು ಅಷ್ಟು ಅವಸರ?

**ಮಾಲಿನಿ**—ನನ್ನ ಕೂಡೆ ನೂಲು ಎಲ್ಲಿದೆ? ಏಕೆ? ನಿನಗೇ ಸಂಜೆ ಮನೆಯ ಕಡೆ ಬರಬಹುದಲ್ಲ?

**ವನಜ**—ನೂಲಿಗೇನು ನಿನ್ನ ಚೀಲ ಜಪ್ತುಮಾಡಿದರೆ ಒಂದು ಹೊರೆ ಸಿಗಬಹುದು.

(ಚೀಲದಿಂದ ನೂಲು ಹೊರ ತೆಗೆದು ಇಬ್ಬರೂ ಅಲ್ಲಿ ಕುಳಿತು ಹೊಲಿಗೆ ನೋಡುವರು. ಆಗ ಕೈ ಚೀಲ ಕಟ್ಟೆಯಿಂದ ಕೆಳಗೆ ಬೀಳುವುದು)

**ಮಾಲಿನಿ**—ಏನು ಈಗ ತಿಳಿಯಿತಲ್ಲ?

**ವನಜ**—ಹಾ಼ ಸರಿ. ಇನ್ನು ಇದನ್ನೆಲ್ಲ ಮುಗಿಸಿ ಮತ್ತೆ ನಿನ್ನ ಮನೆಗೆ ಬರುತ್ತೇನೆ. (ಗಾಬರಿಯಿಂದ ಕೈ ಗಡಿಯಾರ ನೋಡಿ) ಯಾವು ದಕ್ಕೂ ಕೋಲೇಜಿಗೆ ಹೊತ್ತಾಯಿತಲ್ಲ! ಬಾ ಹೋಗೋಣ.

(ಚರ್ಮದ ಕೈ ಚೀಲವನ್ನು ಅಲ್ಲೇ ಬಿಟ್ಟು ಅವಸರದಿಂದ ಇಬ್ಬರೂ ಎದ್ದು ಹೊರಟು ಹೋಗುವರು. ನಾರದ ತುಂಬುರರು ಇದಿರು ಬಂದು)

**ತುಂಬುರ**--ನೋಡಿದೆಯೋ ನಾರದ?

**ನಾರದ**—ಓಹೋ! ಚೆನ್ನಾಗಿ ನೋಡಿರುವೆನಲ್ಲ? ಕಣ್ಣು ತುಂಬಾ!

**ತುಂಬುರ**--ಹೇಗಿದೆ?

**ನಾರದ**—ಹೇಗೇಯಿರಲಿ· ನಾನಂತೂ ಬಹಳ ಹಿಂದಿನ ಬೈರಾಗಿ. ಏನೂ ಉಪಯೋಗವಿಲ್ಲ!

**ತುಂಬುರ** - ಅದರಿಂದೇನಾಯ್ತು?

**ನಾರದ**—(ನಗುತ್ತ) ಆದುದರಿಂದಲೇ ಈಗಲೂ ಬೈರಾಗಿಯಾಗಿಯೇ ಇಲ್ಲಿ ನಿಂತಿದ್ದೇನೆ!

**ತುಂಬುರ**—ಅದಕ್ಕಾಗಿ ಈಗ ಬಹಳ ವ್ಯಥೆಯಾಗುತ್ತಿದೆಯೆ?

**ನಾರದ**—ಹೇಗೂ ಸಮವೆ! ನಾನೇನೂ ಭರತ ನಾಟ್ಯ ಕಲಿತಿಲ್ಲ. ಕೆರಂ ಆಡಿಲ್ಲ. ಕಸೂತಿ ಹಾಕಿಲ್ಲ. ಮತ್ತೆ ನನ್ನ ಈ ಬರೇ ಸೋರೆ ಬುರುಡೆಗೆ ಮೋಹಿಸಿ ಯಾರು ತಾನೇ ಬಂದಾರು? (ಕಟ್ಟೆಯ ಕಡೆ ನೋಡುತ್ತ) ನೋಡೊ! ನಮ್ಮ ಋಣಾನುಬಂಧಕ್ಕೆ ಆ ಚೀಲ ದೊರೆತು ಹೋಯಿತಲ್ಲ! (ಅದನ್ನು ತೆಗೆದು ನೋಡುವನು. ಒಳಗಡೆ ಕನ್ನಡಿ ಪೌಡರು ತುಟಿಯ ಕೆಂಬಣ್ಣ—ಒಂದು ಕಸೂತಿಯ ವಸ್ತ್ರ ನೂಲು ಸೂಜಿ ಇಸ್ಪೀಟು ಓಡಿ—ಇವಿಷ್ಟಿವೆ)

**ನಾರದ**—(ಅವನ್ನು ನೋಡಿ) ಇದೇನು ತುಂಬುರ! ನನಗೆ ತಿಳಿಯಲೊಲ್ಲದಲ್ಲ!

**ತುಂಬುರ**—ಏನೇಯಿರಲಿ, ನಿನ್ನ ಬಳಿಯಿರಿಸಿಕೊ! ಕೈಲಾಸದ ಕಡೆ ಹೋದಾಗ ಪಾರ್ವತಿಗೆ ಕೊಡಲು ಬೇಕಾದೀತು.

**ನಾರದ**—(ತುಂಟತನದ ನಗೆಯಿಂದ) ಓ ಸತ್ಯ! ಆ ಬೂದಿ ಮುಕ್ಕಣ್ಣನ ಹೆಂಡತಿ ಸ್ವಲ್ಪ ಇದರ ಸೊಗಸು ನೋಡಲಿ (ಕಸೂತಿಯನ್ನು ತೆಗೆದು) ಮತ್ತೆ ಇದು ಆ ಅಲಂಕಾರ ಪ್ರಿಯೆ ಲಕ್ಷ್ಮೀದೇವಿಗೆ ಕರವಸ್ತ್ರ! ಮತ್ತೆ ಇದೇನು ಮಹಾರಾಯ? (ಇಸ್ಪೀಟು ಓಡಿಯನ್ನು ಎತ್ತಿ ತೋರಿಸುವನು)

**ತುಂಬುರ**—(ನೋಡುತ್ತ) ಇದೇನೋ ನನಗಂತೂ ತಿಳಿಯದಪ್ಪ! ಇದು ಯಾವ ಭಾಷೆಯ ಬರಹ?

**ನಾರದ**—ಇದೇನು ಹಣೆಬರಹವೋ ನನಗೂ ತಿಳಿಯದು. ಆದರೆ (ಯೋಚಿಸಿ) ಆದರೆ ಇದನ್ನು ಸರಸ್ವತಿಗೇ ಕೊಟ್ಟು ಬಿಡಬಹುದು! ಅವಳೇ ಇದರ ನಿರ್ಣಯ ಮಾಡಿಕೊಳ್ಳಲಿ.

(ಹಿಂಗಡೆಯಿಂದ ಗದ್ದಲ ಕೇಳುವುದು)

ಸಿಗಲೇ ಬೇಕು! ಸಿಗಲೇ ಬೇಕು!

**ನಾರದ**—(ಬೆದರಿ) ಇದೇನು ಪಿಕಲಾಟ? ನಮ್ಮನ್ನಾರಾದರೂ ಪತ್ತೆಹಚ್ಚಿ ಹಿಡಿಯಲು ಬಂದಿರುವರೆ? ಎಲ್ಲಾ ಕಡೆಗಳಲ್ಲೂ ಗುಪ್ತ ಕಾವಲುಗಾರರು ಯಾರಾರನ್ನೋ ಹಿಡಿಯುತಿದ್ದಾರೆಂದು ವದಂತಿ ಕೇಳಿರುವೆನು. (ಪುನಃ ಗದ್ದಲ ಕೇಳುವುದು)

ಸಿಗಲೇ ಬೇಕು—ಸಿಗಲೇ ಬೇಕು!

**ತುಂಬುರ**—(ಕಿವಿಗೊಟ್ಟು ಜ್ಞಾಪಿಸಿಕೊಂಡು) ಸರಿ. ಈಗ ತಿಳಿಯಿತು. ಇದು ನಾನು ಕಂಡ ಪಿಕಲಾಟ! ಅಂಜಬೇಡ ನಾರದಾ. ನಿನ್ನ ಜೀವಕ್ಕೇನೂ ಅಪಾಯವಿಲ್ಲ.

**ನಾರದ**— (ತುಸು ಧೈರ್ಯದಿಂದ) ಅಪಾಯವಿಲ್ಲ ತಾನೆ? ಮತ್ತೆ ಏನಾದರೂ ಹಾನಿಯಾದರೆ ಆ ಬ್ರಹ್ಮಹತ್ಯಾದೋಷ ನಿನ್ನ ತಲೆಯಮೇಲೆ! ನಾನಂತೂ ಈಗಲೇ ಕೂಗಿ ಹೇಳಲಿದ್ದೇನೆ. ನಾನು ಬ್ರಾಹ್ಮಣ. ನನ್ನಗೊಡವೆಗೆ ಬರಬೇಡಿ—

**ತುಂಬುರ**—ಎಂದರೆ ಆಗ ನಿನಗೆ ಸಮಾಧಿಯಾದಂತೆಯೇ ಸರಿ! ಈ ಭೂಲೋಕದಲ್ಲಿ ಬ್ರಾಹ್ಮಣನ ತಲೆಗೆ ಬಹಳ ಬೆಲೆಯಿದೆಯೆಂಬುದು ನಿನಗಿನ್ನೂ ತಿಳಿಯದೇನೋ?

**ನಾರದ**—(ಕುತೂಹಲದಿಂದ) ತುಂಬುರಾ! ಹಾಗೆಂದರೇನು?

**ತುಂಬುರ**—ಹಾಗೆಂದರೆ ಈ ದಕ್ಷಿಣದೇಶದಲ್ಲಿ ರಾವಣನ ಮರಿಮಕ್ಕಳು ತುಂಬಾ ಇದ್ದಾರೆ ಎಂಬುದನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊ! ಆದರೆ ಇವರಂತೂ ನಾನು ಈಗತಾನೇ ಹೇಳಿದೆನಲ್ಲ—ಅವರೆ!

**ನಾರದ**—ಯಾರೋ ಮೂರಾಯ? ಆ ಅನಿಷ್ಟರೊ?

**ತುಂಬುರ**- ಹಾ೦ ಕಮ್ಯುನಿಷ್ಟರು!

**ನಾರದ**--ಅವರೇಕೆ ಇಲ್ಲಿಗೆ ಬರಬೇಕು?

**ತುಂಬುರ**—ಅದೊಂದು ಹಬ್ಬುವ ರೋಗ. ಅದು ಒಮ್ಮೊಂದೊಮ್ಮೆಗೆ ಎಲ್ಲೆಲ್ಲೂ ಕಂಡು ಬರಬಹುದು!

**ನಾರದ**—(ಅಂಜಿಕೆಯಿಂದ) ಹಾಗಾದರೆ ನಾವು ದಾರಿಬಿಟ್ಟು ತೊಲಗೋಣ. ಕೊನೆಗೆ ನಮಗೂ ಆ ಅಂಟುರೋಗ ಹತ್ತಿದರೆ ತೊಂದರೆಯಾದೀತು!

**ತುಂಬುರ**--ತೊಂದರೆ ಇನ್ನೊಬ್ಬರಿಗೆ—ನಮಗಲ್ಲ!

(ಇಬ್ಬರೂ ಅರ್ಧ ಮರೆಯಾಗುವರು. ಕೆಂಪು ಪತಾಕೆ ಹಿಡಿದು ಕೆಲವರ ಪ್ರವೇಶ)

**ಒಬ್ಬ**—ಮೂರು ತಿಂಗಳ ಬೋನಸ್ಸು ಸಿಗಲೇಬೇಕು!

**ಎಲ್ಲರೂ**—ಸಿಗಲೇ ಬೇಕು—ಸಿಗಲೇ ಬೇಕು!

**ಒಬ್ಬ**—ಜನತಾಯುದ್ಧಕ್ಕೆ ಸಹಾಯವು ಸಿಗಲೇ ಬೇಕು!

**ಎಲ್ಲರೂ**—ಸಿಗಲೇ ಬೇಕು—ಸಿಗಲೇ ಬೇಕು!

(ಪಕ್ಕದಲ್ಲಿ ನಿಂತಿದ್ದ ನಾರದ ತುಂಬುರರನ್ನು ಕಂಡು)

**ಒಬ್ಬ**—ಏಕೆ ಅಡಗಿಕೊಂಡಿದ್ದೀರಿ? ಬನ್ನಿರಯ್ಯ! ನಿಮಗೂ ಸಿಕ್ಕಿಯೇ ಸಿಕ್ಕುತ್ತದೆ. ನಮಗೂ ಇಂತಹ ಸೋಮಾರಿಗಳು—ಮೈಗಳ್ಳರು ಬೇಕಾಗಿದ್ದಾರೆ. ಬನ್ನಿರಯ್ಯ ಬನ್ನಿ! (ಇಬ್ಬರನ್ನು ಈ ಕಡೆ ಸೆಳೆದು ಕೈಯಲ್ಲಿ ಕೆಂಪು ಪತಾಕೆ ಕರಪತ್ರಗಳನ್ನುಕೊಟ್ಟು) ಮೂರು ತಿಂಗಳ ಬೋನಸ್ಸು ಸಿಗಲೇಬೇಕು—

**ಎಲ್ಲರೂ**--ಸಿಗಲೇ ಬೇಕು—ಸಿಗಲೇ ಬೇಕು!

**ನಾರದ**—(ಮೆಲ್ಲನೆ ತುಂಬುರನೊಡನೆ) ಕೆಟ್ಟಿತಲ್ಲ ಕೆಲಸ! ಈಗೇನು ಮಾಡೋದು?

**ತುಂಬುರ**—ಏನೂ ಮಾಡಬೇಕಾಗಿಲ್ಲ. ಏನೂ ಮಾಡದೇನೇ ಹೊಟ್ಟೆ ತುಂಬಿಸಿಕೊಳ್ಳೋಣ.

(ಎಲ್ಲರೂ ಕೂಗುತ್ತ ತೆರಳುವರು)

**ಅಂಕ ೧** **ದೃಶ್ಯ ೨ ಬೀದಿ**

(ನಾರದ ತುಂಬುರರ ಪ್ರವೇಶ)

**ನಾರದ**—ಅಂತೂ ಆ ಪಿಶಾಚಿಗಳ ಕೈಯಿಂದ ಪಾರಾಗಬೇಕಾದರೆ ಸಾಕು ಸಾಕಾಯಿತಪ್ಪ! (ಎಂದು ಉಸಿರು ಬಿಡುವನು.)

**ತುಂಬುರ**—ಆದರೂ ಇಷ್ಟು ಲಾಭ ಪ್ರಾಪ್ತಿಯಾಯಿತಲ್ಲ! ಸಾಕು. (ಪತಾಕೆ ಕರಪತ್ರಗಳನ್ನು ತೋರಿಸುತ್ತ) ಇವುಗಳನ್ನೆಲ್ಲ ನಮ್ಮ ದೇವಲೋಕ ದತ್ತಕಡೆ ತೆಗೆದುಕೊಂಡು ಹೋಗೋಣ.

**ನಾರದ**—ಹಾಂ ಸರಿ. (ಯೋಚಿಸಿ ತುಂಟತನದ ನಗೆಬೀರಿ) ತುಂಬುರ! ನಾವು ಈ ಭೂಲೋಕದಲ್ಲಿ ಅಡ್ಡಾಡಿ ಏನು ಗಳಿಸಿದಂತಾಯಿತು?

**ತುಂಬುರ**—(ಜೋಳಿಗೆ ತೋರಿಸುತ್ತ) ಇವೇ ಎಲ್ಲ! ಪಾರ್ವತಿಗೆ ಈ ಚರ್ಮದ ಚೀಲ. ಶಚೀದೇವಿಗೆ ಈ ಸಿಗರೇಟು. ಸರಸ್ವತಿಗೆ ಇಸ್ಪೀಟು ಪಿಡಿ. ಮತ್ತೆ ನಮ್ಮ ಮಹಾಲಕ್ಷ್ಮಿಗೆ ಕಸೂತಿ!

**ನಾರದ**—ಸಾಲದು, ಇವಿಷ್ಟೇ ಸಾಲದು. ಇದಕ್ಕಿಂತಲೂ ಹೆಚ್ಚಿನದು ನಡೆಯಬೇಕಾಗಿದೆ. ಅಲ್ಲವಾದರೆ ನಮ್ಮ ಹೆಸರಿಗೆ ಬೆಲೆಯಿಲ್ಲ ವಾದೀತು !

**ತುಂಬುರ**—ಹಾಗಾದರೆ ಈಗ ಪುನಃ ಏನುಮಾಡಬೇಕು ಎಂದೆನ್ನುವೆ?

**ನಾರದ**—ಮತ್ತೇನಿಲ್ಲ. ಈ ಕರಪತ್ರಗಳನ್ನು ಜತನವಾಗಿಟ್ಟುಕೊಂಡು ದೇವಲೋಕಗಳಲ್ಲಿ ಪ್ರಚಾರಗೊಳಿಸಬೇಕಾಗಿದೆ.

**ತುಂಬುರ**--(ಆಶ್ಚರ್ಯದಿಂದ) ಯಾವ ಸಲುವಾಗಿ?

**ನಾರದ**--(ಹುಸಿನಗುತ್ತ) ಹಿಂದೊಮ್ಮೆ ಈ ನಾರದನ ಗರ್ವಭಂಗ ಮಾಡಿದುದು ನೆನಪಿದೆಯೆ?

**ತುಂಬುರ**—ಹೋ ಚೆನ್ನಾಗಿ ನೆನಪಿದೆ! ಆ ಹತ್ತುಸಾವಿರ ಮಕ್ಕಳನ್ನು ತೂಗಿ ತೂಗಿ—

**ನಾರದ**—ತೂಗಿ ತೂಗಿ ಈ ನಾರದನ ತೋಳುಗಳೆಲ್ಲಾ ಬಿಗಿದು ಬಂದಿವೆ. ಅದರ ಪರಿಹಾರಾರ್ಥವಾಗಿ ಈಗ—

**ತುಂಬುರ**—ಈಗ ಏನುಮಾಡಬೇಕೆಂದಿರುವೆ?

**ನಾರದ**-ಈ ತೋಳುಗಳನ್ನು ಸ್ವಲ್ಪ ಸಡಿಲು ಬಿಡಬೇಕೆಂದಿರುವೆನು. ಕೈಲಾಸದ ತುದಿಯಲ್ಲಿ ಪತಾಕೆಯೂರಿ ಆ ತ್ರಿಮೂರ್ತಿಗಳ ಗರ್ವವನ್ನು ನಾಶಮಾಡಬೇಕೆಂದಿರುವೆನು.

**ತುಂಬುರ**—ಅಲ್ಲಿಗೆ ನಿನ್ನ ಹೆಸರು ಸಾರ್ಥಕವಾದಂತಾಯಿತು.

**ನಾರದ** ಹೌದು. ಈ ಮೂರು ಸಾವಿರ ವರ್ಷಗಳಿಂದಲೂ ಈ ನಾರದನಿಗೆ ತನ್ನ ಕೈ ತೋರಿಸಲು ಸಂದರ್ಭವೇ ಸಿಗಲಿಲ್ಲ. ಹಾಗೆ ಸಂದರ್ಭವು ಸಿಕ್ಕಿದಾಗ ಅದನ್ನು ಬಿಟ್ಟು ಕೊಡಲು ನಾರದನು ಸಿದ್ಧನಿಲ್ಲ. ನೋಡು ಈ ಜೋಳಿಗೆಯೊಳಗಣ ವಸ್ತುಗಳಿಂದಲೇ ಗಾರುಡಿಗನಂತೆ ಏನೆಲ್ಲ ಮಾಡಲಿರುವೆನು ಗೊತ್ತೆ? ಇಂದ್ರನ ಅಹಂಕಾರವು ಕಳಚಿ ಬೀಳಬೇಕು. ಈಶ್ವರನ ತಾಂಡವ ವಿತಂಡವಾಗಬೇಕು. ಬ್ರಹ್ಮನ—

**ತುಂಬುರ**—ಬ್ರಹ್ಮನು ಬಾಯಿಬಾಯಿ ಬಿಡಬೇಕು!

**ನಾರದ**—(ನಗುತ್ತ) ಹೂ ಹಾಗೇನೇ! ವಿಷ್ಣುವು ಲಕ್ಷ್ಮಿದೇವಿಯನ್ನು ಕರೆದುಕೊಂಡು ದೇಶಾಂತರಕ್ಕೆ ಹೋಗಬೇಕು! ಹೇಗಿದೆ ಈ ಸಂದರ್ಭ?

**ತುಂಬುರ**--ನಾರದಾ ಬಹಳ ಚಲೋದು ಬಹಳ ಚಲೋದಿದೆ! ಇದರಲ್ಲಿ ನಾನು—

**ನಾರದ**—ನಿನ್ನ ಸಹಾಯ ಅಗತ್ಯವಾಗಿಬೇಕು. ತಂಬೂರಿ ಇಲ್ಲದೆ ಹೋದರೆ ನನ್ನ ಪಿಕಲಾಟದ ಬುಡುಬುಡುಕೆ ಹೇಗೆ ನಡೆಯಬೇಕು? ಅಲ್ಲಿ ಅಮೃತ ಕುಡಿದು ಸೊಕ್ಕಿದ ದೇವತೆಗಳಿಗೆ ಒಂದು ಗುಟುಕು ಉಪ್ಪು ನೀರು ಕುಡಿಸಬೇಕು. ಬಾ ಹೋಗೋಣ. ನಮ್ಮ ಠಾವು ಸೇರುವ ಮುಂಚಿತವಾಗಿ ಆ ಮಹಾತ್ಮನನ್ನು ಕಂಡು ಆವನ ಕಾರ್ಯಗಳಿಗೆ ಶುಭ ಕಾಮನೆಯನ್ನು ಹಾರಯಿಸಿ ಬರೋಣ.

ಜಗದೋದ್ಧರಣ ಭವಭಯ ಕಾರಣ
ನಾರಾಯಣ ಗುಣಪೂರ್ಣ
ವಂದಿತ ಭಕ್ತ ಮಹೋದಯ ಕಾರಣ
ಇಂದಿರಾರಮಣ ದಯಾಭರಣ—

**ತುಂಬುರ**—ಸರ್ವ ಧರ್ಮ ಸುಖ ಸಾಧನ ನೀನೇ
ನೀನೇ ಸಜ್ಜನ ಹಿತ ವಿತರಣಾ—ನಾರಾಯಣ
(ಇಬ್ಬರೂ ಹೋಗುವರು)

(ದೇವ ಲೋಕದಲ್ಲಿ ಇಂದ್ರನು ಶಚಿಯೊಂದಿಗೆ ಸುಖಾಸೀನನಾಗಿರುವನು. ಮುಂಗಡೆ ಅಪ್ಸರೆಯರ ಗಾನ ನರ್ತನವಾಗುವುದು. ದೇವತೆಗಳು ಅಮೃತ ಪಾನ ಮಾಡುತ್ತ ಸುತ್ತಲೂ ಕುಳಿತಿರುವರು. ಅಪ್ಸರೆಯರು ಆಗಿಂದಾಗ ಅಮೃತ ತುಂಬುತಿರುವರು.)

**ಇಂದ್ರ**—(ತಲೆದೂಗುತ್ತ) ಹೂಂ ನಡೆಯಲಿ ನರ್ತನವು. ನಡೆಯಲಿ. ದೇವಲೋಕದಲ್ಲಿ ಅಮೃತಕ್ಕೆ ಬಡತನವು ಬಂದಿಲ್ಲ, ಎಂದಿಗೂ ಬರುವಂತಿಲ್ಲ. ಅಪ್ಸರೆಯರ ಸೌಂದರ್ಯಕ್ಕೆ ಚ್ಯುತಿಯೂಬರುವಂತಿಲ್ಲ. ಇವೆರಡರ ಸಮ್ಮೇಳನವೇ ಸ್ವರ್ಗ ಸುಖ! ಇದರ ಸರ್ವಾಧಿಪತಿ ನಾನು—ಇಂದ್ರ—ದೇವೇಂದ್ರ! (ಒಂದು ಗುಟುಕು ಅಮೃತ ಕುಡಿಯುವನು)

**ವರುಣ**—ಅದೂ ಅಲ್ಲದೆ ಭೂಲೋಕದವರಿಂದ ದೇವತೆಗಳು ಸೋಮರಸವನ್ನು ಹೊಂದುವ ಆಶೆಯೇ ಇಲ್ಲ.

**ಅಗ್ನಿ**—ಈಗ ಎರಡುವರೆ ಸಾವಿರ ವರ್ಷಗಳಿಂದಲೂ ಅಲ್ಲಿ ಯಜ್ಞವು ನಡೆದಿದ್ದರಲ್ಲವೆ ಸೋಮರಸ?

**ವರುಣ**—ಅಂದು ಶ್ರಾವಸ್ತಿಯಲ್ಲಿ ಬುದ್ಧದೇವನು ಒಂದು ಮೇಕೆ ಮರಿಯ ಜೀವಕ್ಕಾಗಿ ತನ್ನ ಜೀವದ ಹಂಗುತೊರೆದು ಮುಂದೆ ಬಂದಂದಿನಿಂದ ಈ ತನಕವೂ ಭೂಲೋಕದಲ್ಲಿ ಪಶುಯಜ್ಞವು ನಾಮಾವಶೇಷವಾಗಿದೆ!

**ಶಚೀದೇವಿ**—ಆದರೂ ನಮಗೆ ಅಕ್ಷಯ ಪಾತ್ರದ ಅಮೃತವು ಪರಿಪೂರ್ಣವಾಗಿ ಇದ್ದೇ ಇದೆಯಲ್ಲ!

**ಇಂದ್ರ**—ಆದುದರಿಂದಲೇ ನಮ್ಮ ಸ್ವರ್ಗಕ್ಕೆ ಬರಗಾಲವಿಲ್ಲ. ನಮ್ಮ ಸುಖಕ್ಕೆ ಹಾನಿಯಿಲ್ಲ. ಅಪ್ಸರೆಯರೇ! ಸಾಗಲಿ ನಿಮ್ಮ ನೃತ್ಯ ಭಂಗಿ!

(ನೃತ್ಯದ ಅನಂತರ ಎಲ್ಲರೂ ಅಮೃತ ಪಾನಮಾಡಿ ಅಮಲಿನ ಗುಂಗಿನಲ್ಲಿರುವಾಗ—ನಾರದನ ಪ್ರವೇಶ)

**ನಾರದ**—ಭಕ್ತಾನಾಂ ಭವಬಂಧ ವಿದೂರಂ
ನಿತ್ಯಾನಂದಂ ನೀರಜನೇತ್ರಂ
ವ್ಯಕ್ತಾವ್ಯಕ್ತಂ ಭಯ ಶಮಿತಾರಂ
ವಂದೇಹಂ ವಸುದೇವ ಕುಮಾರಂ—
ಪ್ರಭೋ ನಾರಾಯಣ—ನಾರಾಯಣ
(ಮುಂದೆ ನೋಡಿ ಕೈಯೆತ್ತಿ) ದೇವೇಂದ್ರನಿಗೆ ಜಯವಾಗಲಿ!

**ದೇವೇಂದ್ರ**—(ಶಚಿಯೊಡನೆ ಎದ್ದು ನಿಂತು) ದೇವರ್ಷಿಗಳಿಗೆ ಅಭಿವಂದಿಸುವೆನು. ಹೀಗೆ ಸುಖಾಸೀನರಾಗಬೇಕು. (ತಾನೂ ಆಸೀನನಾಗುತ್ತ) ಏನು ಬಹಳ ದಣಿದು ಬಂದಂತಿದೆ? ತಿಲೋತ್ತಮೆ! ಪೂಜ್ಯ ಮಹರ್ಷಿಗಳಿಗೆ ಅಮೃತಪಾನವನ್ನು ಮಾಡಿಸು. ಸ್ವರ್ಗಲೋಕಕ್ಕೆ ಮಹರ್ಷಿಗಳ ಸಂದರ್ಶನವಾಗದೆ ಬಹಳ ಸಮಯವಾದಂತಿದೆ. ಅವರ ಸೇವೆಯಿಂದಾಗಿ ನಮ್ಮ ಸ್ವರ್ಗ ಸುಖಗಳು ಪಾವನವಾಗಲಿ. ನಮ್ಮ ಅಮೃತ ಕಲಶವು ಪವಿತ್ರವಾಗಲಿ!

**ನಾರದ**—(ನಿವಾರಿಸುತ್ತ) ಬೇಡ ಬೇಡ! ನಮ್ಮಂತಹ ಬಡ ಬೈರಾಗಿಗಳಿಗೆ ಇಂತಹ ರಾಜೋಪಚಾರಗಳೇಕೆ? ಅದೂ ಅಲ್ಲದೆ ಈಗ ಹಲವು ತಿಂಗಳುಗಳಿಂದ ಅಂತಹ ರಾಜಭೋಗಗಳನ್ನು ಬಿಟ್ಟು ಅಮೃತದ ಒಂದು ಬಿಂದುವನ್ನಾದರೂ ಸ್ಪರ್ಶಿಸದೆ—

**ಇಂದ್ರ**—(ಆಶ್ಚರ್ಯದಿಂದ) ಮಹರ್ಷಿಗಳ ಬಯಕೆಗೆ ಅಂತಹ ಬರಗಾಲ ಬರಲು ಕಾರಣವೇನು? ಮೂವತ್ತುಮೂರು ಕೋಟಿ ದೇವತೆಗಳ ಕೂಡೆ ಈ ಅಕ್ಷಯ ಕಲಶವಿದ್ದೂ ಅಸಾರ್ಥಕವಾದಂತಿದೆ!

**ಶಚಿ**— ಮಹರ್ಷಿಗಳು ಎಲ್ಲೋ ಪಾತಾಳ ಲೋಕದಲ್ಲಿ ಸುಳಿದಾಡುತ್ತಿದ್ದಂತೆ ಕಂಡು ಬರುತ್ತದೆ. ಅದಲ್ಲವಾದರೆ ಅವರಿಗೆ ಇಂತಹ ದುರ್ದೈವವು ಬಂದೊದಗುತ್ತಿದ್ದಿಲ್ಲ.

**ನಾರದ**— ಪಾತಾಳವಲ್ಲ— ಭೂತಳದಲ್ಲಿ ಸಂಚರಿಸುತ್ತಿದ್ದೆನು.

**ಶಚಿ**— ಹಾಗಾದರೆ ಮದಿರಾ ವಿಲಾಸಿಗಳಾದ ಆ ಸೋಮಪಾಯಿಗಳ ದೇಶದಲ್ಲಿ ಮಹರ್ಷಿಗಳಿಗೆ ಇಷ್ಟಾರ್ಥವು ಪೂರ್ತಿಯಾಗಲೇಬೇಕಿದ್ದಿತು.

**ವರುಣ**— ಸೋಮಪಾನವು ಅಲ್ಲಿಂದ ನಮ್ಮತ್ತ ಕಡೆ ತಲುಪದೆ ಎಷ್ಟೋ ಶತಮಾನ ಕಳೆದಂತಿದೆ.

**ಅಗ್ನಿ**—ಅಲ್ಲಿ ಧರ್ಮವೇ ನಾಶವಾಗಿದೆ. ಕಲಿಯ ಮಹಾತ್ಮ್ಯೆ!

**ಶಚಿ**— ಆದರೂ ಮದಿರೆಯು ಮುನಿವರ್ಯರ ಉದ್ಧಾರಕ್ಕೆ ಮುಂದೆ ಬಂದಿರಬಹುದು.

**ನಾರದ**—(ಕಿವಿಮುಚ್ಚಿಕೊಂಡು) ಶಾಂತಂ ಪಾಪಂ—ಶಾಂತಂ ಪಾಪಂ!

**ಇಂದ್ರ**— ಅದೇನು ಅಂತಹ ಸಂದರ್ಭ?

**ಅಗ್ನಿ**— ನಾರದರು ಭೂಸಂಚಾರದಿಂದಾಗಿ ನಿರ್ವೃತರಾದಂತಿದೆ.

**ನಾರದ**— ಹೌದು. ಭೂಲೋಕದವರು ಎಂತು ಒಬ್ಬ ಮಹಾತ್ಮನಿಗಾಗಿ ಸೋಮಪಾನವನ್ನು ತ್ಯಾಜ್ಯಗೊಳಿಸಿರುವರೋ ಅಂತೆಯೇ ಮತ್ತೊಬ್ಬ ಮಹಾತ್ಮನಿಗಾಗಿ ಮದಿರೆಯನ್ನೂ ಸಂಪೂರ್ಣವಾಗಿ ಬಹಿಷ್ಕರಿಸಿರುವರು.

**ಇಂದ್ರ**—(ಆಶ್ಚರ್ಯದಿಂದ) ಏನು? ಅಮೃತವನ್ನು?

**ನಾರದ**— ಮನುಷ್ಯರ ವಿಚಾರಶಕ್ತಿಯು ಇಂದು ಅಪಾರವಾಗಿದೆ. ಕ್ರಿಯಾಶಕ್ತಿಯು ಅಮೋಘವಾಗಿದೆ!

**ಇಂದ್ರ**— ಆದರೆ ನಮಗೆ ಭೀತಿಯಿಲ್ಲ. ಯಾವನಾದರೊಬ್ಬ ನೂರು ಅಶ್ವಮೇಧಯಾಗವನ್ನು ಮಾಡಿ ನಮ್ಮ ಪಟ್ಟಕ್ಕೆ ಬರುವನೆಂಬ ಭಯವಿಲ್ಲ ತಾನೆ!

**ಶಚಿ**—(ಎಣಿಸಿ ಭೀತಿಯಿಂದ) ಹಾ–ಆ ನಹುಷನ ನೆನಪು ಇನ್ನೂ ನನ್ನ ಮನಸ್ಸಿನಿಂದ ಮಾಸಿಲ್ಲ!

**ನಾರದ**—ಬೇಡ ಬೇಡ. ಸದ್ಯ ಅಂತಹ ಭೀತಿಯೇ ಬೇಕಾಗಿಲ್ಲ. ಮಾನವರು ಸ್ವರ್ಗಸುಖವನ್ನೇನು? ಎಲ್ಲಾ ಸುಖಗಳನ್ನು ತುಚ್ಛೀಕರಿಸಿದ್ದಾರೆ!

**ಇಂದ್ರ**—(ಸಾಕೂತವಾಗಿ) ಏನು? ಹಾಗಾದರೆ ಎಲ್ಲರೂ ತ್ಯಾಗಿಗಳಾಗಿ ಅಡವಿ ಸೇರಿ ತಪಸ್ಸಿಗೆ ತೊಡಗಿರುವರೆ? (ಆಶಂಕೆಯಿಂದ ಅಪ್ಸರೆಯರ ಮುಖನೋಡುವನು)

**ರಂಭೆ**—ದೇವರಾಜರ ಅಪ್ಪಣೆಯಾಗಲಿ. ನಾವು ಈಕ್ಷಣವೇ ಭೂಲೋಕಕ್ಕೆ ತೆರಳಿ ಅವರ ತಪಸ್ಸನ್ನು ಕೆಡಿಸಿ ಬರುವೆವು. ಹುಲು ಮಾನವರಿಗಾಗಿ ಅಂಜಬೇಕಾಗಿಲ್ಲ.

**ನಾರದ**—(ನಗುತ್ತ) ಬೇಕಾಗಿಲ್ಲ. ಇಂದಿನ ಮಾನವ ವರ್ಗಕ್ಕೆ ಈ ಅಪ್ಸರೆಯರ ರೂಪ ಸೌಂದರ್ಯದ ಅಗತ್ಯವು ಇಲ್ಲವೇಯಿಲ್ಲ!

**ಅಪ್ಸರೆಯರು**—(ಉಪಹಾಸದಿಂದ) ನಾರದರ ಅತಿಶಯೋಕ್ತಿ!

**ನಾರದ**—ಏಕೆ? ನಾನು ತುಂಬುರನೂ ಈಗ ತಾನೇ ಭೂಲೋಕ ಸಂಚಾರ ತೀರಿಸಿ ಬರುತಿದ್ದೇವೆ. ಭೂಮಿಯು ಸ್ವರ್ಗವಾಗಿದೆ. ಅಂತೆಯೇ ಸ್ವರ್ಗವು—

**ಇಂದ್ರ**—ಏನು? ಅಮೃತವನ್ನು ಬಿಟ್ಟು!

**ಅಗ್ನಿ**—ಯಜ್ಞಯಾಗಾದಿಗಳನ್ನು ಬಿಟ್ಟುಕೊಟ್ಟು!

**ವರುಣ**—ಸೋಮಪಾನವನ್ನು ತೊರೆದೂ!

**ರಂಭೆ**—(ವೈಯಾರದಿಂದ) ನಾವು ಯಾವನನ್ನೂ ಸುಖಿಯನ್ನಾಗಿ ಮಾಡಲು ಭೂಲೋಕಕ್ಕೆ ತೆರಳಿಲ್ಲ.

**ನಾರದ**—(ನಿರ್ಧಾರವಾಗಿ) ಆದುದರಿಂದಲೇ ಭೂಮಿಯು ಸ್ವರ್ಗವಾಗಿದೆ!

**ಎಲ್ಲರೂ**—(ನಗುತ್ತಾ) ಅಸಂಬದ್ಧ—ಅಸಂಬದ್ಧ!

**ನಾರದ**—ಎರಡುವರೆ ಸಾವಿರ ವರ್ಷಗಳ ನಂತರ ಭರತಖಂಡವು ಮತ್ತೊಬ್ಬ ದಿವ್ಯ ಪುರುಷನ ನೆಲೆಬೀಡಾಗಿದೆ!

**ಇಂದ್ರ**—ಯಾರು ಈಶ್ವರನೆ?

**ಅಗ್ನಿ**—ಅಥವಾ ವಿಷ್ಣುವೆ? ಇರಲಾರದು. ವಿಷ್ಣುವಿಗೆ ಈ ಕಲಿಯುಗದಲ್ಲಿ ಅವತಾರವಿಲ್ಲ.

**ನಾರದ**—ಯಾರೂ ಅಲ್ಲ. ಆದರೆ ಮನುಷ್ಯನೊಬ್ಬನು ಮನುಷ್ಯನಾಗಿ ಮುಂದೆ ನಿಂತಿರುವನು!

**ಇಂದ್ರ**—(ಉಪಹಾಸವಾಗಿ) ಅಷ್ಟೆ ತಾನೆ!

**ನಾರದ**—ಅಷ್ಟೇ ಅಲ್ಲ. ಆ ಮನುಷ್ಯತ್ವವು ಸ್ವರ್ಗಕ್ಕೂ ಮೀರಿದೆ. ಕಾರಣ ಅಮೃತ ಪಾನದ ಅಮಲು ಅಲ್ಲಿ ಹತ್ತಿರುವುದಿಲ್ಲ.

**ವರುಣ**—ಉಶ್ಯ್! (ಮುಖ ತಿರುಗಿಸುವನು.)

**ನಾರದ**—ಅಪ್ಸರೆಯರ ಗುಂಗು ಅಲ್ಲಿ ಊರ್ಜಿತವಾಗಿರುವುದಿಲ್ಲ.

**ಅಪ್ಸರೆಯರು**—(ತಾತ್ಸಾರವಾಗಿ) ಏನು ಮಾತು? ಹುಡುಗಾಟಿಕೆ!

**ನಾರದ**—ಧರ್ಮವು ಅಲ್ಲಿ ದೌಲತ್ತಿಗಾಗಿ ಅಲ್ಲ—ಸೇವೆಗಾಗಿ ಮೂರ್ತಿಗೊಂಡಿದೆ!

**ಅಗ್ನಿ**—ನಾರದರೇ! ನೀವು ಯಾರನ್ನು ಈ ರೀತಿಯಾಗಿ ವರ್ಣಿಸುತ್ತಿರುವಿರೋ ಅದನ್ನು ಕೇಳಿ ನಮಗೆ ನಗೆ ಬರುತ್ತಿದೆ! (ಎಲ್ಲರೂ ನಗುವರು)

**ಶಚಿ**-(ಕನಿಕರವಾಗಿ) ಮಹರ್ಷಿಗಳಿಗೆ ಕೊಂಚ ಅಮೃತವನ್ನಾದರೂ ಕುಡಿಸಬಾರದೆ?

**ನಾರದ**-(ತುಸು ಕೋಪದಿಂದ) ದೇವತೆಗಳೆ—ನಿಮಗೆ ಇದರ ಅರ್ಥವಾಗಬೇಕಾದರೆ ನಿಮ್ಮ ಅಮೃತದ ಅಮಲು ಇಳಿಯಬೇಕಾಗಿದೆ. ಅಪ್ಸರೆಯರ ಸೌಂದರ್ಯವು ನಿಯಮಿತವಾಗಬೇಕಾಗಿದೆ!

**ಇಂದ್ರ**—ಹೋಗಲಿ. ಮಹರ್ಷಿಗಳಿಗೆ ಕೋಪ ಬಂದಂತಿದೆ. (ಮಾತು ತಿರುಗಿಸುತ್ತಾ) ಮತ್ತೆ ತಾವು ಆ ದೇಶದಲ್ಲಿ ಕಂಡ ವಿಚಾರಗಳನ್ನು ಸ್ವಲ್ಪ ನಿರೂಪಿಸೋಣಾಗಲಿ.

**ಶಚಿ**—ಭೂಲೋಕದ ನಮ್ಮ ಸಂಬಂಧವು ಕಡಿದು ಅಲ್ಲಿಯ ಭಗಿನಿಯರ ವಿಚಾರವೇ ನಮಗೆ ತಿಳಿಯದಿದೆ.

**ನಾರದ**—ವಿಚಾರವೇನು? ಅಲ್ಲಿಯ ಭಗಿನಿಯರೆಲ್ಲಾ ತಾರೆಯರಾಗಿ ಮಿನುಮಿನುಗುತಿದ್ದಾರೆ!

**ಶಚಿ**—(ಕುತೂಹಲದಿಂದ) ಎಂದರೆ? ತ್ರಿಶಂಕು ಸ್ವರ್ಗವೆ?

**ನಾರದ**—ಭೂಲೋಕವಲ್ಲಿ ಕರ್ಮವು ಜಾಗ್ರತವಾಗಿ ಸ್ವರ್ಗದಲ್ಲಿ ಸಿಗಲಾರದ ಉಪಭೋಗಗಳು ಸಿದ್ಧವಾಗಿವೆ. ಇದಕ್ಕೆ ಈ ದೇವತೆಗಳೇ ಸಾಕ್ಷಿ! ಅಂತೆಯೇ ಅಲ್ಲಿಯ ಭಗಿನಿಯರು ನಿಜರೂಪದಿಂದ ಮಾತ್ರವಲ್ಲ ಛಾಯಾರೂಪದಿಂದಲೂ ಶಾಶ್ವತರಾಗಿ ಮನಸ್ಸನ್ನು ಅಪಹರಿಸಿದ್ದಾರೆ. ಮತ್ತೆ ನಿಮ್ಮ ಅಪ್ಸರೆಯರ ಮಾತೆಲ್ಲಿ? ಈ ಅಪ್ಸರೆಯರು ಯಾರಿಗೆ ಬೇಕಾಗಿದ್ದಾರೆ? ಇವರು ಭೂಲೋಕಕ್ಕೆ ಹೋವರೆ ಅಲ್ಲಿ ಕಾರಾಗೃಹ ಸೇರಬೇಕಾದೀತು!

**ಶಚಿ**— (ಉದಾಸಳಾಗಿ) ಮುನೀಂದ್ರರು ಸುಳ್ಳುಹೇಳುವಂತಿಲ್ಲ. ಆದುದರಿಂದ ಎಲ್ಲವನ್ನೂ ನಂಬಿ ಒಪ್ಪಬೇಕು.

**ನಾರದ**—ಏಕೆ? ಅದನ್ನು ತಿಳಿದೇ ಅಲ್ಲಿಯ ವಿಚಿತ್ರಗಳನ್ನು ನಿಮಗೆ ತೋರ್ಪಡಿಸುವುದಕ್ಕಾಗಿಯೇ ಕೆಲವನ್ನು ನಾನೇ ತಂದಿರುವೆನು. (ಎಂದು ಜೋಳಿಗೆಗೆ ಕೈಹಾಕುವನು)

**ಶಚಿ**—ಇದಾದರೆ ಸಮಯೋಚಿತ ಸ್ಫೂರ್ತಿ.

**ಇಂದ್ರ**—ಏನೋ ಅದರಲ್ಲಿ ಗಂಧರ್ವಮಾಯೆ ಹುದುಗಿರಬಹುದು.

**ನಾರದ**—ಗಂಧರ್ವ ಮಾತ್ರವಲ್ಲ—ಗಾರುಡ—ನಾಗ ಈ ಎಲ್ಲವೂ ಇಂದು ಮನುಷ್ಯನ ಅಡಿಯಾಳು. ಆದುದರಿಂದಲೇ (ಜೋಳಿಗೆಯಿಂದ ಸಿಗ

ರೇಟ್ ಪೆಕೆಟ್ ಬೆಂಕಿ ಪೆಟ್ಟಿಗೆಗಳನ್ನು ತೆಗೆದು) ಇದನ್ನು ಅವಧರಿಸ ಬೇಕು. (ದೇವತೆಗಳೆಲ್ಲಾ ಸುತ್ತ ಕೂಡಿ ನೋಡುವರು)

**ಇಂದ್ರ**—ಏನದು ಏನದು? (ಕೈಗೆ ತೆಗೆದುಕೊಳ್ಳುವನು.)

**ಶಚಿ**—(ಒಂದು ಸಿಗರೇಟು ತೆಗೆದು ನೋಡುತ್ತ) ಇದೇನು ಮೂರ್ತಿವುಂತ ಚಂದ್ರಕಲೆಯೆ?

**ಇಂದ್ರ**—ಅಥವಾ ಸಂತೋಷಾಮೃತದ ಸತ್ವವೆ!

**ಶಚಿ**—ಅಥವಾ ಸುಂದರಿಯರ ಕಟಾಕ್ಷದ ಪ್ರತೀಕವೆ?

**ಇಂದ್ರ**—ಅಥವಾ ವಜ್ರಾಯುಧದ ಅವಶೇಷವೆ?

**ಶಚಿ**—(ನೆಕ್ಕುತ್ತ) ಅಲ್ಲ ಕಾಮಧೇನುವಿನ ಹಾಲಿನ ನೊರೆಯಿರಬೇಕು!

**ಇಂದ್ರ**—(ಮೂಸುತ್ತ) ಪಾರಿಜಾತದ ಪುಷ್ಪ ಸಂಚಯವಿರಬಹುದು! (ಕುತೂಹಲದಿಂದ) ನಾರದರೇ! ಹೇಳಿರಿ ಹೇಳಿರಿ ಇದು ಏನು?

**ಶಚಿ**—(ಆಶ್ಚರ್ಯದಿಂದ) ಮನುಷ್ಯನೇ ಇದನ್ನು ಸಿದ್ಧಿಸಿಕೊಂಡಿರುವನೆ? ಇದು ಯಾವ ದೇವರ ವರಪ್ರಸಾದದಿಂದ?

**ನಾರದ**—(ನಸುನಗುತ್ತ) ಇದು ಯಾರ ವರಪ್ರಸಾದವೂ ಅಲ್ಲ. ಇದು ಮನುಷ್ಯನ ಬುದ್ಧಿಯ ವಿಕಾಸ! ಮಾನವನು ಅಗ್ನಿ ಮುಖಿಯಾಗಿಲ್ಲ ವೆಂದವರಾರು?

**ಅಗ್ನಿ**—ಮತ್ತೆ ಯಾಗಧೂಮವು ಎಲ್ಲಿಯೂ ಕಂಡುಬರುವುದಿಲ್ಲವಲ್ಲ?

**ನಾರದ**—ಮಾನವನಿಗೆ ಸೋಮಪಾನವು ಬೇಕಾಗಿಲ್ಲ.

**ವರುಣ**—ಮತ್ತೇನು ಬೇಕಾಗಿದೆ?

**ನಾರದ**—ಧೂಮಪಾನ!

**ಇಂದ್ರ**—ಏನದು ಧೂಮಪಾನ? ಹಾಗೆಂದರೇನು?

**ಶಚಿ**—ಮತ್ತೆ ನೀವೇಕೆ ನಮಗಾಗಿ ಅದನ್ನು ಈ ಕಡೆ ತರಲಿಲ್ಲ?

**ನಾರದ**—ಅದನ್ನು ತಿಳಿದೇ ನಾನು ಅವನ್ನು ಈ ಕಡೆ ತಂದಿರುವೆನು. ನೋಡಬೇಕು. ಇವರ ಮೂರ್ತಿ ಸಣ್ಣದಾದರೂ ಕೀರ್ತಿ

ದೊಡ್ಡದು! ಈ ಧವಳ ಮೂರ್ತಿಯನ್ನು ನಿನ್ನ ಬಾಯಲ್ಲಿ ಇಟ್ಟು ಕೊಳ್ಳಬೇಕು.

**ಇಂದ್ರ**—(ಹಾಗೆಯೇ ಮಾಡುವನು)

**ನಾರದ**–(ಬೆಂಕಿ ಪೆಟ್ಟಿಗೆಯನ್ನು ತೆಗೆದುಕೊಂಡು) ಈಗ ಮಾನವನ ಅಂತಃ ಶಕ್ತಿಯು ಉದ್ದೀಪ್ತವಾಗಲಿದೆ. ಸಾವಧಾನ—ಸಾವಧಾನ ! (ಕಡ್ಡಿಯನ್ನು ಕೀರುವನು. ಎಲ್ಲರೂ ಆಶ್ಚರ್ಯದಿಂದ ಹೌಹಾರುವರು)

**ಇಂದ್ರ**—ಇದೇನು ಅಗ್ನಿ !

**ನಾರದ**–ಹೌದು. ಅಗ್ನಿಯು ಮನುಷ್ಯನ ಅಧೀನನಾಗಿದ್ದಾನೆ. ಈಗ ನೋಡು (ಸಿಗರೇಟಿಗೆ ಹೊತ್ತಿಸುವನು) ಇನ್ನು ಈ ಹೊಗೆಯನ್ನು ಸೇದಿ ಬಿಟ್ಟುಬಿಡುವುದು.

**ಇಂದ್ರ**—(ಹಾಗೆಯೇ ಮಾಡಿ ಸಂತೋಷವನ್ನು ಅನುಭವಿಸುತ್ತ) ಇದು ಅತ್ಯದ್ಭುತವಾಗಿದೆ!

**ಶಚಿ**—(ಅಸೂಯೆಯಿಂದ) ಸುಖಕಾಲದಲ್ಲಿ ಅರ್ಧಾಂಗಿಯ ನೆನಪೇ ಬರುವುದಿಲ್ಲ. ನೋಡೋಣ. (ಅದನ್ನು ತೆಗೆದುಕೊಂಡು ತಾನು ಸೇದಿ ಸಂತೋಷ ಸೂಚಿಸುವಳು) ಇದನ್ನೇನು ಭೂಲೋಕದಲ್ಲಿ ಎಲ್ಲರೂ ಅನುಭವಿಸುತ್ತಿರುವರೆ?

**ನಾರದ**–(ತಲೆದೂಗಿ) ಧಾರಾಳವಾಗಿ !

**ಶಚಿ**—(ಸಂತೋಷದಿಂದ) ನಾರದರೇ! ನೀವು ಈ ಮೊದಲೇ ಭೂಲೋಕಕ್ಕೆ ಏಕೆ ತೆರಳಲಿಲ್ಲ?

**ಇಂದ್ರ**—ಅಥವಾ ಇನ್ನು ಮೇಲಾದರೂ ನಿಮಗೆ ಪದೇ ಪದೇ ಭೂಲೋಕಕ್ಕೆ ಹೋಗಿಬರುವ ಕೆಲಸ ನಮಗಾಗಿ ಬಂದೇ ಬರುವುದು. (ತಾನೂ ಸಿಗರೇಟು ಹೊತ್ತಿಸಿ ಸೇದುತ್ತಿರುವನು. ದೇವತೆಗಳೆಲ್ಲರೂ ಒಂದೊಂದು ತೆಗೆದು ಸೇದುವರು.) ನಿಜವಾಗಿಯೂ ಇದೇ ಯಜ್ಞ ಭೂಮಿ! ನಾವು ಈ ಯಾಗ ಧೂಮದಿಂದಲೇ ಸಂತುಷ್ಟರಾಗಿದ್ದೇವೆ!

**ವರುಣ**—ಮನುಷ್ಯನು ಮಾಡಿದ ಕೆಲಸವು ಸಾರ್ಥಕವಾಗಿದೆ. ಅವನಿಗೆ ಜಯವಾಗಲಿ!

**ಅಗ್ನಿ**—ಆಶ್ಚರ್ಯ! ಮನುಷ್ಯನೇ ದೇವತೆಗಳಿಗೆ ಈ ಯಜ್ಞಕಾಂಡವನ್ನು ಕಲಿಸಿಕೊಟ್ಟನಲ್ಲ!

(ಎಲ್ಲರೂ ಸಂತೋಷದಿಂದ ಮೈಮರೆತಿರುವ ವೇಳೆ ನಾರದನು ತನ್ನ ಜೋಳಿಗೆಯಿಂದ ಕೆಲವು ಕರಪತ್ರಗಳನ್ನು ಹೊರತೆಗೆದು ಅಪ್ಸರೆಯರಿಗೆ ಇತರ ಸ್ವರ್ಗ ಸೇವಕರಿಗೆ ಹಂಚುವನು.)

**ನಾರದ**—ಇಂದ್ರನೇ—ನನಗಿನ್ನು ಹೋಗಲು ಅನುಮತಿಯನ್ನು ಕೊಡುವವನಾಗು.

**ಶಚಿ**—ಏನು? ಮತ್ತೊಮ್ಮೆ ಭೂಲೋಕಕ್ಕೆ ತೆರಳುವಿರೇನು? ಹಾಗಾದರೆ—

**ನಾರದ**—ಇಲ್ಲ. ಈಗ ವೈಕುಂಠದ ಕಡೆ ಹೋಗಬೇಕಾಗಿದೆ.

**ಇಂದ್ರ**—ಏನು? ಮಹಾವಿಷ್ಣುವಿಗೂ ಈ ಅಗ್ನಿತುಂಡವನ್ನು ಕೊಡಬಯಸುವಿರೇನು? ಹಾಗಾದರೆ ನಮ್ಮ ಪಾಲು ಬಹಳ ಚಿಕ್ಕದಾಗಬಹುದು!

**ನಾರದ**—ಏಕಾಗಬಾರದು? ಕ್ಷೀರಸಾಗರದಲ್ಲಿ ಆದಿಶೇಷನ ತಣ್ಣನೆ ದೇಹದ ಮೇಲೆ ಮಲಗಿ ಜಾಡ್ಯಗೊಂಡ ಆ ದೇವದೇವನಿಗೆ ಇದನ್ನೇಕೆ ಕೊಡಬಾರದು?

**ಎಲ್ಲರೂ**—ನ್ಯಾಯ—ನ್ಯಾಯ! ಅದಕ್ಕಾಗಿ ನಾವು ಅಸೂಯೆಪಡಬಾರದು.

**ನಾರದ**—ಹಾಗಾದರೆ ದೇವರಾಜನೇ! ನನ್ನ ಪ್ರಯಾಣಕ್ಕೆ ಅನುಮತಿಸುವನಾಗು. ನಿನಗೆ ಶುಭವಾಗಲಿ! (ಎಂದು ಹೋಗುವನು.)

(ನಾರದನು ನಗುತ್ತಾ ಪ್ರವೇಶಿಸುವನು. ಆ ಕಡೆಯಿಂದ ತುಂಬುರನು ಅಂತೆಯೇ ನಗುತ್ತಾ ಪ್ರವೇಶಿಸಿ)

**ತುಂಬುರ**—ಓಹೋ! ನಾರದ. ನಾನು ನೋಡಲೇಯಿಲ್ಲವಲ್ಲ. ಏನು ಬಹಳವಾಗಿ ನಗುತಿದ್ದಿಯೊ?

**ನಾರದ**—(ಮತ್ತೂ ನಗುತ್ತ) ನೀನೂ ನೋಡಲಿಲ್ಲ—ನಾನೂ ನೋಡಲಿಲ್ಲ. ತುಂಬುರ-ಏನು ನೀನೂ ಬಹಳವಾಗಿ ನಗುತಿದ್ದಿಯೊ? (ಇಬ್ಬರೂ ನಗುವರು) ಏಕೋ? ಮತ್ತೂ ನಗುತಾಯಿದ್ದಿ? (ಮತ್ತೂ ನಗುವರು)

**ತುಂಬುರ**—ಸಾಕು ಈ ನಗೆ. ಹೇಳು—ಸ್ವರ್ಗಲೋಕದಲ್ಲಿ ಏನೆಲ್ಲಾ ಆಯಿತು. ಹೇಳು.

**ನಾರದ**—ಸ್ವರ್ಗಲೋಕದಲ್ಲಿ ಏನೆಲ್ಲಾ ಆಗಬೇಕೋ ಅದೆಲ್ಲಾ ಆಗಿಹೋಯಿತು. ಇನ್ನು ಏನು ಆಗಬೇಕಾಗಿದೆಯೋ ಅದು ಆಗುವಂತೆ ಬೀಜ ಬಿತ್ತಿ ಬಂದಿದ್ದೇನೆ. ಆ ಕಳ್ಳರಿಗೆ ಅಮೃತದ ಮದವು ಇಳಿಯಬೇಕಾಗಿದೆ. ಅಪ್ಸರೆಯರ ಹೆಮ್ಮೆ ಮುರಿಯಬೇಕಾಗಿದೆ. ಅವೆಲ್ಲಾ ಸದ್ಯದಲ್ಲೇ ಆಗಿಯೇ ತೀರುವುದು. ಆ ಕರಪತ್ರಗಳನ್ನು ಗುಪ್ತವಾಗಿ ಅವರ ಕೈಯಲ್ಲಿ ಕೊಟ್ಟು ಬಂದಿದ್ದೇನೆ. ತುಂಬುರ! ಸ್ವರ್ಗಲೋಕವೇನು ಹೊಗೆಯಿಂದ ತುಂಬಿಹೋಗಿದೆ! ಇನ್ನು ಅಲ್ಲಿ ಬೆಂಕಿಯೇಳುವುದು ಮಾತ್ರ ಬಾಕಿ! ನೀನು ಹೇಗೆ

ಸತ್ಯಲೋಕ ವೈಕುಂಠಗಳನ್ನು ಸುತ್ತಾಡಿ ಬಂದಿರುವೆಯ? ಅಲ್ಲಿಯ ವಿಚಾರ ಹೇಗಿದೆ?

**ತುಂಬುರ**—ಅಲ್ಲಿಯ ವಿಚಾರವೇನು ಹೇಳಲಿ? ಸತ್ಯಲೋಕದಲ್ಲಿ ಸರಸ್ವತಿಯ ಕೈಯಲ್ಲಿ ಇಸ್ಪೇಟು ಪಿಡಿಕೊಟ್ಟು ಬ್ರಹ್ಮನ ಬಾಯಲ್ಲಿ ಆ ಹೊಗೆಬತ್ತಿಯನ್ನು ಕೊಟ್ಟು ಬಂದಿರುವೆನು. ಬ್ರಹ್ಮನೇನು ಬಹಳ ಡೌಲಾಗಿ ಕುಳಿತು ನಾಲ್ಕು ಬಾಯಿಯಲ್ಲಿ ನಾಲ್ಕು ಬತ್ತಿಗಳನ್ನಿಟ್ಟುಕೊಂಡು ಲೋಲನಾಗಿರುವನು. ಮತ್ತೆ ಅವನ ಪರಿವಾರದ ಆ ಜಡಗಳಿಗೆಲ್ಲ ಒಂದೊಂದು ಕರಪತ್ರವನ್ನು ಹಂಚಿ ನುಣ್ಣನೆ ಜಾರಿ ಬಂದಿರುವೆನು.

**ನಾರದ**—ಭಲೆ! ಮತ್ತೆ ವೈಕುಂಠದಲ್ಲಿ?

**ತುಂಬುರ**—ವೈಕುಂಠದಲ್ಲಿ ಮಹಾವಿಷ್ಣುವು ಯಾವ ಸ್ತೋತ್ರದಿಂದಲೂ ಸ್ತುತಿಯಿಂದಲೂ ಅಷ್ಟು ಪ್ರೀತನಾಗಲಿಕ್ಕಿಲ್ಲ—ಅಷ್ಟೊ ಮೆಚ್ಚಿರುವನು ಆ ಹೊಗೆಬತ್ತಿಗೆ! ಇನ್ನು ಆದಿಲಕ್ಷ್ಮಿಗೆ ನಮ್ಮ ಆ ಕಸೂತಿಯ ಕರವಸ್ತ್ರವನ್ನು ಕೊಟ್ಟಿರುವೆನು. ಅವಳೇನು ಅದರಲ್ಲೇ ಮಗ್ನಳಾಗಿರುವಳು. ಅದರ ನೂಲೆಳೆಗಳನ್ನು ಎಣಿಸಿ ಎಣಿಸಿ ಅವಳಿಗೆ ವಿಷ್ಣುವಿನ ಕಡೆ ಕಣ್ಣೆತ್ತಿ ನೋಡಲೂ ಸಮಯವೇ ಯಿಲ್ಲವಾಗಿದೆ. ಹೀಗಾಗಿ ಗರುಡಾದಿ ಸೇವಕರಿಗೆ ವಿಷ್ಣುವನ್ನು ನೋಡಿಕೊಳ್ಳುವ ಒಂದು ಕೆಲಸವು ಹೆಚ್ಚಿನದಾಗಿ ಪಾಲಿಗೆ ಬಂದಿರುವುದನ್ನು ಕಂಡುಬಂದಿರುವೆನು.

**ನಾರದ**—ಬಹಳ ಚೆನ್ನಾಯಿತು. ಇದರ ಪರಿಣಾಮವು ಏನಾಗಲಿದೆ ಯೆಂಬುದನ್ನು ನೀನೇ ನೋಡಲಿರುವೆ. ಹೇಗೂ ಈ ನಾರದನು ಜಗಳಗಂಟಿಯೆಂದು ಜಗತ್ಪ್ರಸಿದ್ಧವಾಗಿದೆ. ಆದುದರಿಂದ ಆ ಅಪವಾದವು ನನ್ನ ಮೇಲೆ ಬೇರೆ ಬರುವಂತಿಲ್ಲ. ಇದ್ದುದು ಹೋಗುವಂತೆಯೂ ಇಲ್ಲ. ಇನ್ನು ನಿನ್ನ ಮಟ್ಟಿಗೆ ಬಿಡು—ನೀನು ಹೇಗೂ ಕತ್ತೆ ಮುಖದವ!

**ತುಂಬುರ**—ಏನು ಹೇಳಿದಿ?

**ನಾರದ**—ಇದ್ದ ವಿಚಾರವನ್ನೇ ಹೇಳಿದ್ದೇನೆ. ಸತ್ಯವನ್ನು ಸುಮ್ಮನಾದರೂ ಮರೆಮಾಸಿ ಏನು ಪ್ರಯೋಜನ? ಆದುದರಿಂದ ತುಂಬುರ ನೋಡು! ಈ ದೇವಲೋಕಗಳಲ್ಲಿ ಒಂದು ಹೊಸ ಕ್ರಾಂತಿಯಾಗಬೇಕಾಗಿದೆ. ಈ ತನಕ ಹೊಗಳಿಕೆಯೊಂದನ್ನೇಕೇಳಿ ಕೇಳಿ ಉಬ್ಬಿರುವ ತ್ರಿಮೂರ್ತಿಗಳಿಗೆ ಸ್ವಲ್ಪ ತೆಗಳಿಕೆಯನ್ನು ಮನಗಾಣಿಸಬೇಕಾಗಿದೆ. ಮತ್ತೆ ಅದನ್ನು ಕಂಡು ನಾನೂ ನೀನೂ ನಗಬೇಕಾಗಿದೆ. ಯಾವುದಕ್ಕೂ ಮುಂಚಿತವಾಗಿ ನಾವೀಗ ಕೈಲಾಸಕ್ಕೆ ಹೋಗಬೇಕಾಗಿದೆ. ಅಲ್ಲಿ ಪರಶಿವನ ಪಾಡನ್ನು ನೋಡಬೇಕು. ಬಾ. ಹೋಗೋಣ. ಕಾಲ ವಿಳಂಬಕ್ಕೆ ಇದು ಸಮಯವಲ್ಲ. ಹೋಗೋಣ!

ನಾರಾಯಣ ಜಗದಾದಿ ಕಾರಣ
ಪರಾತ್ಪರ ಪರಂಜ್ಯೋತಿಸ್ಸ್ವರೂಪ

**ತುಂಬುರ**— ಮೋಹನ ಮುರಲೀಗಾನ ವಿಚಕ್ಷಣ
ಪುಣ್ಯ ಪುರುಷ ಪಾವನ ಜಿತಪಾಪ!

(ಇಬ್ಬರೂ ತೆರಳುವರು)

ಅಂಕ ೧

ದೃಶ್ಯ ೫ ಮಹಲು

(ಕೈಲಾಸದಲ್ಲಿ ಶಂಕರನು ಪಾರ್ವತಿಯೊಡನೆ ಪಗಡೆಯಾಡುತ್ತ ಕುಳಿತಿರುವನು. ಸುತ್ತು ಮುತ್ತ ನಂದಿ—ಭೃಂಗಿ—ಶೃಂಗಿ ಇನ್ನಿತರ ಭೂತ ಪ್ರೇತಗಳು ಹಾರುತ್ತ ಹರಟುತ್ತ ಕುಳಿತಿರುವುವು.)

**ಪಾರ್ವತಿ**—(ಕೈತಡೆದು) ಅದಾಗದು—ಅದಾಗದು! ಆಟದಲ್ಲಿ ವಂಚನೆಯಿರಬಾರದು!

**ಈಶ್ವರ**—ವಂಚನೆ ಏನು ಬಂತೀಗ? ಸೋತವರು ಗೆದ್ದವರ ಕೂಡೆ ಕಾದಾಡುವುದು ಲೋಕದಲ್ಲಿ ಇದ್ದದ್ದೆ!

**ಪಾರ್ವತಿ**—ನೀವು ಮೋಸಮಾಡಿ ಹೆಂಗಸಿನ ಕೂಡೆ ಆಟವಾಡುವುದು ಬೇರೆ--ಮತ್ತೆ ಕಾದಾಡುವುದು ಬೇರೆ! ಇದೇ ನಿಮ್ಮ ಪೌರುಷ!

(ನಾರದ ತುಂಬುರರ ಪ್ರವೇಶ)

**ನಾರದ**—(ಸುತ್ತಲೂ ನೋಡಿ)ಈ ಕೈಲಾಸವೆಂದರೆ ಒಂದು ದೊಡ್ಡ ಅರಾಜಕ. ಇಲ್ಲಿ ಈಶ್ವರನಿಗೆ ಯಾವಾಗಲೂ ಮಕ್ಕಳಾಟವೆ. ಇಲ್ಲಿಯ ಗಲಭೆ ಯಾವತ್ತಿಗೂ ತೀರಿದ್ದೇ ಅಲ್ಲ!

**ತುಂಬುರ**—ಆದುದರಿಂದಲೇ ಇಲ್ಲಿ ನಮ್ಮ ಬೇಳೆ ಚೆನ್ನಾಗಿ ಬೇಯಲಿಕ್ಕೆ ಅಡ್ಡಿಯೇಯಿಲ್ಲ. ಅರಾಜಕವಾದಲ್ಲೇ ನಮ್ಮ ಬೀಜ ಬೆಳೆಯುವುದು!

(ಇಬ್ಬರೂ ಮುಂದೆ ಬಂದು)

ಪರಶಿವನಿಗೆ ವಂದಿಸುವೆವು.

**ಈಶ್ವರ**—ಓಹೋ—ನಾರದ ತುಂಬುರರು! ಏಕೈಕಮುಪ್ಯನರ್ಥಾಯ! —ಮತ್ತೆ ಇಬ್ಬರೂ ಒಟ್ಟು ಕೂಡಿ ಹೊರಟಂತಿದೆ! ಆಶ್ಚರ್ಯ!

**ನಾರದ**—ಹೌದು. ಸ್ವಾಮಿಯ ಸಂದರ್ಶನವಾಗದೆ ತುಂಬಾ ಸಮಯ ಕಳೆಯಿತೆಂದು ಮನಸ್ಸು ಕಸವಿಸಿಗೊಳ್ಳತೊಡಗಿದೆ.

**ತುಂಬುರ**—ಅಲ್ಲದೆ ನಮ್ಮ ಇತ್ತೀಚಿನ ಭೂಲೋಕದ ಸಂಚಾರದ ವಿಚಾರಗಳನ್ನು ಸನ್ನಿಧಾನದಲ್ಲಿ ಅರಿಕೆಮಾಡಿಕೊಳ್ಳೋಣವೆಂದು ಈ ಕಡೆ ಬಂದೆವು.

**ಈಶ್ವರ**—ಭೂ ಸಂಚಾರವೆ? ಈ ಕಲಿಯುಗದಲ್ಲಿ? ಅಲ್ಲೇನು ವಿಶೇಷವಿದೆ?

**ಪಾರ್ವತಿ**—ನಮಗೆ ಈಗಿಂದೀಗ ಭೂಲೋಕದ ವರ್ತಮಾನಗಳೇ ಸಮನಾಗಿ ಬರುತ್ತಿರುವುದಿಲ್ಲ. ನಾರದರು ಆ ಕಡೆ ಹೋಗದಿದ್ದರೆ ನಾವೆಲ್ಲಾ ಕೂಪಮಂಡೂಕಗಳಾಗಿ ಹೋಗುತ್ತೇವೆ.

**ನಾರದ**—ಈ ನಾರದನೇನು ತಿಳಿಸಬೇಕು? ದಿವ್ಯಚಿತ್ತಕ್ಕೆ ಯಾವುದು ವೇದ್ಯವಲ್ಲ? ಆದರೂ ಅಪ್ಪಣೆ ಪ್ರಕಾರ ತಿಳಿಸುತ್ತೇನೆ. ಭರತ ಖಂಡದಲ್ಲಿ ಪುಣ್ಯ ಭೂಮಿಯಲ್ಲಿ ಆಂಗ್ಲರಾಳಿಕೆಯ ಕೊನೆಯುಗಳಿಗೆಯು ಸನ್ನಿಹಿತವಾಗಿದೆ.

**ಈಶ್ವರ**—ಅದು ಹೇಗೆ ತಿಳಿದು ಬಂದಿತು?

**ನಾರದ**—ಯಾವಾಗ ರಾಜನು ಪ್ರಜೆಗಳ ಮೇಲೆ ಕೈಮಾಡಿ ಕೈದು ಮಾಡತೊಡಗಿರುವನೋ ಅಂದಿಗೇ ಅದು ಖಚಿತವಾಗಿ ತಿಳಿದಿದೆ. ಭಾರತೀಯರು ಸ್ವಾವಲಂಬನದ ಪುಣ್ಯ ಸಮಯವನ್ನು ಇದಿರು ನೋಡುತಿದ್ದಾರೆ. ಅಂತಹ ಸುಪ್ರಭಾತದ ಕಿರಣವು ಬಹಳವಾಗಿ ದೂರವಾಗಿಲ್ಲ. ಆ ಮಹಾತ್ಮನ ಅಮೃತವಾಣಿಯಿಂದಾಗಿ–

**ಪಾರ್ವತಿ**—ಯಾವ ಮಹಾತ್ಮ?

**ನಾರದ**—ರಾಜಯೋಗಿ ಆ ಕರ್ಮಯೋಗಿ—ಆ ಸ್ವಾರ್ಥತ್ಯಾಗಿಯೋಧನ ಮುಂದಾಳ್ತನದಿಂದಾಗಿ ಭಾರತೀಯರು ಪಶುಬಲವನ್ನು ವಿಶಿಷ್ಟ ಮಾನವತೆಯಿಂದ ಇದಿರಿಸುತಿದ್ದಾರೆ. ಅಂತಹ ಶಾಂತತೆ

ಯಿಂದಾಗಿ ಪ್ರಪಂಚವೇ ಒಂದು ಪಾಠವನ್ನು ಕಲಿಯತೊಡಗಿದೆ. ಅಂದು ಸ್ವಾಮಿಯು ದಹಿಸಿ ಬಿಟ್ಟ ತ್ರಿಪುರಗಳು—

**ಈಶ್ವರ**—(ಸಾಶಂಕೆಯಿಂದ) ಏನಾಗಿವೆ?

**ನಾರದ**—ಪುನರಪಿ ಊರ್ಜಿತಗಳಾಗಿ ಅಭೂತಪೂರ್ವಗಳಾಗಿ ಬೆಳೆದಿವೆ!

**ಈಶ್ವರ**—(ಕೋಪದಿಂದ) ಹಾಗಾದರೆ ನಾನೀಗಲೇ ಹೊರಡಬೇಕಾಗಿದೆ. (ಪಗಡೆ ಕಾಳುಗಳನ್ನು ಚೆಲ್ಲಿಬಿಟ್ಟು ಹುಲಿಚರ್ಮವನ್ನು ಹೆಗಲ ಮೇಲೆ ಹಾಕಿಕೊಳ್ಳುವನು.)

**ನಾರದ ತುಂಬುರರು**—ಸಾವಧಾನ—ಸಾವಧಾನ!

**ಈಶ್ವರ**—(ತಡೆದು) ಅದೇನು? ನೀವು ತಡೆಯಲು ಕಾರಣವೇನು?

**ನಾರದ**—ಆ ಲೋಹಮಯ ತ್ರಿರಾಷ್ಟ್ರಗಳನ್ನು ದಹಿಸುವ ಶಕ್ತಿಯು ಇಂದು ದೇವತೆಗಳಿಗೆ ಕಳೆದುಹೋಗಿದೆ.

**ಈಶ್ವರ**—(ಕೋಪದಿಂದ) ಏನು? ನಮ್ಮ ಪರಶಕ್ತಿಯ ಸಾಮರ್ಥ್ಯವು ಕುಂದಿ ರುವುದೆ? (ಪಾರ್ವತಿಯ ಕಡೆ ನೋಡುವನು.)

**ಪಾರ್ವತಿ**—(ಅಹಂಕಾರದಿಂದ ಎದ್ದು ನಿಂತು ಕಾಲುದಟ್ಟಿಸಿ) ಹಾಗಾದರೆ ನೋಡೋಣ! ನಮ್ಮ ಪರಿವಾರವು ಸಿದ್ಧವಾಗಲಿ! ಏನಿದು ಅವಜ್ಞೆ!

**ತುಂಬುರ**—ಆದರೆ ರಥಕ್ಕೆ ಬ್ರಹ್ಮನು ಬರಬೇಕಲ್ಲ!

**ನಾರದ**—ಸಾರಥ್ಯಕ್ಕೆ ವಿಷ್ಣುವು ಹೊರಡಬೇಕಲ್ಲ!

**ಈಶ್ವರ**—ಈ ಕ್ಷಣವೇ ಬರಮಾಡಿಸೋಣ.

**ನಾರದ**—ಏನೂ ಬೇಕಾಗಿಲ್ಲ. ಅವರು ತಾವು ಬಿಟ್ಟುಕದಲುವಂತಿಲ್ಲ. ಪಾಪ—ಅವರ ತಾಪತ್ರಯವೇ ಅವರಿಗೆಹೆಚ್ಚಿದೆ! ಅಲ್ಲದೆ ಆ ತ್ರಿಪುರಗಳ ದಹನಕ್ಕೆ ಭಾರತೀಯರು ಯುಕ್ತ ಮಂತ್ರಾಸ್ತ್ರವನ್ನು ತಾವೇ ಕಂಡು ಹಿಡಿದಿರುವರು.

**ಈಶ್ವರ ಪಾರ್ವತಿಯರು**—(ಆಶ್ಚರ್ಯದಿಂದ) ಏನದು?

**ನಾರದ**—ಅದೇ ಸತ್ಯಾಗ್ರಹ!

**ಈಶ್ವರ**—ಸತ್ಯಾಗ್ರಹ—ಎಂದರೆ?

**ತುಂಬುರ**—ಅದೇ ಆ ಮಹಾತ್ಮನ ಮಂತ್ರಪೂತವಾದ ಮಹಾಸ್ತ್ರ!

**ಈಶ್ವರ**—ಅದರಲ್ಲಿ ವಿಷ್ಣುವು ಆವಾಹಿತನಾಗಿರುವನೆ?

**ಪಾರ್ವತಿ**—ಮಹಾಶಕ್ತಿಯು ಸನ್ನಿಹಿತಳಾಗಿರುವಳೆ?

**ನಾರದ**—(ನಿರ್ಧಾರವಾಗಿ ಕೈಯೆತ್ತಿ) ಅದರಲ್ಲಿ ಮೂವತ್ತಮೂರುಕೋಟಿ ದೇವತೆಗಳಲ್ಲ—ಮೂವತ್ತಮೂರುಕೋಟಿ ಮಾನವರು ಆವಾಹಿತರಾಗಿರುವರು. ಆ ಮಹಾಸ್ತ್ರದ ಮುಂದೆ ತ್ರಿಪುರಗಳೂ ಸ್ತಂಭಿತಗಳಾಗಿ ನಡುಗುತ್ತಿವೆ!

(ಈಶ್ವರ ಪಾರ್ವತಿಯರು ಒಬ್ಬರನ್ನೊಬ್ಬರು ಆಶ್ಚರ್ಯದಿಂದನೋಡುವರು)

**ನಾರದ**—ಆದುದರಿಂದ ನೀವು ಸ್ವಸ್ಥರಾಗಬಹುದು.

**ಈಶ್ವರ ಪಾರ್ವತಿ**—(ಕುಳಿತು ಕೊಂಡು) ಹಾಗಾದರೆ ನೀವೂ ಸುಖಾಸೀನರಾಗಬೇಕು.

(ತುಂಬುರ ನಾರದರೂ ಕುಳಿತುಕೊಳ್ಳುವರು)

**ಈಶ್ವರ**—ಭೂಲೋಕದಲ್ಲಿ ಯಜ್ಞ ಯಾಗಗಳು ಚೆನ್ನಾಗಿ ನಡೆಯುತ್ತಿವೆಯೆ?

**ನಾರದ**—ಚೆನ್ನಾಗಿ! ಎಲ್ಲೆಲ್ಲಿಯೂ ಜೀವಯಜ್ಞ!

**ಪಾರ್ವತಿ**—ಸೋಮಪಾನವು ಯಥಾಪೂರ್ವವಾಗಿದೆಯೆ?

**ತುಂಬುರ**—ಸೋಮಪಾನವಲ್ಲ—ಧೂಮಪಾನ!

**ಈಶ್ವರ**—ಎಂದರೆ ಏನದು?

**ನಾರದ**—ಅವಧರಿಸಬೇಕು. (ಜೋಳಿಗೆಯಿಂದ ತೆಗೆದುಕೊಡುತ್ತ) ಈ ಧೂಮಪಾನದಿಂದಾಗಿ ಮಾನವರು ತಮ್ಮ ನಶ್ವರ ಜೀವಿತದಲ್ಲೂ ಸಚೇತನರಾಗಿದ್ದಾರೆ. ಅವರ ಮುಖಕಮಲದಲ್ಲಿ ಇದು ನಾಳದೋಪಾದಿಯಲ್ಲಿ ರಾರಾಜಮಾನವಾಗಿದೆ.

**ಪಾರ್ವತಿ**—(ಕುತೂಹಲದಿಂದ ನೋಡುತ್ತ)ಇದು ನಮ್ಮ ಚವತಿಯ ಚಂದ್ರ ಕಳೆಯಂತಿದೆ!

**ಈಶ್ವರ**—ನಮ್ಮ ಗಂಗೆಯ ಫೇನ ರಾಶಿಯಂತೆ!

**ಪಾರ್ವತಿ**—ನಮ್ಮ ಕೈಲಾಸ ಶಿಖರದ ಹಿಮಖಂಡದಂತಿದೆ!

**ಈಶ್ವರ**—(ಆಶ್ಚರ್ಯದಿಂದ)ನಾರದ--ಇದೇನು ಹೇಳು! ಇದು ಯಾವ ವಿಶ್ವಕರ್ಮನ ಸೃಷ್ಟಿ? ಕುತೂಹಲವು ನಮ್ಮನ್ನು ಕಿಚುಕುಳಿಗೊಳಿಸುತ್ತಿದೆ!

**ನಾರದ**—(ನಸುನಗುತ್ತ)ತುಂಬುರನ ಕುದುರೆ ಮುಖವು ಇದರಿಂದಾಗಿ ಮನೋಹರವಾಗಿದೆ. (ಮುಖವನ್ನು ಹಾಗೆ ಮಾಡಿ ತೋರಿಸುವನು)

**ತುಂಬುರ**--ನಾರದನ ಹಸನ್ಮುಖದ ಸೌಂದರ್ಯವು ಇದರಿಂದಾಗಿ ಊರ್ಜಿತವಾಗಿದೆ! (ಹಾಗೆ ಮಾಡಿ ತೋರಿಸುವನು.)

**ನಾರದ**—ಹೋಗಲಿ ಬಿಡು. (ಈಶ್ವರನಿಗೆ ಅದನ್ನು ಹೊತ್ತಿಸಿಕೊಡುವನು)

**ಈಶ್ವರ**—(ಅದನ್ನು ಸೇದುತ್ತ ಪಾರ್ವತಿಯ ಮೈ ಮೇಲೆ ಒರಗಿ ಕುಳಿತು) ಆಹಾ ಆನಂದ! ಪರಮಾನಂದ!! ಬ್ರಹ್ಮಾನಂದ!!! (ಎಂದು ಕೈಕಾಲು ಚಾಚುವನು)

**ಪಾರ್ವತಿ**—(ಅಸೂಯೆಯಿಂದ) ಏನಿದು? ನೀವು ಯಾವಾಗಲಾದರೂ ಅರ್ಧಾಂಗಿಯಾದ ನನ್ನನ್ನು ಮರೆತುದಿಲ್ಲ. ಆದರೆ ಈಗ?

**ನಾರದ**—ದೇವಿಯವರ ಸಲುವಾಗಿ—(ಜೋಳಿಗೆಗೆ ಕೈ ಹಾಕುವನು)

**ಪಾರ್ವತಿ**—ಏನು? ಏನು ತಂದಿರುವಿ? ನಾರದ! ನೀನು ಭಲೇ ಭಕ್ತನಯ್ಯ! ಅದನ್ನು ಈ ಕಡೆ ಕೊಟ್ಟು ಬಿಟ್ಟು ನಿನಗೆ ಬೇಕಾದಷ್ಟು ವರಗಳನ್ನು ಕೇಳಿ ಬಿಡಯ್ಯ!

**ನಾರದ** -(ಚರ್ಮದ ಕೈಚೀಲವನ್ನು ಹೊರತೆಗೆದು)ದೇವಿಯವರು ಇದನ್ನು ಅವಧರಿಸಬೇಕು! (ಕೊಡುವನು)

**ಪಾರ್ವತಿ**—(ಅದನ್ನು ತೆರೆದು ಅದರೊಳಗಣ ಕನ್ನಡಿ – ಪೌಡರ್—ತುಟಿಯ ರಂಗನ್ನು ನೋಡಿ)ಓಹೋ! ಅದ್ಭುತ—ಅತ್ಯದ್ಭುತ! ನಾರದಾ! ಇದೇನು ಭಸ್ಮ? ಇದು ಯಾವ ದೇವಾಲಯದ್ದು? ಏನು ಪರಿಮಳ ವಯ್ಯ—ಏನು ಪರಿಮಳ!(ತುಟಿಯ ರಂಗನ್ನು ನೋಡಿ)ಇದು ಯಾವ ಆತ್ಮ ಲಿಂಗ?

**ನಾರದ**—ಇವು ನವೀನ ತರದ ಭಸ್ಮ—ಪ್ರಾಣ ಲಿಂಗಗಳು. ಮಾನವ ಮಾನಿನಿಯರೆಲ್ಲ ಇವುಗಳಿಂದಾಗಿ ಸಂಪೂರ್ಣ ಈಶ್ವರ ಭಕ್ತರಾ ಗಿರುವರು!

**ಈಶ್ವರ**—(ನೋಡುತ್ತ)ಈ ಕಲಿಯುಗದಲ್ಲೂ ಮಾನವರಿಗೆ ನಮ್ಮ ಜ್ಞಾಪ ಕವು ನಿರ್ಭರವಾಗಿದೆಯಲ್ಲ! ಇಂತಹ ಪ್ರಾಣಲಿಂಗವನ್ನೇ ನಾನು ಈ ಮೊದಲು ಗೋಕರ್ಣಕ್ಷೇತ್ರದಲ್ಲಿ ಭಕ್ತರ ಸಲುವಾಗಿ ಬಿಟ್ಟು ಬಂದಿದ್ದೆ!(ನೋಡಿ ತೆಗೆಯಲೆಳಸುವನು)

**ಪಾರ್ವತಿ**—(ತಡೆದು)ಇಲ್ಲ ಇದು ನನ್ನ ಪಾಲಿಗೆ—ನನ್ನ ಆರಾಧನೆಗೆ! (ಮುಖಕ್ಕೆ ಹಚ್ಚಿಕೊಂಡು ಕನ್ನಡಿ ನೋಡುವಳು) ಈ ಭಸ್ಮ ಧಾರಣೆ ಯಿಂದಲೇ ನನ್ನ ಪಾತಿವ್ರತ್ಯದ ಪ್ರದರ್ಶನವು ನಡೆಯಬೇಕು (ತುಟಿಯ ರಂಗನ್ನು ನೋಡಿ)ಇದೇನು ರಂಗು?

**ನಾರದ**—ಅದು ಸ್ತ್ರೀ ಸಹಜವಾದ ತುಟಿಯ ರಾಗೋದಯ—ಅನುರಾ ಗೋದಯ!

**ಪಾರ್ವತಿ**—(ತುಟಿಗೆ ಹಚ್ಚಿಕೊಂಡು ನಗುತ್ತ)ಹೇಗೆ? ಇದು ಪರಶಿವನಿಗೆ ಮೆಚ್ಚುಗೆಯೆ?(ಎಂದು ಕಟಾಕ್ಷ ಬೀರುವಳು)

**ಈಶ್ವರ**—(ಮೆಚ್ಚುಗೆಯಿಂದ)ಹಾ ಹಾ! ನಾನು ಮತ್ತೊಮ್ಮೆ ಸಂಸಾರಿಗ ನಾಗಿ ಬಿಟ್ಟೆ, ಮನ್ಮಥನೇ ತಡೆ ತಡೆ!(ಸಿಗರೇಟು ಸೇದಿ ಹೊಗೆ ಬಿಡು ವನು. ಪಾರ್ವತಿ ಕನ್ನಡಿ ನೋಡುತ್ತ ಸಂತೋಷ ಪಡುತ್ತಿರುವಳು)

**ನಾರದ**—(ಚೀರುತ್ತಿರುವ ಭೂತಗಳಿಗೆಲ್ಲ ಒಂದೊಂದು ಕರ ಪತ್ರವನ್ನು ಜೋಳಿಗೆ

ಯಿಂದ ತೆಗೆದು ಗುಟ್ಟಾಗಿ ಹಂಚುವನು) ತುಂಬುರ! ನಮ್ಮ ಕೆಲಸವು ಸಿದ್ಧಿಸಿರುವುದಲ್ಲ?

**ತುಂಬುರ**—ಓಹೋ! ಎಣಿಸಿದುದಕ್ಕಿಂತಲೂ ಹೆಚ್ಚಾಗಿ! ದೊಡ್ಡವರು ಇಷ್ಟು ಬೇಗನೇ ಅಧಃಪಾತಕ್ಕೆ ಬರುವರೆಂದು ನಾನು ಎಣಿಸಿದ್ದಿಲ್ಲ.

**ನಾರದ**—ಎಂದರೆ ಅದು ದೊಡ್ಡತನದ ಹೆಮ್ಮೆಯ ಪರಿಣಾಮ! ದೊಡ್ಡತನವು ತ್ಯಾಗಕ್ಕಾಗಿ ಎಂಬುದನ್ನು ದೊಡ್ಡವರು ಗ್ರಹಿಸದೆಹೋದರೆ ಆಗ ಅವರ ಅಧಃಪತನವಾಗಿ ಸಮಾಜವು ಅವ್ಯವಸ್ಥಿತವಾಗಿಯೇ ಆಗುವುದು! ಇದರಿಂದಾಗಿ ಧನಿಕ ದರಿದ್ರರೊಳಗಣ ಭೇದವು ಮತ್ತಷ್ಟು ವಿರೂಪವಾಗುವುದಲ್ಲದೆ ದರಿದ್ರರ ಅತೃಪ್ತ ಹೃದಯದ ದುಷ್ಟಶಕ್ತಿಯ ಪ್ರಚೋದನೆಯು ಇನ್ನೂ ವಿಕಾರವಾಗುವುದು! ಇನ್ನು ನಾವು ಹೋಗೋಣ, ಮೇಲಿನ ಪರಿಣಾಮವನ್ನು ಕಾಣಲು ಮತ್ತೊಮ್ಮೆ ಬಂದರೆ ಸಾಕು.

**ನಾರದ ತುಂಬುರರು**—(ಈಶ್ವರನಿಗೆ ಕೈಮುಗಿದು) ಪರಶಿವನೆ! ನಮಗೆ ಅಪ್ಪಣೆಯಾಗಲಿ, ಪರಾಶಕ್ತಿಗೆ ವಂದಿಸುವೆವು. (ಈಶ್ವರ ಪಾರ್ವತಿಯರು ಗಣ್ಯವಿಲ್ಲದೆ ತಮ್ಮಷ್ಟಕ್ಕೇ ಕುಳಿತಿರುವರು. ನಾರದ ತುಂಬುರರ ನಿಷ್ಕ್ರಮಣ)

ಅಂಕ ೧ ದೃಶ್ಯ ೬ ಉಪವನ

(ಈಶ್ವರನ ಅನುಚರರು ನಂದಿ—ಭೃಂಗಿ—ಶೃಂಗಿ— ಮೊದಲಾದವರು ನಾರದನು ಕೊಟ್ಟ ಕರಪತ್ರವನ್ನು ಓದುತ್ತಾ ಪ್ರವೇಶಿಸುವರು.)

**ನಂದಿ**—ನಾರವನು ಗುಟ್ಟನಿಂದ ಈ ಕರಪತ್ರವನ್ನು ನಮ್ಮ ಕೈಗೆ ಕೊಡಲು ಕಾರಣವೇನು? ನಾರದನು ಜಗಳಗಂಟಿ. ಅದಕ್ಕಾಗಿ ಕೊಟ್ಟಿರ ಬಹುದೆ?

**ಭೃಂಗಿ**—ನಾರದನು ಯಾವ ಗಂಟಿಯೇಯಿರಲಿ—ನಿನಗಿಂತ ದೊಡ್ಡ ಗಂಟಿ ಯಲ್ಲ ತಾನೆ? ಆದುದರಿಂದ ನಮಗೇನು ಬಾಧಕ? ಈ ಕರಪತ್ರದ ವಿಷಯವಂತೂ ಸತ್ಯ.

**ಶೃಂಗಿ**—(ಓದುತ್ತ) ಸೋದರರೇ—ಎದ್ದೇಳಿರಿ ಎದ್ದೇಳಿರಿ! ಎಚ್ಚತ್ತ ಪ್ರಪಂಚದಲ್ಲಿ ನೀವಿನ್ನೂ ಸುಪ್ತರಾಗಿರಬೇಡಿರಿ. ದೌಲತ್ತು ನಾಶ ವಾಗಲಿ! ಭಂಡವಾಳಶಾಹಿಯು ನಿರ್ನಾಮವಾಗಲಿ! ಕೆಲಸ ಮಾಡಿದ ಕೈಯತುತ್ತು ಕೆಲಸ ಮಾಡಿದವನ ಬಾಯಿಗೇ ಬೀಳ ಬೇಕು. ಧನಿಕರ ದೌಲತ್ತಿನ ಬಾಯಿಗಲ್ಲ.

**ಭೃಂಗಿ**—ಇದರಲ್ಲೇನು ತಪ್ಪಿದೆ?

**ಶೃಂಗಿ**—(ಮುಂದಕ್ಕೆ ಓದುತ್ತ) ಆದುದರಿಂದ ನಿಮ್ಮ ನಿಮ್ಮೊಳಗಿನ ಮೇಲು ಕೀಳು ಭಾವನೆಯನ್ನು ಬಿಟ್ಟುಕೊಟ್ಟು ಸುಸಂಘಟಿತರಾಗಿರಿ. ನಿಮ್ಮ ಭೇದಭಾವನೆಯೇ ಧನಿಕರ ದುರಾಗ್ರಹಕ್ಕೆ ಪೋಷಕವಾಗಿದೆ. ನಿಮ್ಮ ಸಂಘಟನೆಯ ಒಕ್ಕೊರಲಿನ ಬೇಡಿಕೆಗೆ ಅಂತಹ ದುರಾಗ್ರಹವು ಮಣಿಯಲೇಬೇಕು! ಏನೇ ಬರಲಿ-ಒಕ್ಕಟ್ಟಿರಲಿ? ಎದ್ದೇಳಿರಿ—ಎದ್ದೇಳಿರಿ! ಇನ್ಕಿಲಾಬ್ ಜಿಂದಾಬಾದ್! ಟ್ರೇಡ್‌ಯೂನಿಯನ್ ಜಿಂದಾಬಾದ್!

**ಭೃಂಗಿ**—ಅಲ್ಲವೆ ಮತ್ತೆ? ನಾವು ಪರರಿಗಾಗಿ ದಿನವೂ ದುಡಿದು ದುಡಿದು ಏಕೆ ಸಾಯಬೇಕು? ನಾವೂ ಒಂದು ಕ್ಷಣ ಪರಮೇಶ್ವರರಾಗಿ ಬದುಕೋಣ!

**ನಂದಿ**—ಅವೆಲ್ಲ ಸಹಜ ಆದರೆ—

**ಭೃಂಗಿ**—ಆದರೇನು?

**ನಂದಿ**—ಆದರೆ—ನಾವು ಮಾತ್ರ ಒಟ್ಟಾದರೆ ಸಾಲದು. ಮೇಲಿನ ಏಳು ಲೋಕವೇ ಒಂದಾಗಬೇಕಾಗಿದೆ.
(ತೆರೆಯ ಕಡೆ ಗದ್ದಲ ಕೇಳುವುದು)
ಇನ್ಕಿಲಾಬ್ ಜಿಂದಾಬಾದ್—ಟ್ರೇಡ್‌ಯೂನಿಯನ್ ಜಿಂದಾಬಾದ್!

**ಭೃಂಗಿ**—(ನೋಡಿ) ಅದೋ ನೋಡು! ಆ ಕಡೆಯಿಂದ ಸತ್ಯ ಮತ್ತು ವೈಕುಂಠಲೋಕದ ಕೊಮ್ರೇಡ್ ಸನಕ ಗರುಡಾದಿಗಳು ಈ ಕಡೆ ಬರುತ್ತಿದ್ದಾರೆ. ಆಹಾ! ಕಾಲವು ಎಷ್ಟು ಪರಿಣತವಾಗಿದೆ?
(ಸತ್ಯ ಮತ್ತು ವೈಕುಂಠ ಲೋಕಗಳ ಅನುಚರರ ಪ್ರವೇಶ)

**ಗರುಡ**—ಸಾಕಪ್ಪ. ನಾನಂತೂ ವಿಷ್ಣುವಿನ ಕಾಲು ತಿಕ್ಕಿ ತಿಕ್ಕಿ ಸೋತು ಹೋಗಿರುವೆನು. ಆ ಲಕ್ಷ್ಮಿಯ ದೌಲತ್ತಿನಿಂದಾಗಿ ಹಣ್ಣುಹಣ್ಣಾಗಿರುವೆನು. ಅದಕ್ಕಾಗಿ ನಾವು ಈಗಿಂದೀಗಲೇ ಉಪಾಯ ಯೋಚಿಸದಿದ್ದರೆ ಪರಿಣಾಮವಿಲ್ಲ!

**ಸನಕ**—ನಾವಂತೂ ಬ್ರಹ್ಮನ ಪುರಾಣ ಬರೆದೂ ಬರೆದೂ ಸತ್ತೇಹೋಗಿರುವೆವು. ನೋಡು—ನನ್ನ ಕೈ ಬೆರಳು.

**ಗರುಡ**—ಆ ಗತಪುರಾಣವು ಇನ್ನೂ ಬೇಕೇನು?

**ನಂದಿ**—(ಮುಂದೆ ಬಂದು) ಏನಿದು? ನೀವೆಲ್ಲ ಇಷ್ಟು ಬೇಸರ ಸೂಚಿಸುತ್ತಿರುವಿರಿ? ಏನಾಯಿತು?

**ಗರುಡ**—ಆಗುವುದೇನು? (ಅವನ ಕೈನೋಡಿ) ಓಹೋ—ಆ ಕರಪತ್ರವು ನಿಮ್ಮ ಕೂಡೆಯೂ ಇದೆತಾನೆ! (ಸಂತೋಷದಿಂದ) ಹಾಗಾದರೆ ನಾವು ಸುಸಂಘಟಿತರಾಗಲೇ ಬೇಕು. ನಾವು ಮೂರು ಲೋಕದವರೂ—

(**ತೆರೆಯಕಡೆ**)

ಅಲ್ಲ ಅಲ್ಲ ಮೂರು ಲೋಕದವರು ಮಾತ್ರವಲ್ಲ—ಏಳು ಲೋಕದವರು!

(**ಸ್ವರ್ಗದ ಸೇವಕರ ಮತ್ತು ರಂಭೆ—ಊರ್ವಶಿ—ತಿಲೋತ್ತಮೆಯರ ಪ್ರವೇಶ**)

**ರಂಭೆ**—ಏಳು ಲೋಕದವರು ಒಂದಾಗಬೇಕು. ಒಂದಾಗಿ ಈ ದೌಲತ್ತನ್ನು ಪ್ರತಿಭಟಿಸಬೇಕು!

**ನಂದಿ**—ಏನು? ನಿಮ್ಮದೇನು ಕಷ್ಟ?

**ತಿಲೋತ್ತಮೆ**—ನಮ್ಮ ಕಷ್ಟವೆ? ಯುಗ ಯುಗಗಳಿಂದ ಈ ಸ್ವರ್ಗಕ್ಕೆ ಬಂದವರೆಲ್ಲರ ಸೇವೆ ಮಾಡುತಿದ್ದೇವೆ. ಬಂದವರೆಲ್ಲ ಅಂತೆ ಅಂತೆಯೇ ಹೋಗುತಿದ್ದರೂ ನಮ್ಮ ಗ್ರಹಚಾರವಂತೂ ಇನ್ನೂ ಮುಗಿದಿಲ್ಲ!

**ಊರ್ವಶಿ**—ನಮ್ಮ ಕಾಲುಗಳು ಮರಕಟ್ಟಿ ಹೋಗಿವೆ!

**ರಂಭೆ**—ಅದಕ್ಕಾಗಿ ನಮಗೆ ಸಿಕ್ಕುವ ಪ್ರತಿಫಲವೆಂದರೆ ಅಮೃತದ ಅವಶೇಷದ ಒಂದು ಗುಟುಕು!

**ತಿಲೋತ್ತಮೆ**—ಅದೂ ನಾವು ಸಾಯಬಾರದೆಂದು. ಸತ್ತರೆ ಆ ದೇವತೆಗಳಿಗೆ ಮತ್ತಾರು ಗತಿ? ಹೀಗೆ ಕೆಲಸ ಮಾಡುವ ಜನ ಬೇರೆ ಸಿಗಬೇಕಲ್ಲ! ಆದುದರಿಂದ ನಮಗೂ ಸ್ವರ್ಗಾಧಿಪತ್ಯದ ಸಮಪಾಲು ಸಿಗಲೇಬೇಕು.

**ಊರ್ವಶಿ**—ಈತನಕದ ನಮ್ಮ ಸೇವೆಯ ಪ್ರತಿಫಲವಾಗಿ ಮೂರು ವರ್ಷಗಳ ಅಮೃತವೂ ನಮಗೇ ಸಿಗಬೇಕು.

**ಗರುಡ**—(ತಲೆದೂಗಿ ಮೂಗು ತುರಿಸುತ್ತ) ಸಹಜ ಸಹಜ. ಅದು ನ್ಯಾಯ. ನೀವಲ್ಲದಿದ್ದರೆ ಆ ಹಾಳು ಸ್ವರ್ಗಕ್ಕೆ ಯಾರು ಬರುತಿದ್ದರು. ನಿಮ್ಮ ದೇಖಾವೆಯೇ ಅಲ್ಲಿಯ ದೊಡ್ಡ ಆಕರ್ಷಣೆ!

**ರಂಭೆ**—(ಹೆಮ್ಮೆಯಿಂದ) ಸ್ವರ್ಗದ ಭಂಡವಾಳವೇ ನಾವು!

**ಊರ್ವಶಿ**—ನಾವಲ್ಲದಿದ್ದರೆ ಇಂದ್ರ ಪಟ್ಟವನ್ನು ಈತನಕವೇ ಯಾರಾದರೊಬ್ಬ ಸನ್ಯಾಸಿ ಹೊಡೆದುಹಾಕಿ ಬಿಡುತಿದ್ದ!

**ತಿಲೋತ್ತಮೆ**—ನಮ್ಮ ಪರಿಶ್ರಮದಿಂದಾಗಿ ಸ್ವರ್ಗವು ಸ್ವರ್ಗವಾಗಿ ಉಳಿದಿದೆ!

**ನಂದಿ**—ಹೀಗಿದ್ದೂ ನಿಮ್ಮನ್ನೆಲ್ಲ ಕಡೆಗಣಿಸುವುದು ತೀರಾ ಅನ್ಯಾಯ.

**ಸನಕ**—ಅದಕ್ಕಾಗಿಯೇ ಈಗಲೇ ನಿರ್ಧಾರವಾಗಬೇಕಾಗಿದೆ.

**ಭೃಂಗಿ**—ನಿರ್ಧಾರವಾಗುವುದೇನಿದೆ? ನಾವೆಲ್ಲಾ ನಿರ್ಧಾರ ಮಾಡಿಕೊಂಡೇ ಬಂದಿರುವೆವು.

**ಶೃಂಗಿ**—ನಮ್ಮ ನಿರ್ಧಾರವನ್ನು ತಿಳಿದು ನಮ್ಮನ್ನು ಮೋಸಗೊಳಿಸಲು ಲಾಲಸೆ ತೋರಿಸಬಹುದು. ನಮ್ಮ ಸಂಘಟನೆಯನ್ನು ಮುರಿಯಬಹುದು. ಅಧಿಕಾರ ಬಲದಿಂದ ನಮ್ಮನ್ನು ಬಗ್ಗುಬಡಿಯಬಹುದು. ಅದಕ್ಕೆ ನಾವೆಂದೂ ಸೋಲಬಾರದು. ನಮ್ಮ ಹಿತಕ್ಕಾಗಿ ನಾವು ಕೊನೆಯತನಕವೂ ಹೋರಾಡಲೇ ಬೇಕು!

**ಗರುಡ**—ವಿಷ್ಣುವಾದರೇನು?

**ಸನಕ**—ಬ್ರಹ್ಮನಾದರೇನು?

**ನಂದಿ**—ಈಶ್ವರನಾದರೇನು?

**ರಂಭೆ**—ಇಂದ್ರನಾದರೇನು?

**ಎಲ್ಲರೂ**—ಯಾರಾದರೇನು? ಏನೇ ಬರಲಿ—ಒಗ್ಗಟ್ಟಿರಲಿ! ಇನ್ಕಿಲಾಬ್ ಜಿಂದಾಬಾದ್—ಟ್ರೇಡ್ ಯೂನಿಯನ್ ಜಿಂದಾಬಾದ್!

(ತುಂಬುರ ನಾರದರ ಪ್ರವೇಶ)

ಇಬ್ಬರೂ– (ಕೈಯೆತ್ತಿ) ಭಲೆ– ಭಲೆ– ನಿಮ್ಮ ಒಗ್ಗಟ್ಟಿಗೆ ಮೆಚ್ಚಿದೆವು.

**ನಾರದ**—ಇಂತಹ ಒಗ್ಗಟ್ಟಿನಿಂದ ಯಾರನ್ನೂ ತಲೆತಗ್ಗಿಸಬಹುದು.

**ತುಂಬುರ**— ನಿಮ್ಮ ನ್ಯಾಯವಾದ ಬೇಡಿಕೆಗಳು ಕೈಗೂಡುವುದರಲ್ಲಿ ಸಂದೇಹವೇಯಿಲ್ಲ!

**ನಾರದ**—ಆದುದರಿಂದ ನಿಮ್ಮ ಈ ಸಂಘಟನೆಗೆ ಮೆಚ್ಚಿ ಇದಕ್ಕೆ ಶಿಖರಪ್ರಾಯವಾಗಿ (ಜೋಳಿಗೆಯಿಂದ ಕೆಂಪು ಬಾವುಟವನ್ನು ಹೊರತೆಗೆದು) ಇದನ್ನು ನಿಮ್ಮ ಕೈಗೆ ಕೊಡಲಿದ್ದೇನೆ.

**ತುಂಬುರ**—ಇದರ ಗೌರವವನ್ನು ಕಾಯುವ ಭಾರ ನಿಮ್ಮದು.

**ಎಲ್ಲರೂ**— ಲಾಲ್ ಝುಂಡೇಕೀ ಜಿಂದಾಬಾದ್!—

**ನಾರದ**—ಆದುದರಿಂದ ಈಗಲೇ ಇದರ ಆಶ್ರಯದಿಂದ ನಿಮ್ಮ ನಿಮ್ಮ ಸ್ಥಾನಗಳನ್ನು ಸೇರಿ ಸಂಪುಹೂಡಿರಿ!

**ತುಂಬುರ**—ಅನ್ನ ಸತ್ಯಾಗ್ರಹವನ್ನು ಮಾಡಿರಿ!

**ನಾರದ**—ನಿಮ್ಮ ಬೇಡಿಕೆಗಳು ಸಿಗುವನಕವೂ ಹೋರಾಡಿರಿ –ಹಿಂಜರಿಯಬೇಡಿರಿ.

**ತುಂಬುರ**—ಇದಕ್ಕೂ ಆ ಮೂರ್ಖ ಧನಿಕರು ಬಗ್ಗದೆ ಹೋದರೆ ಆಗ—ಕ್ರಾಂತಿ!

**ನಾರದ**—ರಕ್ತ ಕ್ರಾಂತಿ!

**ಎಲ್ಲರೂ**— ಹಾಗೆಯೇ ಮಾಡುವೆವು. (ಎಂದು ಪ್ರತಿಜ್ಞೆ ಮಾಡುವರು)

**ತುಂಬುರ ನಾರದರು**—(ಕೈಯೆತ್ತಿ) ತಥಾಸ್ತು—ಶುಭಮಸ್ತು–ಶುಭಮಸ್ತು! (ಎಲ್ಲರೂ ಸಾಲುಗಟ್ಟಿ ಪತಾಕೆ ಹಿಡಿದುಕೊಂಡು) ಇನ್ಕಿಲಾಬ್ ಜಿಂದಾಬಾದ್—ಟ್ರೇಡ್ ಯೂನಿಯನ್ ಜಿಂದಾಬಾದ್ ! ಲಾಲ್ ಝುಂಡೇಕೀ ಜಿಂದಾಬಾದ್ ! (ತೆರಳುವರು)

**ನಾರದ**—(ನಗುತ್ತ) ಹೇಗಿದೆ ತುಂಬುರ?

**ತುಂಬುರ**—ಸಾರ್ಥಕವಾಯಿತು ನಾರದ—ಸಾರ್ಥಕವಾಯಿತು! ಇನ್ನು ವಿಷ್ಣುವು ಬೆರಳು ಕಚ್ಚಲಿದ್ದಾನೆ!

**ನಾರದ**—ಬ್ರಹ್ಮನು ತಲೆದೂಗಲಿದ್ದಾನೆ!

**ತುಂಬುರ**—ಈಶ್ವರನು ಕಣ್ಣು ಕಣ್ಣು ಬಿಡಲಿದ್ದಾನೆ! ಇಂದ್ರನೋ!—

**ನಾರದ**—(ಕನಿಕರದಿಂದ) ಪಾಪ! ಆ ಬಡಪ್ರಾಣಿಗೆ ಗತಿಯೇಯಿಲ್ಲ! ಚೆನ್ನಾಯಿತು! ಚೆನ್ನಾಯಿತು! ಈ ದೇವತೆಗಳ ಗರ್ವಭಂಗಕ್ಕೆ ಮೂಲ ಪೀಠಿಕೆಯನ್ನು ಬರೆದಂತಾಯಿತು. ಬಾ ನಾವಿನ್ನು ಹೋಗೋಣ, ಅದಕ್ಕೆ ಇನ್ನೂ ಗಾಳಿಯೂದೋಣ!

**ತುಂಬುರ**—ಸರಿ ಸರಿ ಹೋಗೋಣ!

(ಇಬ್ಬರೂ ಹೋಗುತ್ತಾ)

ದೇವಾದಿದೇವ ಜಗದೇಕಗುರು ಸುತ್ರಾಮ
ಶ್ರೀ ರಮಾರಮಣಾ—ಶ್ರೀ ರಮಾರಮಣಾ
ಅಮಿತಗುಣಗಣಪೂರ್ಣ ಸತ್ಯಾರ್ಣವಾ ದೇವ
ಶ್ರೀ ರಮಾರಮಣಾ—ಶ್ರೀರಮಾರಮಣಾ—

ಅಂಕ ೧ ದೃಶ್ಯ ೭ ಮಹಲು

(ಸ್ವರ್ಗ ಲೋಕದಲ್ಲಿ ಶಚೀ—ಇಂದ್ರರು ಸಿಂಹಾಸನದ ಮೇಲೆ ಕುಳಿತಿರುವರು. ಸುತ್ತ ಹಲಕೆಲವು ದೇವತೆಗಳು ಆಸೀನರಾಗಿರುವರು. ಶಚಿಯು ಸಿಗರೇಟು ಸೇದುತಿರುವಳು)

**ಇಂದ್ರ**—(ಅಪ್ಸರೆಯರೊಡನೆ)ಆಗಲಿ. ನಿಮ್ಮ ನರ್ತನವು ಸಾಗಲಿ. ನರ್ತನದಿಂದಲೆಂತೋ ಅಂತೆಯೇ ಅಮೃತದಿಂದಲೂ ನಮ್ಮ ಮನಸ್ಸಂತೋಷವನ್ನು ಮಾಡಿರಿ.

**ತಿಲೋತ್ತಮೆ**—(ಅಮೃತವನ್ನು ತೆಗೆದು ತಾನೇ ಕುಡಿದು)ನರ್ತನದಿಂದಲೂ ನಿಮ್ಮ ಮನಸ್ಸಂತೋಷವಾಗುವುದಿಲ್ಲ. ಅಮೃತದಿಂದಲೂ ಆಗುವುದಿಲ್ಲ.

**ರಂಭೆ**—(ಸಿಡುಕಿನಿಂದ)ಮೊತ್ತಮೊದಲಿಗೆ ನಮ್ಮ ಮನಸ್ಸಂತೋಷವಾಗಬೇಕಾಗಿದೆ!

**ದೇವತೆಗಳು**—(ಆಶ್ಚರ್ಯದಿಂದ)ಏನಿದು ಏನಿದು? ವಿಪರೀತ!

**ಇಂದ್ರ**—(ಸಾಕೂತವಾಗಿ)ಅಮೃತಪಾನದಿಂದಾಗಿ ಇಂದು ಅಪ್ಸರೆಯರ ಮೆದುಳು ಕೆಟ್ಟಂತಿದೆ. ಆದರೂ ನಾವು ಈ ಅಪಚಾರವನ್ನು ಕ್ಷಮಿಸಿರುವೆವು.

**ತಿಲೋತ್ತಮೆ**—ಮೆದುಳು ಇಲ್ಲದಿರುವುದರಿಂದಲೇ ಕೆಡಲು ಸಾಧ್ಯವಿಲ್ಲ.

**ಊರ್ವಶಿ**— ಮೆದುಳು ಇದ್ದಿದ್ದರೆ ಈ ತನಕವೂ ಪರರಿಗಾಗಿ ಈ ಸ್ವರ್ಗದಲ್ಲಿ ಆಯುಷ್ಯ ಕಳೆಯುತಿದ್ದೆವೇ?

**ಶಚಿ**—(ಗರ್ವದಿಂದ) ಸಾಕು ಸಾಕು. ಹಾಸ್ಯಕ್ಕೂ ಒಂದು ಮಿತಿಯಿದೆ! (ಎಂದು ಹೊಗೆ ಬಿಡುವಳು)

**ರಂಭೆ**—(ದಟ್ಟಿಸಿ ತನ್ನನ್ನು ತೋರಿಸಿಕೊಂಡು) ಅಂತೆಯೇ ಸೇವೆಗೂ ಒಂದು ಮಿತಿಯಿದೆ! (ಶಚಿಯನ್ನು ತೋರಿಸಿ) ಆಡಂಬರಕ್ಕೂ ಒಂದು ಮಿತಿ ಯಿದೆ! ಇಂದಿನ ಅಮೃತವು ನಮಗೆ ಮಾತ್ರ ಸಿಗಬೇಕಾಗಿದೆ! (ಎಂದು ಕುಡಿಯುವಳು)

**ತಿಲೋತ್ತಮೆ**—ಇಂದೇನು? ಇನ್ನು ಮೂರು ವರ್ಷಗಳ ತನಕವೂ ನಮ್ಮ ಹೊರತು ಮತ್ತಾರಿಗೂ ಸಿಗುವಂತಿಲ್ಲ.

**ಊರ್ವಶಿ**—ಇದೇ ನಮ್ಮ ನಿರ್ಧಾರ (ಇಬ್ಬರೂ ಕುಡಿಯುವರು)

**ಇಂದ್ರ**—(ಬೇಸರದಿಂದ) ಅಪ್ಸರೆಯರೆ! ಇಂದಿನ ನಿಮ್ಮ ಪರಿಯನ್ನು ಕಂಡರೆ ಬಹಳ ದುಃಖವಾಗುತ್ತದೆ.

**ರಂಭೆ** ನಾವೂ ಬಹಳ ದುಃಖವಾಗಿಯೇ ಈ ಪ್ರವೃತ್ತಿಯನ್ನು ಕೈಗೊಂಡಿರುವೆವು. ಮತ್ತೇನಲ್ಲ.

**ಇಂದ್ರ**—(ಗರ್ವದಿಂದ) ನನ್ನ ಸಹನೆಗೂ ಒಂದು ಮಿತಿಯಿದೆ!

**ಅಪ್ಸರೆಯರು**—ನಮಗೂ ಸಹ ಅದೇ ರೀತಿ!

**ರಂಭೆ**—ಇಂದ್ರನೇ ಕೇಳು!

**ಶಚಿ** (ಗಾಬರಿಯಿಂದ) ಏನಿದು ಏಕವಚನ?

**ರಂಭೆ**—ಒಬ್ಬನಿಗೆ ಒಂದೇ ವಚನ. ನಿಮ್ಮಿಬ್ಬರಿಗಾದರೆ ಬಹುವಚನ.

**ಊರ್ವಶಿ**—ನಮ್ಮಲ್ಲಿ ಮೇಲು ಕೀಳೆಂಬ ಭೇದವಿಲ್ಲ.

**ತಿಲೋತ್ತಮೆ**—ಆದುದರಿಂದಲೇ ನಮ್ಮ ನಮ್ಮ ಹಕ್ಕು ಬಾಧ್ಯತೆಗಳಿಗಾಗಿ ನಾವು ಒಂದಾಗಿ ಹೋರಾಡುವೆವು!

**ಇಂದ್ರ** –(ಗರ್ವದಿಂದ ಸುತ್ತಲೂ ನೋಡಿ) ಯಾರಲ್ಲಿ? ಪ್ರತೀಹಾರಿ! ಈ ಸೂಳೆಯರನ್ನು ಅತ್ತ ದಬ್ಬಿಬಿಡು.

(ಯಾರೂ ಮುಂದೆ ಬರುವುದಿಲ್ಲ)

**ರಂಭೆ**—(ನಗುತ್ತ) ಇಂದ್ರನೇ! ಈಗಿಂದೀಗ ನಿನಗೆ ನಾವು ಸೂಳೆಯರೆಂಬ ಜ್ಞಾನೋದಯವಾಯಿತಲ್ಲ! ಬಹಳ ಸಂತೋಷ.

**ತಿಲೋತ್ತಮೆ**—ಆದರೆ ಈ ಸ್ವರ್ಗಲೋಕವು ಇಂತಹ ಸೂಳೆಯರಿಂದಲೇ ಕಾಯಲ್ಪಟ್ಟಿದೆ ಎಂಬುದನ್ನು ಸ್ವಲ್ಪ ಯೋಚಿಸಿ ನೋಡು. ಮಾನವಂತರಿಂದಲ್ಲ!

**ಊರ್ವಶಿ**—ಆ ಪುರೂರವ—

**ತಿಲೋತ್ತಮೆ**—ಆ ಸುಂದೋಪಸುಂದರು—

**ರಂಭೆ**—ಮತ್ತೆ ಆ ಮಹಾ ಮಹಾ ತಪಸ್ವಿಗಳು. ಇವರ ಹಾವಳಿಯಿಂದ ಈ ಸ್ವರ್ಗವನ್ನು ಈ ಸೂಳೆಯರೇ ರಕ್ಷಿಸಿದ್ದಾರೆ ಎಂಬುದು ತುಸು ನೆನಪಿಗೆ ಬರಲಿ!

**ಇಂದ್ರ**—(ಚೆರಗಾಗಿ) ಏನಿದು ಅನಾಹುತ!

**ಶಚಿ**—ಅಸಂದರ್ಭ—ಇದಕ್ಕೆ ಅರ್ಥವೇಯಿಲ್ಲ!

**ಇಂದ್ರ**—(ಸುತ್ತಲೂನೋಡಿ) ಎಲೈ ದೇವತೆಗಳಿರಾ!

**ಅಗ್ನಿ**—ಅಪ್ಪಣೆಯಾಗಲಿ. ಇವರನ್ನು ಸುಟ್ಟುಬಿಡಲೆ?

**ವರುಣ**—ಮುಳುಗಿಸಿಯೇ ಬಿಡಲೇ?

**ರಂಭೆ**—(ಅಟ್ಟಹಾಸದಿಂದ) ಹಾಗಾದರೆ ನಿಮಗೆ ಒಂದು ಗುಟುಕೂ ಅಮೃತವು ಸಿಗುವಂತಿಲ್ಲ. (ಎಂದು ಮೂವರೂ ಕುಡಿಯುವರು)

**ದೇವತೆಗಳು** (ಬೆಪ್ಪು ಮುಖದಿಂದ) ಇಲ್ಲ ಇಲ್ಲ- ಹಾಗಾಗಬಾರದು!

**ಇಂದ್ರ**—ಛೆ! ಇದು ತೀರಾ ಅಸಂಬದ್ಧ!

**ಶಚಿ**—(ಆಶಂಕೆಯಿಂದ) ಇದರಲ್ಲೇನೋ ಗೂಢ ಕಾರಸ್ಥಾನವಿದೆ!

**ರಂಭೆ**—ಇದು ಗೂಢ ಕಾರಸ್ಥಾನವಲ್ಲ. ಮನಸ್ಸಿನ ವೇದನೆ. ಈ ನಾಲ್ಕು ಯುಗಗಳಿಂದಲೂ ಧರ್ಮಾರ್ಥವಾಗಿ ದುಡಿಸಿಕೊಂಡ ದೌಲತ್ತಿನ ಪರಿಣಾಮ! ಇದನ್ನು ಅನುಭವಿಸಲೇ ಬೇಕು.

**ಊರ್ವಶಿ**—ನಮ್ಮ ಬೇಡಿಕೆಗಳು ಪೂರೈಸಲ್ಪಡಲೇ ಬೇಕು!

**ಇಂದ್ರ**—(ನಿರುಪಾಯನಾಗಿ) ಏನದು ಬೇಡಿಕೆ?

**ರಂಭೆ**—ನೂರು ವರ್ಷಗಳ ಅಮೃತವೂ ನಮಗೇ ಸಿಗಬೇಕು.

**ದೇವತೆಗಳು**—ಸಾಧ್ಯವಿಲ್ಲ-ಎಂದಿಗೂ ಸಾಧ್ಯವಿಲ್ಲ!

**ತಿಲೋತ್ತಮೆ**—ಈ ದೇವಲೋಕದ ಆಧಿಪತ್ಯವು ಕೆಲವು ಕಾಲವಾದರೂ ನಮ್ಮ ಕೈಯೊಳಗಿರಬೇಕು!

**ಇಂದ್ರ**—(ಆಟೋಪದಿಂದ) ಆಃ ದುರಾತ್ಮರೇ! ನಿಮ್ಮನ್ನೀಗಲೇ ಈ ವಜ್ರಾ ಘಾತದಿಂದ ಸೀಳಿಬಿಡುವೆನು! (ಹಿಂದಕ್ಕೆ ಕೈಚಾಚಿ ವಜ್ರಾಯುಧ ವನ್ನು ಕಾಣದೆ ಬೇಸತ್ತು) ಆಹಾ! ನಿಮ್ಮ ಕಾರಸ್ಥಾನವೆ! ನನ್ನ ವಜ್ರಾ ಯುಧವನ್ನು ಅಡಗಿಸಿಟ್ಟಿರುವಿರೆ? ಆಗಲಿ ಚಿಂತಿಲ್ಲ. ನನ್ನ ಈ ಬಾಹು ಬಲದಿಂದಲೇ ನಿಮ್ಮನ್ನು ನಿರ್ಮೂಲಮಾಡಿ ಬಿಡುವೆನು! (ಎದ್ದು ನಿಲ್ಲುವನು)

**ಶಚಿ**—(ಕೈಹಿಡಿದು) ಪ್ರಾಣನಾಥ! ಈ ಹೆಂಗಸರೊಡನೆ ಶೌರ್ಯವನ್ನು ತೋರಿಸಿ ಪ್ರಯೋಜನವಿಲ್ಲ.

**ರಂಭೆ**—(ಉಪಹಾಸದಿಂದ) ಈ ತನಕವೂ ಶೌರ್ಯವನ್ನು ತೋರಿಸಿದುದೂ ಹೆಂಗಸರೊಡನೆಯೇ ಅಲ್ಲದೆ ಮತ್ತಾರೊಡನೆ?

(ಇಂದ್ರನು ಏನೂ ತೋಚದೆ ಸುಮ್ಮನೆ ಕುಳಿತುಕೊಳ್ಳುವನು)

**ಶಚಿ**—ಪ್ರಾಣಕಾಂತ! ಬೇಸರಪಡಬೇಡಿರಿ. ಈ ಸೂಳೆಯರಿಗೆ ಇಷ್ಟು ಸಲುಗೆ ಕೊಟ್ಟುದು ತಪ್ಪೆಂದು ನಾನು ಮೊದಲೇ ತಿಳಿಸಿದ್ದೆ. ಚಿಂತಿಲ್ಲ. ಇದಕ್ಕಾಗಿ ಈಗ ದುಃಖಿಸಿ ಪ್ರಯೋಜನವಿಲ್ಲ. ವಿಷ ವೃಕ್ಷವನ್ನಾದರೂ ಕಡಿಯುವುದರಲ್ಲಿ ನ್ಯಾಯವಿಲ್ಲ!

**ತಿಲೋತ್ತಮೆ**—(ನಗುತ್ತಾ) ಒಳ್ಳೆಯ ಆತ್ಮ ಸಮಾಧಾನ!

**ಶಚಿ**—ಅದನ್ನೆಲ್ಲ ಕಿವಿಗೆ ಹಾಕಿಕೊಳ್ಳಬೇಡಿರಿ. ಈ ಕುರಿತು ನಾವು ಬೃಹ ಸ್ಪತಿಯೊಡನೆ ಮಂತ್ರಾಲೋಚನೆ ಮಾಡುವುದು ಯುಕ್ತವಾಗಿದೆ. ಆದುದರಿಂದ ನಿಮ್ಮ ಮನಃಶಾಂತಿಗಾಗಿ ಇದನ್ನು ತೆಗೆದುಕೊಳ್ಳಿರಿ (ಸಿಗರೇಟು ಕೊಡುತ್ತ) ನಿಮ್ಮ ವಜ್ರಾಯುಧವನ್ನು ಹಿಡಿದ

ಕೈಯನ್ನು ಇದು ಅಲಂಕರಿಸಲಿ. ನಿಶ್ಚಿಂತರಾಗಿರಿ! (ಇಂದ್ರನು ಸಿಗರೇಟು ಸೇದುತ್ತ ಮುಂಗಾಣದೆ ಕುಳಿತು ಬಿಡುವನು.)

ರಂಭೆ—(ದರ್ಪದಿಂದ) ನನ್ನ ಸೋದರಿಯರೆ—ಸೋದರರೆ! ಈ ಅಮೃತವು ನಮ್ಮದು! ನಮ್ಮ ಹಕ್ಕು ಬೇಡಿಕೆಗಳನ್ನು ಯಥೇಷ್ಟವಾಗಿ ಹೊಂದೋಣ. ಬನ್ನಿರಿ! (ಎಲ್ಲರೂ ಕುಳಿತು ಕುಡಿಯುತ್ತ) ಇನ್ಕಿಲಾಬ್ ಜಿಂದಾಬಾದ್–ಟ್ರೇಡ್ ಯೂನಿಯನ್ ಜಿಂದಾಬಾದ್! (ಅಂತೆಯೇ ಅವರೆಲ್ಲರೂ ಬೊಬ್ಬಿಡುವರು. ಇಂದ್ರಾದಿಗಳು ಕಿವಿಗೆ ಕೈಹಿಡಿದು ಕಣ್ಣು ಮುಚ್ಚಿ ಕುಳಿತಿರುವರು.)

## ಮೊದಲನೇ ಅಂಕ ಮುಗಿದುದು

(ಬ್ರಹ್ಮನು ಹಿಂದಿರುಗಿ ನೋಡುತ್ತ ನೋಡುತ್ತ ಬಂದು ಇದಿರುಗಡೆಯಿಂದ ಬಂದ ವಿಷ್ಣುವನ್ನು ಕಾಣದೆ ಡಿಕ್ಕಿ ಹೊಡೆದು ಗಾಬರಿಯಿಂದ)

ಬ್ರಹ್ಮ—ಆಹಾ! ಯಾವ ಮಹಾ ಸನ್ನಿಧಿಗೆ ಹೋಗಬೇಕೆಂದು ಬಯಸಿ ಹೊರಟಿದ್ದೆನೋ ಅದನ್ನು ಮಾರ್ಗದಲ್ಲೇ ಡಿಕ್ಕಿ ಹೊಡೆದು ಕಂಡಿರುವೆನಲ್ಲ! ಮಹಾವಿಷ್ಣುವಿಗೆ ನಮಸ್ಕರಿಸುವೆನು.

ವಿಷ್ಣು—(ಪೀತಾಂಬರದ ನಿರಿ ಸರಿಗೊಳಿಸುತ್ತ) ಚತುರ್ಮುಖ! ಏನಿದು ಇಷ್ಟು ಗಡಿಬಿಡಿಯಿಂದ ಹೊರಟಿರುವಿ? ಅದೂ ಈ ಅಕಾಲದಲ್ಲಿ!

ಬ್ರಹ್ಮ—ಹೊರಡದೆ ಮತ್ತೇನು ಮಾಡಲಿ?

ವಿಷ್ಣು—ಅದೇನು ಅಂತಹ ಸಂದರ್ಭ?

ಬ್ರಹ್ಮ—ಕಷ್ಟ ಬಂದವರಿಗೆ ಸಂದರ್ಭವೇನು ಅಸಂದರ್ಭವೇನು? ಸತ್ಯಲೋಕವೇ ಕುದಿದಿರುವಾಗ ಅಲ್ಲಿ ಹೇಗೆ ಕುಳಿತಿರಲಿ? ಅದಕ್ಕಾಗಿ ನಿನ್ನ ಶರಣುಗೊಳ್ಳಲು ಹೊರಟಿದ್ದೆನು. ಮಹಾವಿಷ್ಣು! ನೀನೇ ಶರಣು ಶರಣು!

ವಿಷ್ಣು—(ಅವನ ಕೈ ಹಿಡಿದು) ಬ್ರಹ್ಮ! ನಿನ್ನ ದುಃಖವನ್ನು ನಾನು ಹೇಗೆ ಪರಿಹರಿಸಲಿ?

ಬ್ರಹ್ಮ—(ಆಶ್ಚರ್ಯದಿಂದ) ಮಹಾ ಪ್ರಭೋ! ಇದೇನು ಮಾತು? ನಿನ್ನ ಹೊರತು ಮತ್ತಾರು ನಮ್ಮನ್ನು ಕಾಪಾಡಬೇಕು!

ವಿಷ್ಣು—ಆಗಲಿ. ನಿನ್ನ ಕಷ್ಟಗಳನ್ನು ಹೇಳಿಕೊಳ್ಳು. ಏನಾಯಿತು?

ಬ್ರಹ್ಮ—ಪ್ರಭೋ! ನಾನು ಸತ್ಯಲೋಕವನ್ನು ಇನ್ನು ಹೇಗೆ ಪರಿಪಾಲಿಸಬೇಕು? ನಿನ್ನ ಸ್ಥಿತಿಗತಿಗಳಿಂದಾಗಿ ಈತನಕವೂ ಯಾವ ತೊಂದರೆಯೂ ಇಲ್ಲದೆ ನಿರಾತಂಕವಾಗಿ ಬ್ರಹ್ಮಾಂಡ ಪುರಾಣದ ಪುಟ ತುಂಬಿಸುತಿದ್ದೆ. ಆದರೆ—ಆದರೆ (ದುಃಖಿಸುವನು)

ವಿಷ್ಣು—(ಸಂತೈಸಿ) ಏನಾಯಿತು? ಮುಂದೆ ಹೇಳು.

ಬ್ರಹ್ಮ—ಏನು ಹೇಳಲಿ? ಹೇಳಲು ನಾಚುಗೆಯಾಗುತ್ತಿದೆ. ನನ್ನ ಪುರಾಣಗಳನ್ನು ಬರೆಯುತ್ತಿರುವ ಕೆಲಸವನ್ನು ಸರಸ್ವತಿಯು ಬಿಟ್ಟುಕೊಟ್ಟಿರುವಳು. ಮತ್ತೆ ನನ್ನ ಸುತ್ತ ಮುತ್ತಲಿನ ಮುನಿಗಳಿಂದ ಬರೆಯಿಸುತ್ತ ಬರುತ್ತಿದ್ದೆ. ಅದೂ ಕೂಡಾ ಕಟ್ಟಕಡೆಗೆ—

ವಿಷ್ಣು—ಕಟ್ಟಕಡೆಗೆ ಏನಾಯಿತು ? ಹೇಳು.

ಬ್ರಹ್ಮ—(ಮುಖಮುಚ್ಚಿಕೊಂಡು) ಕಟ್ಟಕಡೆಗೆ ಅದನ್ನು ಅವರು ಬರೆಯಲೊಪ್ಪದೆ ನನ್ನ ಪುಸ್ತಕವನ್ನೆಲ್ಲಾ ಹರಿದು ಬಿಸುಟುಬಿಟ್ಟರು !

ವಿಷ್ಣು—(ಗಾಬರಿಯಿಂದ) ಅಹಾ! ಮಹಾ ಅನ್ಯಾಯ! ಬ್ರಹ್ಮಾಂಡ ಪುರಾಣವೇ ತೀರಿಹೋಯಿತೆ ? ಹಾಗಾದರೆ ಇನ್ನು ಪ್ರಪಂಚವು ಹೇಗೆ ನಡೆಯಬೇಕು ? ನನ್ನ ಮಿಾನಾವತಾರದ ಪ್ರಯೋಜನವೇನು ? ಇನ್ನು ಆ ಸರಸ್ವತಿಗಾದರೂ ನೆನಪಿರಬಹುದೆ ?

ಬ್ರಹ್ಮ—(ಹಣೆ ಬಡಿದುಕೊಂಡು) ಅಯ್ಯೋ! ಆ ಮಾತನ್ನು ಕೇಳಬೇಡ. ಮೊತ್ತಮೊದಲಿಗೆ ಅವಳಿಗೆ ಅದೆಲ್ಲಾ ನೆನಪಿದ್ದಿತ್ತು. ಆದರೆ ಈಗ ಜಾಕಿ ನೈಲದ ಹೊರತು ಮತ್ತೇನೂ ನೆನಪಿರುವುದಿಲ್ಲ! ಅದಕ್ಕಾಗಿಯೇ ದುಃಖದಿಂದ ನಿನ್ನ ಕಡೆ ಹೊರಟಿರುವೆನು. ನೀನೇ ನನ್ನನ್ನು ಕಾಯಬೇಕು. ಮತ್ತೆ ನನ್ನ ಹಣೆಬರಹವನ್ನು ತಿದ್ದಿ ಬೇರೆ ಬರೆಯಬೇಕು!

ವಿಷ್ಣು—(ನಿಟ್ಟುಸಿರು ಬಿಟ್ಟು) ಸಹಜ. ಆದರೆ—ಚತುರ್ಮುಖ!—

**ಬ್ರಹ್ಮ**—(ಆಶ್ಚರ್ಯದಿಂದ) ಏನಿದು ಪ್ರಭೋ? ನೀನೂ ಉದಾಸೀನನಾಗುತ್ತಿರುವೆ? ನಿನ್ನ ಧರ್ಮರಕ್ಷಣೆಯ ಉತ್ಸಾಹವೆಲ್ಲಿ? ಯದಾ ಯದಾಹಿ ಧರ್ಮಸ್ಯ—ಎಂದ ನಿನ್ನ ಉದ್ದೇಶವೆಲ್ಲಿ? ಇದೇನು ಸರ್ವವೂ ವಿಕಲ್ಪವಾಗಿದೆ?

**ವಿಷ್ಣು**—(ನಿರುತ್ಸಾಹದಿಂದ) ಬ್ರಹ್ಮ! ನೀನು ಹೇಳುವುದೆಲ್ಲಾ ಸಹಜ. ನಾನು ಧರ್ಮಕ್ಕಾಗಿ ಹಾಗೆ ಡಂಗುರ ಸಾರುವ ವೇಳೆ ನನ್ನ ವಾಹನವಾದ ಗರುಡ-ನನ್ನ ಆಯುಧವಾದ ಚಕ್ರ-ನನ್ನ ಪರಿವಾರ

**ಬ್ರಹ್ಮ**—(ಕುತೂಹಲದಿಂದ)ಅವೆಲ್ಲಾ ಈಗೇನಾಗಿರುವುವು? ಗರುಡನು ಸತ್ತು ಹೋದನೆ? ಚಕ್ರವು ಬಿಸಾಟುಹೋಯಿತೆ?

**ವಿಷ್ಣು**—(ನಿಟ್ಟುಸಿರು ಬಿಟ್ಟು) ಆ ವಿಚಾರವನ್ನು ಏನೆಂದು ಹೇಳಲಿ? ನಿಜವಾಗಿ ಹೇಳುವುದಾದರೆ ನಾವು ಈ ತನಕವೂ ಪರಾವಲಂಬಿಗಳಾದುದು ಹೆಚ್ಚಾಯಿತು. ಇದು ಅದರ ಪರಿಣಾಮ! ನಮ್ಮ ಕಾಲಲ್ಲೇ ನಾವು ನಡೆಯುತಿದ್ದರೆ ನಮ್ಮ ಕೈಯಲ್ಲೇ ನಾವು ಯುದ್ಧ ಮಾಡುತಿದ್ದರೆ ಈ ತೊಂದರೆ ಬರುತ್ತಿರಲಿಲ್ಲ!

**ಬ್ರಹ್ಮ**—ವಿಷ್ಣುವೇ! ನಾನು ನನ್ನ ಕಷ್ಟಗಳನ್ನು ನಿನ್ನ ಬಳಿ ಹೇಳಿಕೊಳ್ಳಲು ಬಂದರೆ ನಿನ್ನದನ್ನೇ ಈಗ ಕೇಳಿಕೊಳ್ಳುವ ಕಾಲವು ಬಂದಿತಲ್ಲ! ಅಯ್ಯೋ ದೇವರೆ!

**ವಿಷ್ಣು**—(ಪೀತಾಂಬರದಿಂದ ಕಣ್ಣೀರನ್ನು ಒರಸಿ ಕೊಳ್ಳುತ್ತ)ನೋಡು-ಕಣ್ಣೀರಿನಿಂದ ನನ್ನ ಪೀತಾಂಬರವು ಒದ್ದೆಯಾಗಿ ಹೋಗಿದೆ! ನನ್ನ ಕಾಲಿನಿಂದಲ್ಲ—ಕಣ್ಣೀರಿನಿಃದಲೇ ಗಂಗಾವತಾರ!

**ಬ್ರಹ್ಮ**—(ದುಃಖದಿಂದ ತಬ್ಬಿಕೊಂಡು) ಅಯ್ಯೋ ಪಿತನೆ! ತಂದೆಯ ದುಃಖವನ್ನು ನೋಡುವುದು ಮಗನ ಕರ್ತವ್ಯವಲ್ಲ. ಆದರೆ ನಾನೇನು ಮಾಡಲಿ? ಯಾರೊಡನೆ ದೂರು ಹೇಳಲಿ? ತಂದೆಯೇ? ನಿನಗೇನು ಅಂತಹ ಸಂಕಷ್ಟವು ಬಂದೊದಗಿತು? ಸ್ವಲ್ಪ ಹೇಳಬಾರದೆ? ಮತ್ತೆ ತಂದೆ ಮಕ್ಕಳಿಬ್ಬರೂ ನಾವು ಕುಳಿತು ಗೋಳೋ ಎಂದು ಅತ್ತು ಬಿಡೋಣ!

**ವಿಷ್ಣು**—(ಸ್ವಲ್ಪ ಸಮಾಧಾನದಿಂದ) ಆಹಾ—ಏನು ಹೇಳಲಿ? ಆ ದುರ್ಜನರ ದ್ರೋಹವನ್ನು! ನನ್ನ ಪರಿವಾರವೆಲ್ಲ ನನ್ನ ಹೆಂಡತಿಯಾದ ಸಂಪತ್ತಿನ ಮೇಲೇನೇ ಕಣ್ಣಿಟ್ಟಿಂತಿದೆ. ಮತ್ತೆ ಅವಳ ಕೈಯ ಅಮೃತ ಕಲಶವನ್ನು ಅಪಹರಿಸಿ ಓಡಿಹೋಗಿರುವರು. ನಾನಿನ್ನು ಯಾರ ಮೇಲೆ ಸವಾರಿಮಾಡಲಿ? ಯಾರ ಮೇಲೆ ಮಲಗಲಿ? ಯಾರಿಂದ ಹೊಗಳಿಸಿಕೊಳ್ಳಲಿ? ಹೊಗಳಿಸಿಕೊಳ್ಳದಿದ್ದರೆ ನನಗೆ ನಿದ್ರೆಯೇ ಬರಲಾರದು!

**ಬ್ರಹ್ಮ**—(ಸಾಕೂತವಾಗಿ) ಆದರೂ ಮಹಾಲಕ್ಷ್ಮಿಯು ಈ ತನಕ ಸುಖವಾಗಿರುವಳಷ್ಟೆ?

**ವಿಷ್ಣು**—(ತಲೆದೂಗಿ) ಸುಖವಾಗಿರುವಳು. ಆದರೆ ಅವಳ ಸುಖದಲ್ಲಿ ನಾನು ಸತ್ತೇಹೋದೆ! ಅವಳ ಕಸೂತಿಯ ಬಗ್ಗೆ ಸೂಜಿಗೆ ನೂಲುಹಾಕಿ ಹಾಕಿ ನನ್ನ ಕೈಗಳು ಸೋತೇಹೋದುವು!

**ಬ್ರಹ್ಮ**—(ಕನಿಕರದಿಂದ) ತಂದೆಯೇ ಈ ಸ್ತ್ರೀದುಃಖವು ನಿನಗೂ ಪ್ರಾಪ್ತವಾಯಿತೆ? ನಾನಂತೂ ನಿನ್ನ ಸೊಸೆಯೊಡನೆ ಇಸ್ಪೀಟು ಲೆಕ್ಕ ಕೂಡಿಸಿ ಕೂಡಿಸಿ ಬಸವಳಿದು ಬೆಂಡಾಗಿರುವೆನು. ಅಯ್ಯೋ—ತಂದೆಯಂತೆಯೇ ಮಗ! ತಾಯಿಯಂತೆಯೇ ಸೊಸೆ!

**ವಿಷ್ಣು**— ಏನದು—ಏನು ?

**ಬ್ರಹ್ಮ**—ಅದು ಏನೇಯಿರಲಿ. ಅದನ್ನು ಹೇಳದಿರುವುದೇ ಮರ್ಯಾದೆ! (ತಲೆಗೆ ಕೈಯಿಟ್ಟು ಅಲ್ಲೇ ಕುಳಿತು ದುಃಖಿಸುವನು. ವಿಷ್ಣುವೂ ಅವನಿಗೆ ಬೆನ್ನು ಕೊಟ್ಟು ಕುಳಿತು ಕಣ್ಣೀರು ಸುರಿಸುವನು.)

**ಬ್ರಹ್ಮ**—(ಕಿವಿಗೊಟ್ಟು ಕೇಳಿ) ಅದೇನು ಮಹಾ ಆರ್ಭಟ!
(ದೂರದಿಂದ) ಇನ್ಕಿಲಾಬ್ ಜಿಂದಾಬಾದ್—ಟ್ರೇಡ್ ಯೂನಿಯನ್ ಜಿಂದಾಬಾದ್—ಲಾಲ್ ಝಂಡೇಕೀ ಜಿಂದಾಬಾದ್!

ಇಬ್ಬರೂ—(ಒಮ್ಮೆಗೇ ಎದ್ದು ನಿಂತು) ತೀರಿತು—ಇಲ್ಲಿಗೆ ಸಂಪೂರ್ಣ ತೀರಿತು! ಇನ್ನೇನು ಮಾಡಲಿ? (ಸುತ್ತಲೂನೋಡುವರು)

ವಿಷ್ಣು—ಇನ್ನು ಇಲ್ಲಿ ಹೊತ್ತು ಕಳೆದು ಪ್ರಯೋಜನವಿಲ್ಲ. ಅದೋ ನೋಡು, ಆ ದುರ್ಜನರ ಪಿಡುಗು ಪತಾಕೆ ಹಿಡಿದು ಆರ್ಭಟಿ ಸುತ್ತ ಈ ಕಡೆಯೇ ಬರುತ್ತಿದೆ!

ಬ್ರಹ್ಮ—(ಯೋಚಿಸಿ) ಹಾಗಾದರೆ ನಾವು ಕೈಲಾಸಕ್ಕಾದರೂ ಓಡಿ ಹೋಗೋಣ!

ವಿಷ್ಣು—(ತಲೆದೂಗಿ) ಹೌದು. ಬೇರೆ ಉಪಾಯವಿಲ್ಲ. ಕೈಲಾಸಕ್ಕೆ ಈಶ್ವರನ ಸಹಾಯ ಹೊಂದಲು ಹೋಗೋಣ.

(ದೂರದ ಸದ್ದು ಹತ್ತಿರ ಹತ್ತಿರ ಕೇಳಿಸುವುದು. ಬ್ರಹ್ಮ ವಿಷ್ಣುಗಳಿಬ್ಬರೂ ಗಡಿಬಿಡಿಯಿಂದ ಹೋಗುವರು.)

(ಈಶ್ವರನು ವೀರಾಸನದಲ್ಲಿ ಕುಳಿತು ಧೂಮಪಾನ ಮಾಡುತ್ತಿರುವನು. ಪಾರ್ವತಿ ತುಟಿಗೆ ರಂಗು ತಾಗಿಸುತಿರುವಳು. ಸುತ್ತಲೂ ಭೂತಗಳು ನಿಶ್ಚಲಗಳಾಗಿ ಕುಳಿತಿವೆ.)

**ಈಶ್ವರ** (ಹೊಗೆಬಿಟ್ಟು) ಆಹಾ! ಈ ಧೂಮಪಾನ ನಮಗೇನೋ ಚೆನ್ನಾಗಿ ಹಿಡಿಯುತ್ತದೆ. ಯೋಗಿಗಳಿಗೆ ಅಗತ್ಯವಾಗಿ ಬೇಕಾದುದು. ಅದೂ ಈ ಹಿಮವತ್ಪರ್ವತದಲ್ಲಿ ಇದಿಲ್ಲದೇನೇ ನಾವು ಇಷ್ಟು ಕಷ್ಟಪಟ್ಟುದು!

**ಪಾರ್ವತಿ**—(ಕನ್ನಡಿ ನೋಡುತ್ತ) ನಾನೂ ಅದೇನೇ ಹೇಳುತಿದ್ದೇನೆ. ಈ ಧವಳ ಚೂರ್ಣವಿಲ್ಲದೇನೇ---ಈ ರಂಗಿನ ಕಡ್ಡಿ ಬಾರದೇನೇ ನಾನೂ ಇಷ್ಟುದಿನ ಈ ಚಳಿಯಲ್ಲಿ ಸೊರಗಿ ಕಡ್ಡಿಯಾಗಿ ಹೋಗಿದ್ದೆ. ನಿಜವಾಗಿಯೂ ನಾರದನು ಲೋಕ ಪ್ರಿಯನೇ ಸರಿ.

**ಈಶ್ವರ**—(ಸಂಶಯದಿಂದ) ಆದರೆ ನಮ್ಮ ಭಕ್ತರು ನಿನ್ನನ್ನು ಕಂಡರೆ ಏನೆಂದಾರು?

**ಪಾರ್ವತಿ**—(ವ್ಯಂಗ್ಯವಾಗಿ ನಗುತ್ತ) ನಿಮ್ಮ ಹೊಗೆ ಸುರುಳಿಯನ್ನು ಕಂಡು ಏನೆನ್ನುವರೋ ಅದೇ ರೀತಿ ಎಂದಾರು!

**ಈಶ್ವರ** – ಆದರೆ ನೋಡು—ಇದಕ್ಕೂ ಅದಕ್ಕೂ ಬಹಳ ತಾರತಮ್ಯವಿದೆ.

**ಪಾರ್ವತಿ**—ಅದೇ ಅಬದ್ಧ. ತಾರತಮ್ಯ ಜ್ಞಾನವೇ ಜಗತ್ತಿನ ಮಾಯೆ! ನಿಮಗೆ ಬೇಡವಾದಾಗ ನಿಮ್ಮ ಅದ್ವೈತ ಜ್ಞಾನವು ಮರೆತೇ ಹೋಗುತ್ತದೆ. ಬಹಳ ಆಶ್ಚರ್ಯ!

**ಈಶ್ವರ**—ಎಲ್ಲಿ ಮರೆತಿದೆ? ನನ್ನ ಅರ್ಧಾಂಗವನ್ನೇ ನಿನಗೆ ಕೊಡಲಾಗಿ ಅಭೇದ ಜ್ಞಾನ ಸಂಪತ್ತನ್ನೇ ಪ್ರಕಟಿಸಿದ್ದೇನೆ!

**ಪಾರ್ವತಿ**—(ನಸುನಗುತ್ತ ಮತ್ತೊಮ್ಮೆ ಕನ್ನಡಿನೋಡಿ ಪೌಡರಿನ ಕರಡಿಕೆಯ ಬಾಯಿ ಮುಚ್ಚಳ ತೆಗೆದು ಗಾಬರಿಯಿಂದ) ಹಾ-(ಎಂದು ಅರಚುವಳು)

**ಈಶ್ವರ**—(ಗಾಬರಿಯಿಂದ ಎದ್ದು) ಏನಾಯಿತು?

**ಪಾರ್ವತಿ**—(ದುಃಖದಿಂದ) ಅಯ್ಯೋದೈವವೇ!

**ಈಶ್ವರ**—(ಬಳಿಸಾರಿ ಕೈಹಿಡಿದು)ಏನು ಪ್ರಾಣಪ್ರಿಯೆ? ಇದೇಕೆ ಹೀಗೆ ದುಃಖಿಸುತಿದ್ದಿ? ಏನಾಯಿತು ಹೇಳು.

**ಪಾರ್ವತಿ**—ಹೇಳುವುದೇನಿದೆ? ಮೂರು ಕಣ್ಣು ಇದ್ದೂ ಕಾಣುವುದಿಲ್ಲವೆ? (ಕರಡಿಕೆಯನ್ನು ಎತ್ತಿ ತೋರಿಸುವಳು) ನಾನು ಇನ್ನು ಹೇಗೆ ನನ್ನ ಭಕ್ತರಿಗೆ ಮುಖವನ್ನು ತೋರಿಸಲಿ? (ಸಿಟ್ಟಿನಿಂದ) ನಾನು ಮೊನ್ನಿನಿಂದಲೂ ನಿಮ್ಮ ಕೂಡೆ ಹೇಳುತ್ತಾ ಬಂದಿದ್ದೇನೆ. ಆದರೂ ನೀವು ಅಲಕ್ಷ್ಯವಾಗಿ ಕುಳಿತಿದ್ದೀರಲ್ಲ. ನಿಮ್ಮ ಹೊಗೆಬತ್ತಿಯನ್ನೆಲ್ಲ ಆ ಕಣಿವೆಗೆ ಬಿಸುಟು ಬಿಡುವೆನು (ಎಂದು ತೆಗೆದು ಬಿಸುಡುವಳು)

**ಈಶ್ವರ**— (ಗಾಬರಿಯಿಂದ) ಅಯ್ಯೋ! ನನ್ನ ಜ್ಞಾನದ ಕಡ್ಡಿಯನ್ನೇ ಹಾಳುಗೆಡಹಿ ಬಿಟ್ಟೆಯಲ್ಲ!

**ಪಾರ್ವತಿ**—ಜ್ಞಾನವಂತೆ ಜ್ಞಾನ! ಎಲ್ಲಿಯ ಜ್ಞಾನ? ನಿಮಗೆ ತುಸು ಜ್ಞಾನವಿದ್ದಿದ್ದರೆ ನೀವೆಂದೂ ಹೀಗೆ ಮಾಡುತ್ತಿರಲಿಲ್ಲ. (ಅಳುವಳು)

**ಈಶ್ವರ**—(ಹತ್ತಿರ ಸರಿದು) ಪಾರ್ವತಿ! ಸ್ವಲ್ಪ ಸಮಾಧಾನ ಮಾಡಿಕೋ. ಇದಕ್ಕೆಲ್ಲ ಹೀಗೆ ಹೃದಯಗೆಟ್ಟರೆ ಹೇಗೆ? ಆದರೆ ವೃಥಾ ನನ್ನ ಹೊಗೆಬತ್ತಿಗಳನ್ನು—ನನ್ನ ಚಿಂತಾಮಣಿ ಕಡ್ಡಿಗಳನ್ನು ಬಿಸುಟು ಬಿಟ್ಟೆಯಲ್ಲ? ನಾನಿನ್ನು ಹೇಗ ಸಮಾಧಿಗೊಳ್ಳಲಿ?

**ಪಾರ್ವತಿ**—(ದುಃಖದಿಂದ) ನಿಮಗೆ ನನ್ನ ಮೇಲೆ ಪ್ರೀತಿಯಿಲ್ಲ. ಬರೀ ಲೋಕಾಚಾರಕ್ಕಾಗಿ ನನ್ನನ್ನು ದೇಹದಲ್ಲಿ ಕೊರಡಿನಂತೆ ಸೇರಿಸಿ ಕೊಂಡಿದ್ದೀರಿ. ಹೀಗಿದ್ದಿದ್ದರೆ ನನ್ನನ್ನು ತಂದೆಯ ಮನೆಗಾದರೂ ಕಳುಹಿಸಬಾರದಿದ್ದಿತೇ? ನಾನು ಅಲ್ಲಿಯಾದರೂ ಬೆಂಕಿಗೆ ಬಿದ್ದು ಸಾಯುತಿದ್ದೆ!

**ಈಶ್ವರ**—(ಸಮಾಧಾನದಿಂದ) ಇದೆ ಪಾರ್ವತಿ--ನನಗೆ ತುಂಬಾ ಪ್ರೀತಿ ಯಿದೆ! ಪ್ರೀತಿಯಿದ್ದಿಲ್ಲವಾದರೆ ನಾನು ನಿನಗಾಗಿ ವಿಷ ಕುಡಿಯು ತಿದ್ದೆನೆ?

**ಪಾರ್ವತಿ**–(ಆಶ್ಚರ್ಯದಿಂದ) ನನಗಾಗಿ? ಇದೇನು ಸುಳ್ಳು ಮಾತು? ಇಂತಹ ಸುಳ್ಳಿನಿಂದಲೇ ನೀವು ನನ್ನನ್ನು ಸಮಜಾಯಿಸುತ್ತ ಬಂದಿದ್ದೀರಿ!

**ಈಶ್ವರ**—ಇಲ್ಲ ಪ್ರಿಯೆ! ನಾನು ವಿಷವನ್ನು ಕುಡಿದುದು ದೇವತೆಗಳಿಗಾಗಿ ಯಾದರೂ ಅದನ್ನು ಕುಡಿಯದೆ ಗಂಟಲಲ್ಲಿ ಇರಿಸಿಕೊಂಡುದು ನಿನ್ನ ಮೇಲಿನ ಪ್ರೀತಿಯಿಂದ. ನಿನ್ನ ಮೇಲಿನ ಪ್ರೀತಿಗೆ ಇದ ಕ್ಕಿಂತಲೂ ಹೆಚ್ಚಿನ ಸಾಕ್ಷ್ಯವೇಸಿದೆ? (ಕೊರಳು ತೋರಿಸುವನು)

**ಪಾರ್ವತಿ**—(ಬೇಸರದಿಂದ) ಸಾಕು ಬಿಡಿ. ಮತ್ತೆ ಆ ನಾರದನ ಕೂಡೆ ಹೇಳಿ ಧವಳಚೂರ್ಣವನ್ನು ತರಿಸದೆ ವೃಥಾ ನನ್ನನ್ನು ಜಗತ್ತಿನ ಮುಂದೆ ಅಪಹಾಸ್ಯಕ್ಕೆ ಗುರಿಮಾಡುತಿದ್ದೀರಿ!

**ಈಶ್ವರ**—ಹೋಗಲಿ ಬಿಡು. ಆತನಕ ಆ ಭರಣಿಯಲ್ಲಿ ಭಸ್ಮವಿದೆ ತಾನೆ. ಅದನ್ನೇ ಕೊಂಚ—

**ಪಾರ್ವತಿ** (ಕೋಪದಿಂದ) ಏನು ಆ ಬೂದಿಯೆ? ಇದು ನಿಮಗೇಯಿರಲಿ. ನಿಮ್ಮ ಸ್ವರೂಪಕ್ಕೂ ಅದಕ್ಕೂ ಸಮಹೋಗುತ್ತದೆ. ಇಗೊಳ್ಳಿ - ಅದನ್ನು ನೀವೇ ತಲೆಗೆ ಆ ಜಡೆಗೆ ಸುರಿದುಕೊಳ್ಳಿರಿ.(ಎಂದು ಆ ಭಸ್ಮ ವನ್ನು ಅವನ ಮೇಲೆರಚಿ ಭರಣಿಯನ್ನು ಬಿಸುಟು ಚೂರು ಚೂರು ಮಾಡುವಳು)

**ಈಶ್ವರ** - (ಆಶ್ಚರ್ಯದಿಂದ) ಏನಿದು ಪಾರ್ವತಿ! ಈ ಅವಾಂತರ! ನನ್ನನ್ನು ಕೆರಳಿಸಬೇಕೆಂದಿರುವೆಯ?

**ಪಾರ್ವತಿ**—(ವೈರಾಗ್ಯದಿಂದ) ನೀವು ಕೆರಳದೆ ಪ್ರೀತಿ ಮಾಡಿ ನನಗೆ ಆದ ಸಂಪತ್ತೇನಿದೆ?

**ಈಶ್ವರ**—(ಏನೂ ಹೇಳಲು ತೋಚದೆ ಸುತ್ತಲೂ ನೋಡಿ) ನಂದಿ—ಆ ಚಿತಾ ಭಸ್ಮವನ್ನು ಕೂಡಿಸಿಡು.

**ನಂದಿ**—(ಮಾತನಾಡದೆ ಗೋಣು ಅಲ್ಲಾಡಿಸಿ ಸುಮ್ಮನಿರುವನು)

**ಈಶ್ವರ**—ನಂದಿಗೆ ನಿದ್ದೆ ಬಂದಂತಿದೆ. ಪಾಪ--ನಿನ್ನೆ ಜಾಗರಣೆಯೋ ಏನೋ! ಭೃಂಗೀ—

**ಭೃಂಗಿ**—(ಅವನೂ ಸದ್ದಿಲ್ಲದೆ ಕುಳಿತಿರುವನು)

**ಈಶ್ವರ**--(ಆಶ್ಚರ್ಯದಿಂದ) ಅರೆ---ಇದೇನು ಚೋದ್ಯ!

**ಪಾರ್ವತಿ**---(ನಗುತ್ತಾ) ಇದೇ ಪ್ರತಿಫಲ! ಹೆಂಡತಿಯ ಮಾತು ಕೇಳದವನು ಎಲ್ಲದಕ್ಕೂ ಹಗುರಾಗುವನು ಎಂಬುದಕ್ಕೆ ಇದೇ ನಿದರ್ಶನ!

**ಈಶ್ವರ**—(ಕಣ್ಣು ಕೆರಳಿಸಿ) ಏನು? ಗಾಯಕ್ಕೆ ಉಪ್ಪು ನೀರನ್ನು ಎರೆಯ ಬೇಕೆಂದಿರುವೆಯ? ಜಾಗ್ರತೆ! (ಎದ್ದು ನಿಂತು) ನಂದೀ—ನಂದೀ-ಭೃಂಗೀ—(ಕಾಲುದಟ್ಟಿಸಿ) ಭೃಂಗಿ--ಶೃಂಗೀ—ಶೃಂಗೀ

**ಪಾರ್ವತಿ**—(ಕೈತಟ್ಟಿ ನಗುವಳು) ಆಹಾ ಬಹಳ ಚೆನ್ನಾಯಿತು! ಇನ್ನು ನೀವು ಸಮಾಧಿಗೆ ತೊಡಗಬಹುದು. ಬೇರೆ ಉಪಾಯವೇ ಇಲ್ಲ!

**ಈಶ್ವರ**—(ಕೋಪದಿಂದ ತೊಡೆಯನ್ನು ಅಪ್ಪಳಿಸಿಕೊಂಡು ಸುತ್ತಲೂನೋಡುವನು) (ಬ್ರಹ್ಮ ವಿಷ್ಣುಗಳು ಮೆಲ್ಲ ಮೆಲ್ಲನೆ ಪ್ರವೇಶಿಸಿ)

**ವಿಷ್ಣು** —(ಸುತ್ತಲೂ ನೋಡಿ) ಬ್ರಹ್ಮ—ನಾವೇನೋ ಸಹಾಯ ಪ್ರಾಪ್ತಿಗಾಗಿ ಇಲ್ಲಿಯ ತನಕ ಬಂದುದಾಯಿತು. ಆದರೆ—

**ಬ್ರಹ್ಮ**—ಆದರೇನು?

**ವಿಷ್ಣು**—ಇಲ್ಲಿಯ ಸಂದರ್ಭಗಳನ್ನು ನೋಡಿದರೆ ಏನೂ ಸುಖವಾಗಿ ಕಾಣು ವುದಿಲ್ಲ. ಈ ತಾಪತ್ರಯವು ಪರಶಿವನನ್ನೂ ಬಿಟ್ಟಿರುವುದಿಲ್ಲ!

**ಬ್ರಹ್ಮ**—(ಅಂಜಿಕೆಯಿಂದ) ಏನು? ಹಾಗಾದರೆ ನಮಗೇನು ಗತಿ?

**ವಿಷ್ಣು**—ಅಧೋಗತಿ! ನೋಡು—ಶಿವನು ಸಿಟ್ಟಿನಿಂದ ನಿಂತು ಸುತ್ತಲೂ ನೋಡುತ್ತಿರುವನು. ಆದರೆ ಅವನ ಆ ಭಯಂಕರ ಸಿಟ್ಟಿನಿಂದಾಗಿ ಲೋಕವು ನಡುಗಿರುವುದಿಲ್ಲ. ವಾತಾವರಣವು ಬಿಸಿಯೇರಿಲ್ಲ; ಪಾರ್ವತಿಯು ಉಪಹಾಸ ಪೂರ್ವಕವಾಗಿ ನಗುತ್ತಿರುವಳು. ಭೂತ ಗಣಗಳು ಕೊರಡಿನಂತೆ ಮುಖತಿರುಗಿಸಿ ಕುಳಿತಿರುವುವು. ಇದ ನ್ನೆಲ್ಲಾ ನೋಡಿದಾಗ

**ಬ್ರಹ್ಮ**—ನಮಗೆ ಗತಿಯಿಲ್ಲವೆಂದೇ ಕಾಣುವುದೆ?

**ವಿಷ್ಣು**—ನಮಗೆ ಮಾತ್ರವಲ್ಲ. ಸದ್ಯ ಈಶ್ವರನಿಗೇ ಗತಿಯಿಲ್ಲವಾಗಿದೆ! ಆದರೂ ಇಲ್ಲಿಯ ತನಕ ದಣಿದು ಬಂದ ಪ್ರಾಯಶ್ಚಿತ್ತಕ್ಕಾಗಿ ಸುಮ್ಮನೆ ಕುಳಿತು ಎಲ್ಲವನ್ನೂ ನೋಡೋಣ.

(ಇಬ್ಬರೂ ಮೂಲೆ ಹಿಡಿದು ಕುಳಿತುಕೊಳ್ಳುವರು)

**ಈಶ್ವರ**—(ಅವರನ್ನು ಕಂಡು) ಎಲೈ ವಿಷ್ಣು ಬ್ರಹ್ಮರೆ! ನೀವು ಸಮಯೋಚಿ ತವಾಗಿ ಬಂದಿರುವಿರಿ. ಅವಜ್ಞೆಯ ಅಧಃಪಾತಕ್ಕಾಗಿ ಆತ್ಮ ಗೌರವದ ಪ್ರತಿಷ್ಟೆಗಾಗಿ ನಾನೀಗಲೇ ತಾಂಡವ ನೃತ್ಯವನ್ನು ತೊಡಗಿ—

**ವಿಷ್ಣು**—(ಗಾಬರಿಯಿಂದ) ಏನು ತಾಂಡವ ನೃತ್ಯವೆ?

**ಈಶ್ವರ**—(ಅಟ್ಟಹಾಸದಿಂದ) ಅಹುದು ತಾಂಡವ ನೃತ್ಯ! ಯಾವ ನೃತ್ಯ ದಿಂದಾಗಿ ಪ್ರಪಂಚವೇ ಪ್ರಳಯಗೊಳ್ಳುವುದೊ ಅಂತಹ ರುದ್ರ ತಾಂಡವ ನೃತ್ಯ!

**ಬ್ರಹ್ಮ**—(ಗಾಬರಿಯಿಂದ ಕೈಮುಗಿದು) ಶಂಕರನೇ—ಸೈರಿಸು ಸೈರಿಸು! ಪ್ರಳ ಯಕಾಲವು ಇನ್ನೂ ಸನ್ನಿಹಿತವಾಗಿಲ್ಲ. ನಾನು ಸೃಷ್ಟಿಸಿದ ಪ್ರಪಂ ಚವು ಎಷ್ಟೇ ಧೂರ್ತವಾಗಿರಲಿ ಅದನ್ನು ನಾಶಮಾಡಬೇಡ.

ನನ್ನ ನೆನಪಿಗಾಗಿ ನನ್ನ ಸ್ಮಾರಕಕ್ಕಾಗಿ ಅದನ್ನು ಉಳಿಸು. ಪಾಪಿಗಳನ್ನು ಕ್ಷಮಿಸು!

**ಈಶ್ವರ**—(ಉಪಹಾಸದಿಂದ) ಏನು ಕ್ಷಮೆಯೆ? ನನ್ನ ಪ್ರಚಂಡ ಕೋಪವು ಕ್ಷಮೆಯ ಗಡಿಯನ್ನು ದಾಟಿ ಮುಂದೆ ಬಂದಿದೆ. ಅದನ್ನು ಇನ್ನು ಹಿಂದಿರುಗಿಸಲು ಎಂದೆಂದಿಗೂ ಬರುವಂತಿಲ್ಲ. ಲೋಕನಾಶವು ಆಗಿಯೇ ತೀರಬೇಕು! ಇದಕ್ಕೆ ನೀವೇ ಸಾಕ್ಷಿ—ಆ ಸೂರ್ಯಚಂದ್ರರೇ ಸಾಕ್ಷಿ! ನನ್ನ ಹೃದಯವು ಅವಜ್ಞೆಯಿಂದ ಸುಡುತ್ತಿದೆ. ಅದೂ ಹೆಂಡತಿಯಿಂದ! (ಎಂದು ಪಾರ್ವತಿಯ ಕಡೆ ನೋಡುವನು)

**ಪಾರ್ವತಿ**—(ಹುಸಿನಗುತ್ತ) ಶಕ್ತಿಸ್ವರೂಪಿಣಿಯಾದ ನಾನು ಸೇರದೆ ಈ ತಾಂಡವದಿಂದ ಏನಾಗುವುದೋ ನೋಡೋಣ!

**ಈಶ್ವರ**—(ಕಾಲು ದಟ್ಟಿಸಿ) ಆಗಿಯೇ ತೀರುತ್ತದೆ-ಸರ್ವನಾಶ! ಲೋಕನಾಶ ಹುಂ! (ಡಮರುವನ್ನು ಕೈಗೆ ತೆಗೆದುಕೊಂಡು ಹೆಜ್ಜೆಯನ್ನೆತ್ತಿ) ಈ ಒಂದೊಂದು ಹೆಜ್ಜೆಯೂ ಒಂದೊಂದು ಲೋಕದ ನಾಶಕ್ಕೆ ಕಾರಣವಾಗಲಿ!

(ಡಮರುನಾದ ಪೂರ್ವಕವಾಗಿ ಹಿಮ್ಮೇಳ ಸಂಗೀತದೊಡನೆ ತಾಂಡವಕ್ಕೆ ತೊಡಗುವನು)

**ಪಾರ್ವತಿ**—(ನಗುತ್ತ) ಶಂಕರನು ಒಂದು ಯುಗದ ಪರ್ಯಂತವೂ ಹೀಗೇನೇ ಕೋಲ ಕುಣಿಯುತ್ತಯಿರಬೇಕಾದೀತು!

**ಈಶ್ವರ**—(ಗರ್ವದಿಂದ ಹುಂಕರಿಸುತ್ತಾ ದ್ರುತ ಗತಿಯಿಂದ ಪ್ರಳಯ ತಾಂಡವವನ್ನು ತೊಡಗಿ ಕೊನೆಗೆ ಅಟ್ಟಹಾಸ ಪೂರ್ವಕವಾಗಿ ಹುಂಕರಿಸುವನು)

**ಬ್ರಹ್ಮ**—(ಅಂಜಿಕೆಯಿಂದ)ಮಹಾ ವಿಷ್ಣುವೆ? ನಾವು ಇಲ್ಲಿಗೆ ರಾಹು ಕಾಲದಲ್ಲಿ ಬಂದಂತಾಯಿತು! ನಮಗೆ ನಮ್ಮ ನಮ್ಮ ಮನೆಯೇ ಕ್ಷೇಮವಾಗಿದ್ದಿತು.

**ವಿಷ್ಣು**—ಚಿಂತಿಸಬೇಡ. ಎರಡು ಶಕ್ತಿಗಳ ಸಂಘರ್ಷಣೆಯಿಲ್ಲದೆ ಪ್ರಪಂಚವು ನಾಶವಾಗುವುದಿಲ್ಲ. ನೀನು ಸುಮ್ಮನೆ ನೋಡುತ್ತಿರು.

**ಈಶ್ವರ**—(ಗರ್ವದಿಂದ ತೊಡೆಯನ್ನು ಅಪ್ಪಳಿಸಿ ತ್ರಿಶೂಲವನ್ನು ಎತ್ತಿಕೊಳ್ಳಲು ಕೈ ನೀಡಿ ಅದರ ತುದಿಯಲ್ಲಿ ಕೆಂಪು ಪತಾಕೆ ಕಟ್ಟಿರುವುದನ್ನು ಕಂಡು ದಿಗ್ಭ್ರಮೆಯಿಂದ ಸುತ್ತಲೂ ನೋಡುವನು)

**ಪಾರ್ವತಿ**—(ಗಟ್ಟಿಯಾಗಿ ನಗುವಳು)

**ಈಶ್ವರ**—(ಕೋಪದಿಂದ ಕಣ್ಣು ಕೆರಳಿಸಿ)ಆಹಾ ಹೆಂಗುಸೆ! ನನ್ನ ಅಪಹಾಸ್ಯ ಮಾಡುತ್ತಿರುವೆಯಲ್ಲ? ನನ್ನ ತಾಂಡವವನ್ನು ಹುಸಿಯನ್ನಾಗಿ ಮಾಡುತ್ತಿರುವೆಯಲ್ಲ? ಈಗಲೇ ನನ್ನ ಈ ಮೂರನೇ ಕಣ್ಣನ್ನು ತೆರೆದು ಜಗತ್ತನ್ನೇ ದಹಿಸಿ ಬಿಡುವೆನು. ಪ್ರಪಂಚದ ಈ ಪಾಪಕ್ಕೆ ತಕ್ಕ ಶಾಸನವಾಗಲಿ!

(ಗರ್ವದಿಂದ ಮೇಲುಸಿರುಬಿಡುತ್ತ ಹಣೆಗಣ್ಣನ್ನು ಕೈಯಿಂದ ಮುಟ್ಟ ತೊಡಗುವನು. ಆಗ ಹಿಂದಿನಿಂದ ತೆರೆಯೊಳಗೆ ಭಯಂಕರ ಶಬ್ದವಾಗುವುದು. ಬ್ರಹ್ಮನು ಅಂಜಿ ಅಪ್ಪಾ—ಅಪ್ಪಾ—ಎಂದು ವಿಷ್ಣುವನ್ನು ತಬ್ಬಿಕೊಳ್ಳುವನು. ಈಶ್ವರನು ಹೌಹಾರಿ ಪಾರ್ವತಿಯನ್ನು ಅಪ್ಪಿಕೊಳ್ಳುವನು. ಭೂತಗಳು ಗಾಬರಿಯಿಂದ ಹೊರಳಾಡುತಿರುವುವು. ಸ್ವಲ್ಪ ಹೊತ್ತಿನ ಮೇಲೆ ಒಬ್ಬರೊಬ್ಬರೆ ತಲೆಯೆತ್ತಿದಾಗ ನಾರದ ತುಂಬುರರ ಪ್ರವೇಶ)

**ಬ್ರಹ್ಮ**—(ಸಂಭ್ರಮದಿಂದ) ನಾರದನೇ—ನೀನು ಸಕಾಲದಲ್ಲಿ ಬಂದಿರುವಿ! ಇದೇನು ಮಹದನರ್ಥ?

**ಈಶ್ವರ**—ನಮ್ಮ ತಾಂಡವವು ಫಲಕಾರಿಯಾಗದೇನೇ ನಮ್ಮ ಫಾಲಲೋಚನವು ಪರಿಣಾಮಕಾರಿಯಾಗದೇನೇ ಇದೇನು ಇಂತಹ ಭಯಂಕರವಾದ ಅನರ್ಥ?

**ವಿಷ್ಣು**—ಅವರೇನು ದೈತ್ಯರೋ ದಾನವರೋ?

**ನಾರದ**—(ನಗುತ್ತ)ಯಾರೂ ಅಲ್ಲ. ಅದು ಮಾನವರು!

**ಈಶ್ವರ**—ಏನು ಮಾನವರೆ?

**ನಾರದ**—ಹೌದು. ಮಾನವ ಶಕ್ತಿಯಿಂದು ದೈವ ಶಕ್ತಿಗಿಂತಲೂ ಮಿಗಿಲಾಗಿದೆ. ಇದು ದೇವರ ಯುಗವಲ್ಲ—ಮಾನವರ ಯುಗ! ವಿಷ್ಣು

ವಿನ ಸುದರ್ಶನ—ಬ್ರಹ್ಮನ ಬ್ರಹ್ಮಾಸ್ತ್ರ—ಈಶ್ವರನ ಪಾಶುಪತ ಇವುಗಳೆಲ್ಲವನ್ನೂ ಮೀರಿಸಿ ಮಾನವನು ಇಂದು ಅಣುವಿನ ಮಹಚ್ಛಕ್ತಿಯನ್ನು ಸಾಧಿಸಿಕೊಂಡಿರುವನು. ಈಗ ತಾನೇ ಮಾನವನು ಮಾನವ್ಯದ ಮೇಲೆ ಅಂತಹ ಶಕ್ತಿಯನ್ನು ಮೊದಲ ಬಾರಿ ಪ್ರಯೋಗಿಸಿ ಮಹದನರ್ಥವನ್ನು ಮಾಡಿರುವನು. ತನ್ನ ವಂಶದ ನಾಶಕ್ಕೆ ತಾನೇ ಪ್ರಥಮ ಪೀಠಿಕೆಯನ್ನು ಹಾಕಿರುವನು.

**ತುಂಬುರ**— ಅದು ಹೇಗೇಯಿರಲಿ. ಇದರಿಂದಾಗಿ ದೇವತೆಗಳು ಒಂದು ಪಾಠ ಕಲಿಯಬೇಕಾಗಿದೆ.

**ಈಶ್ವರ**— ಏನದು?

**ತುಂಬುರ**—ಮನುಷ್ಯನೇ ಇಂದಿನ ಯುಗ ಪ್ರವರ್ತಕ—ದೇವತೆಗಳು ಅವನ ಅನುಯಾಯಿಗಳು! ದೇವತೆಗಳು ಇಂದು ದೇವತೆಗಳಾಗಿಲ್ಲ. ಅದರ ಛಾಯೆ ಮಾತ್ರ! ಆದರೆ ಮನುಷ್ಯನು ಮಾತ್ರ ಅತಿ ಮನುಷ್ಯನಾಗಿದ್ದಾನೆ!

**ಈಶ್ವರ** ಆ ಪಾಠವಂತಿರಲಿ. ಆದರೆ ಎಲ್ಲದಕ್ಕೂ ಮುಂಚಿತವಾಗಿ ಈ ಹೊಸ ಪಾಠವನ್ನು ಕಲಿಯಬೇಕಾಗಿದೆ. (ತನ್ನ ಚಾರಕರಾದ ನಂದಿ ಮೊದಲಾದವರ ಕಡೆ ಬೆರಳು ತೋರಿಸುವನು)

**ಬ್ರಹ್ಮ**-ಅದು ಹೌದು. ಅದಕ್ಕಾಗಿಯೇ ನಾವು ಇಲ್ಲಿಯ ತನಕ ಬಂದಿರುವೆವು.

**ವಿಷ್ಣು**—ಈ ವಿಚಾರಕ್ಕೆ ನಾರದನೊಬ್ಬನೇ ಸಮರ್ಥ. ಅವನ ಸಹಾಯದಿಂದಾಗಿ ನಾವು ಈ ಕುತ್ತದಿಂದ ಪಾರಾಗಬಹುದು. ಅನ್ಯಥಾ ಶರಣಂ ನಾಸ್ತಿ!

**ನಾರದ**—(ತುಂಬುರನೊಡನೆ) ತುಂಬುರಾ – ನಮ್ಮ ಬಾಣವು ನಮ್ಮ ಬತ್ತಳಿಕೆಗೇ ತಿರುಗಿ ಬಂದಂತಿದೆ!

**ತುಂಬುರ**—ಆಗಲಿ ನೋಡೋಣ–ನಾವು ಬರೆವ ಪುರಾಣಕ್ಕೆ ನಾವೇ ಟೀಕೆ ಬರೆದರೆ ಸರಿ!

**ಈಶ್ವರ**—(ಭೂತಗಳ ಕಡೆ ಕೈತೋರಿಸುತ್ತ) ನಾರದಾ– –ನೋಡಿದೆಯಲ್ಲ?

**ನಾರದ**—ಆಗಲೇ ನೋಡಿರುವೆನು. ಹೇಗಿದ್ದರೂ ಮುಂಚಿತವಾಗಿ ಅವರ ಬೇಡಿಕೆಗಳು ಪೂರಯಿಸಲ್ಪಡುವವೆಂದು ಆಶ್ವಾಸನೆಕೊಟ್ಟು ಕಳುಹಿಸಬೇಕಾಗಿದೆ.

**ಈಶ್ವರ**—ಏನು? ನಮ್ಮ ಗೌರವವನ್ನು ಬಿಟ್ಟುಕೊಟ್ಟು?

**ನಾರದ**—ಗೌರವ ಈಗ ರೌರವವಾಗಿದೆ ತಾನೇ? ಮೊತ್ತಮೊದಲಿಗೆ ಅವರು ಇಲ್ಲಿಂದ ಸಂತುಷ್ಟರಾಗಿ ಹೋಗಲಿ.

**ಈಶ್ವರ**—(ಉಪಾಯವಿಲ್ಲದೆ) ಆಗಲಿ. ನಿನ್ನ ಇಷ್ಟದಂತೆಯೇ ಆಗಲಿ. (ಸೇವಕರೊಡನೆ)ಎಲೈ ಭೂತಗಣಾಧಿಪತಿಗಳೆ! ನಿಮ್ಮ ವಿಚಾರವನ್ನು ನಾವು ಸಹಾನುಭೂತಿಯಿಂದ ತಿಳಿದು ಪರಿಹರಿಸಲು ಯತ್ನಿಸುತ್ತೇವೆ. ಅದಕ್ಕಾಗಿಯೇ ನಮ್ಮ ತ್ರಿಮೂರ್ತಿಗಳ ಪರಿಷತ್ತು ಇಲ್ಲಿ ಕೂಡಲಿದೆ. ಆದುದರಿಂದಲೇ ನೀವು ಎಂದಿನಂತೆಯೇ ನಮ್ಮೊಡನೆ ಸಖ್ಯವಾಗಿರಬಹುದು.

(ಭೂತಗಣಗಳು ಹಾರುತ್ತ ಚೀರುತ್ತ)

ಇನ್ಕಿಲಾಬ್ ಜಿಂದಾಬಾದ್—ಟ್ರೇಡ್ ಯೂನಿಯನ್ ಜಿಂದಾಬಾದ್—(ಎಂದು ಕೂಗುತ್ತ ತೆರಳುವುವು)

**ನಾರದ**—ಇನ್ನು ನಾವು ವಿರಾಮವಾಗಿ ತೊಂದರೆಯಿಲ್ಲದೆ ಮಾತಾಡೋಣ.

**ಈಶ್ವರ**—(ಬ್ರಹ್ಮ ವಿಷ್ಣು ಇವರ ಕಡೆ ನೋಡಿ)ನಿಮ್ಮ ತೊಂದರೆಗಳೂ ನನ್ನಂತೆಯೇ ಇರಬಹುದೆ?

**ವಿಷ್ಣು**—ಅಥವಾ ಅದಕ್ಕೂ ತುಸು ಹೆಚ್ಚು!

**ಬ್ರಹ್ಮ**—ನನ್ನದಂತೂ ಬಹಳ ಕಠಿಣ!

**ಈಶ್ವರ**—(ವಿಚಾರನಾಗಿ)ನಾರದಾ—ಇದರ ಕಾರಣವೇನಿರಬಹುದು? ಈ ತನಕವು ನಾವು ಬೇರೆಯವರಿಗೇ ತೊಂದರೆ ಕೊಟ್ಟು ವಿರಾಮವಾಗಿ ನೋಡುತಿದ್ದೆವೇ ಹೊರತು ನಾವಾಗಿ ಯಾವ ತೊಂದರೆಗಳಿಗೂ ಕಟ್ಟು ಬಿದ್ದಿರುವುದಿಲ್ಲ. ಆದರೆ ಈಗಿನ ಪರಿಯೇ ಬೇರೆ! ನಮಗೆ ಎಷ್ಟು ಯೋಚಿಸಿದರೂ ಅರ್ಥವೇ ಆಗುವುದಿಲ್ಲ.

**ನಾರದ**—ಇದೇನೂ ಹೊಸತಲ್ಲ.

**ತುಂಬುರ**—ನಮ್ಮ ಭೂಲೋಕದ ಸಂಚಾರದಲ್ಲಿ ಇಂತಹವುಗಳನ್ನು ಬಹಳವಾಗಿ ಕಂಡಿದ್ದೇವೆ. ಆದರೆ ನಾವು ಅದು ಭೂಲೋಕದಲ್ಲಿ ಮಾತ್ರ ಸಾಧ್ಯವೆಂದು ತಿಳಿದಿದೆವು.

**ಈಶ್ವರ**—ಇದೇನು? ಯಾರವರು?

**ನಾರದ**—ಕಮ್ಯುನಿಷ್ಟರು!

**ಬ್ರಹ್ಮ**—ಸತ್ಯಲೋಕದಲ್ಲಿ?

**ನಾರದ**—ಹಾಂ ಹೌದು.

**ವಿಷ್ಣು**—ವೈಕುಂಠದಲ್ಲಿಯೂ?

**ನಾರದ**—ಅವರೇ!

**ಈಶ್ವರ**—ನಮ್ಮ ಕೈಲಾಸದಲ್ಲಿ ಸಹ?

**ನಾರದ**—ಅವರೇ ಅವರು.

**ಈಶ್ವರ**—(ಚಿಂತೆಯಿಂದ) ಈ ತನಕವೂ ನಾನು ಕೈಲಾಸದಲ್ಲಿ ಪರಮೇಶ್ವರ ಪಾರ್ವತಿಯರೆಂದೇ ತಿಳಿದಿದ್ದೆ. ಈಗ—

**ನಾರದ**—ಈಗ ಕೈಲಾಸದಲ್ಲಿ ಕಮ್ಯುನಿಷ್ಟರು!

**ಎಲ್ಲರೂ**—ಅಬ್ಬಾ—ಆಶ್ಚರ್ಯ—ಆಶ್ಚರ್ಯ!

**ವಿಷ್ಣು**—ಇದು ಹೇಗೆ ಬಂದಿತೋ ನಾರದ?

**ಬ್ರಹ್ಮ**—ಹೇಗೇ ಬರಲಿ. ಇದಕ್ಕೆ ಸವ್ಯ ಪರಿಹಾರವೇನು ಹೇಳು.

**ಈಶ್ವರ**—ಅದು ಸತ್ಯ. ಅಲ್ಲವಾದರೆ ಇದನ್ನು ಕಟ್ಟಿಕೊಂಡು ಇಲ್ಲಿ ಬಾಳುವಂತಿಲ್ಲ!

(ಇಂದ್ರನು ಓಡುತ್ತೋಡುತ್ತ ಬಂದು)

**ಇಂದ್ರ**—ನಿಜವಾಗಿಯೂ ಬಾಳುವಂತಿಲ್ಲ. ಹಾಗೆ ಬಾಳಲು ಸಾಧ್ಯವಿದ್ದಿದ್ದರೆ ನನ್ನ ಇಂದ್ರ ಪಟ್ಟವನ್ನು ಬಿಟ್ಟು ನಾನೆಂದಿಗೂ ಈ ಪರ್ವತದ ತುದಿಗೆ ಓಡಿ ಬರುತಿದ್ದಿಲ್ಲ!

**ವಿಷ್ಣು**—ಓಹೋ—ಇಂದ್ರನ ಅವಸ್ಥೆಯೂ ಬಹಳ ಕಠಿಣವಾದಂತಿದೆ!

**ನಾರದ**—(ನಗುತ್ತ) ಅಥವಾ ನಿಮ್ಮೆಲ್ಲರಷ್ಟೇ ಇರಬಹುದು.

**ಬ್ರಹ್ಮ**—ಅಂತೂ ಇದರ ಮೂಲವು ಭೂಲೋಕದಿಂದ ತೊಡಗಿದೆ ಎಂದು ಅಭಿಪ್ರಾಯವೆ?

**ನಾರದ**—ಹೌದು. ಆದರೆ ಅತೃಪ್ತಿಯಿದ್ದ ಕಡೆಯೆಲ್ಲ ಕೈಚಾಚಿ ಅದು ಹಬ್ಬಿದೆ.

**ಬ್ರಹ್ಮ**— ಹಾಗಾಗರೆ ಇದರ ನಾಶವೂ ಅಲ್ಲೇ ತೊಡಗಬೇಕೆಂದು ಅರ್ಥವೆ?

**ನಾರದ**—ಈ ಅಭಿಪ್ರಾಯ ಬಹಳ ಸಮಂಜಸ. ಆದರೆ—

**ಈಶ್ವರ**—ಆದರೆ ಗೀದರೆ ನೀನು ಹೋದರೇನೇ ಸರಿಯಾಗುವುದು.

**ತುಂಬುರ**—ಆದರೆ ಇದು ಆಡಿದಷ್ಟು ಸುಲಭವಾಗಿಲ್ಲವಲ್ಲ!

**ಈಶ್ವರ**--ಹಾಗೆ ಸುಲಭವಾಗಿಲ್ಲವೆಂಬುದನ್ನು ನಾವು ಈಗಿಂದೀಗಲೇ ತಿಳಿದಿರುವೆವಲ್ಲ!

**ನಾರದ**—ಅಲ್ಲದೆ ಭೂಲೋಕದಲ್ಲಿ ಸೀಮಾ ಪುರುಷನಾದ ಮಹಾತ್ಮನ ತತ್ವಗಳಿಗೆ ಅಪಕಾರವನ್ನು ಮಾಡದೆ ಯಾವುದೂ ನಡೆಯುವಂತಿಲ್ಲ.

**ವಿಷ್ಣು**—ಹಾಗಲ್ಲವಾದರೆ ನಮಗೇನು ಉಪಕಾರ ಮಾಡಿದಂತಾಗುವುದು?

**ಇಂದ್ರ**—(ಕೈ ಮುಗಿದು)ನನ್ನ ಅವಸ್ಥೆಯನ್ನು ಕಂಡು ಕನಿಕರಗೊಳ್ಳುವವನಾಗು!

**ನಾರದ**—(ಬೇಸರದಿಂದ)ಸಹಜ. ಆದರೆ ನನ್ನ ಮನಃಸಾಕ್ಷಿಗೆ ವಿರುದ್ಧವಾಗಿ ನಡೆದು ದೇಶವನ್ನು ಹೇಗೆ ಕ್ಷೋಭೆಯಲ್ಲಿ ತಳ್ಳಲಿ?

**ಈಶ್ವರ**—ನಾರದಾ! ಈ ಮಾತುಗಳಿಂದ ಪ್ರಯೋಜನವಿಲ್ಲ. ದೇಶವು ಕ್ಷೋಭೆಗೆ ಬಿದ್ದರೆ ನಾವೇ ಅದನ್ನು ಸುಸ್ಥಿತಿಗೆ ತಂದು ಕೊಡುವೆವು. ನಿನಗೆ ಆ ಭೀತಿಯು ಬೇಡ. ಬೇಗನೇ ತುಂಬುರನೊಡನೆ ತೆರಳುವವನಾಗು.

**ನಾರದ**—(ವಿನಯದಿಂದ ಕೈಮುಗಿದು) ಆಗಲಿ. ತ್ರಿಮೂರ್ತಿಗಳ ಆದೇಶವು ಶಿರೋಧಾರ್ಯವಾಗಿದೆ. ಹೇಗೂ ಭಗವದ್ವಾಕ್ಯವಿದೆಯಲ್ಲ—ಅಹಂಕರೋವಿಸಾತಿ ವೃಥಾಭಿಮಾನಃ–! ತುಂಬುರ! ಹೊರಡು. ಮತ್ತೊಮ್ಮೆ ನಾವು ಭೂಲೋಕಕ್ಕೆ ತೆರಳೋಣ.

**ಪಾರ್ವತಿ**—(ಉತ್ಸಾಹದಿಂದ) ನಾರದಾ–ಬರುತ್ತಾ ನನಗಾಗಿ ಬೇಕಾದ್ದನ್ನು ತರಲು ಮರೆಯಬೇಡ.

**ಈಶ್ವರ**—ಏಕೆ? ನಮಗಾಗಿಯೂ ತರಬೇಕಾಗುವುದು.

**ಎಲ್ಲರೂ**—ಸಹಜ ಸಹಜ.

**ತುಂಬುರ ನಾರದರು**—ಆಗಲಿ, ಅಪ್ಪಣೆಯಾಗಲಿ.

ಪರಸುಖ ಕಾರಣ ಪರತರ ಶರಣ
ಪಾವನ ಚರಿತಾ ಲೋಕ ಭರಿತ
ಪರಮಾತ್ಮನೆ ತವ ಪುಣ್ಯವಿತರಣ
ಭವಜೀವಾತ್ಮರ ಪಾಪ ಹರಣ!

(ಇಬ್ಬರೂ ಹೋಗುವರು)

**ಅಂಕ ೨** **ದೃಶ್ಯ ೩ ಬೀದಿ**

(ಭೂಲೋಕಕ್ಕೆ ಬಂದ ತುಂಬುರ ನಾರದರು ಮಾತಾಡುತ್ತಿರುವರು)

**ನಾರದ**— ತುಂಬುರ ! ನಾವೇನೋ ದೇವತೆಗಳ ಕಾರ್ಯಕ್ಕಾಗಿ ಇಲ್ಲಿಯ ತನಕ ಬಂದುದಾಯಿತು. ಆದರೆ ನಿಜವಾಗಿಯೂ ನನಗೆ ಭೂಲೋಕಕ್ಕೆ ಬಂದೊಡನೆಯೇ ಮೈ ಜುಮ್ಮೆನುತ್ತಿದೆ.

**ತುಂಬುರ**—ಅದೇನು ನಾರದ? ನಿನಗೇನು ಅಂಜಿಕೆಯಾಗುತಿದೆಯೆ?

**ನಾರದ** – ನಾರದನೇನೂ ಅಂಜತಕ್ಕವನಲ್ಲ. ಆದರೆ ಅದು ವ್ಯಕ್ತಿಯ ಮಹಾತ್ಮ್ಯ ! ಅದರಿಂದಾಗಿ ನಮ್ಮ ಕೆಲಸವು ಹೇಗೆ ಕೊನೆಗಾಣುವುದೆಂಬ ಭೀತಿತೊಡಗಿದೆ.

**ತುಂಬುರ**—ಮೊತ್ತ ಮೊದಲಿಗೆ ನಾವು ಇಲ್ಲಿಯ ಐಕ್ಯಮತ್ಯವನ್ನು ನಾಶ ಪಡಿಸಬೇಕಾಗಿದೆ.

**ನಾರದ**—ಅದೇ ಒಂದು ಕಷ್ಟಸಾಧ್ಯವಾದ ಕೆಲಸ. ಆ ಮಹಾತ್ಮನ ಪುಣ್ಯ ಪ್ರಭಾವದಿಂದಾಗಿ ಸುಭದ್ರವಾದ ಐಕ್ಯಮತ್ಯವು ಈ ತನಕ ಆಂಗ್ಲ ಪ್ರಭುಗಳಿಂದಲೂ ಅಭೇದ್ಯವಾಗಿದೆ. ಅಂತಹ ಕವಚವೇ ಈ ಭಾರತ ವರ್ಷವನ್ನು ಕಾಪಾಡುತಿದೆ. ಅಲ್ಲಿ ನೋಡು ! (ಮುಂದೆ ಕೈ ತೋರಿಸಿ) ಆ ಹಿಂದುವೂ ಆ ಮಹಮ್ಮದೀಯನೂ ಎದೆಯೆದೆ ಕೂಡಿಸುತಿರುವರು. ಆ ಈಸಾಯಿಯೂ ಆ ಸಿಖ್ಖ ಪಂಥೀಯನೂ ಕೈ ಕುಲುಕುತಿರುವರು. ಈ ಶುಭ ಚಿಹ್ನೆಗಳ ಮಧ್ಯದಲ್ಲಿ ನಾವೇನು ಮಾಡಲು ಬರುತ್ತದೆ? ಅಥವಾ –

**ತುಂಬುರ**—ಅಥವಾ ಏನು?

**ನಾರದ**—(ದುಃಖದಿಂದ) ಅಥವಾ ಈ ಪುಣ್ಯ ಭೂಮಿಯ ಸುಸ್ಥಿತಿಗೆ ನಾಶ ಬಾರದ ರೀತಿಯಲ್ಲಿ ಏನು ಮಾಡಲು ಬರುತ್ತದೆ?

**ತುಂಬುರ**—ಆದರೆ ಅದು ನಮ್ಮ ಕರ್ತವ್ಯವಲ್ಲ.

**ನಾರದ**—ಸಹಜ. ಒಂದು ಶಾಂತವಾದ ಕೊಳಕ್ಕೆ ಕಲ್ಲೆಸೆದು ಅದನ್ನು ಅಲ್ಲೋಲ ಕಲ್ಲೋಲವೆಸಗುವುದು ಬಹು ಸುಲಭ. ಆದರೆ ಅದನ್ನು ಶಾಂತವಾಗಿಸಿ ಕಲ್ಲನ್ನು ಹಿಂದೆ ತೆಗೆಯುವುದು ಬಹಳ ಕಷ್ಟವಿದೆ. ಇದನ್ನೆಲ್ಲಾ ಯೋಚಿಸುವಾಗ—

**ತುಂಬುರ**—ಈ ಕೆಲಸ ಅಸಾಧ್ಯವೆಂದೇ ಕಂಡು ಬರುವುದೆ?

**ನಾರದ**—ಅಸಾಧ್ಯವೆಂದಲ್ಲ-- ಆದರೆ ನಮಗೇಕೆ ಬೇಕಿದ್ದಿತು ಎಂದೇ ಭಾಸ ವಾಗುವುದು.

**ತುಂಬುರ**—ಆದರೂ ದೇವಕಾರ್ಯತಾನೆ?

**ನಾರದ**—(ವಿಚಾರವಾಗಿ) ಇದು ದೇವತೆಗಳ ದೇವತ್ವವಲ್ಲ—ಸ್ವಾರ್ಥ! ಇದು ದೇವತೆಗಳ ಅಧಃಪತನ!

**ತುಂಬುರ**—ಹೇಗೇಯಿರಲಿ. ಅದನ್ನು ನಾವು ಯೋಚಿಸಿ ಉಪಯೋಗ ವಿಲ್ಲ. ತ್ರಿಮೂರ್ತಿಗಳ ವಚನದ ಮೇಲೆ ನಾವು ಪ್ರಾಮಾಣ್ಯವ ನ್ನಿಡಬೇಕಾಗಿದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಅದಕ್ಕಾಗಿ ಕಾಲುನೋವಾಗುವುದೆಂದು ಭಾವಿಸಿದರೆ ಪ್ರಯೋಜನ ವಿಲ್ಲ. ಆದುದರಿಂದ ಸುಸ್ಥಿರನಾಗು. ಇದರ ಫಲಾಫಲಗಳ ವಿಚಾರ ನಮಗೆ ಬೇಡ. ಆ ನಿರ್ಣಯವನ್ನು ದೇವರಿಗೇ ಒಪ್ಪಿಸಿ ಬಿಡೋಣ. ಪ್ರಪಂಚಕ್ಕೆ ಇದೂ ಒಂದು ಪಾಠವಾಗಲಿ!

**ನಾರದ**—(ಉಸಿರು ಬಿಟ್ಟು) ಆಗಲಿ. ನಾವೀಗ ಏನು ಮಾಡಬೇಕಾಗಿದೆ ಗೊತ್ತೆ?

**ತುಂಬುರ**—ಈ ಐಕ್ಯ ಮತ್ಯದ ತಳಹದಿಯ ಒಂದು ಕಲ್ಲನ್ನು ಬುಡ ತಪ್ಪಿಸ ಬೇಕಾಗಿದೆ.

**ನಾರದ**—ಸಹಜ. ಎಂದರೆ ಈ ಭವ್ಯ ಸುಂದರವಾದ ನಾಗರಿಕತೆಯು ಕಟ್ಟಡವು ತನಗೆ ತಾನೇ ಕುಸಿದು ಬೀಳುವುದು. ಒಂದಿಗೆ ಸಾವಿರಾರು ದಾರಿಹೋಕರು ನುಚ್ಚುನೂರಾಗಬಹುದು!

**ತುಂಬುರ**—ಆಗಬಹುದು. ಆಗದೆ ಉಪಾಯವಿಲ್ಲ!

**ನಾರದ**—ಆಗಲಿ ಹಾಗೆಯೇ ಆಗಲಿ. ನೀನು—ನೋಡು ಆಕಡೆ ಎದೆಯೆದೆ ಕೂಡಿಸುವ ಮುಸಲ್ಮಾನನ ಹಿಂದೆ ಫಕೀರನಂತೆ ಹೋಗಿ ಅವನ ಪಕ್ಕದಲ್ಲಿ ಒಂದು ಚೂರಿಯನ್ನು ತಿಳಿಯದಂತೆ ಸಿಕ್ಕಿಸಿ ಬಂದು ಬಿಡು.

**ತುಂಬುರ**—(ಹೋಗಿ ಬಂದು ನಗುತ್ತ) ನೀನು ಹೇಳಿದಂತೆಯೇ ಮಾಡಿರುವೆನು.

**ನಾರದ**—ಅದರ ಪರಿಣಾಮವೇನಾಯಿತು ನೋಡಿರುವೆಯು?

**ತುಂಬುರ**—ಪರಿಣಾಮವು ಬೇಕಾದಂತೆಯೇ ಆಗಿದೆ. ಈ ತಡವೆ ಎದೆ ಕೂಡಿಸಲು ಮುಂದರಿದಾಗ ಆ ಹಿಂದುವು ಹಿಂದಿನ ಚೂರಿಯನ್ನು ಕಂಡು ಸಂಶಯಪಟ್ಟು ಎರಡು ಹೆಜ್ಜೆ ಹಿಂದೆ ಸರಿದಿರುವನು.

**ನಾರದ**—ಹೀಗೆ ಎಷ್ಟು ಹೆಜ್ಜೆ ಹಿಂದೆ ಸರಿಯುವನೋ ಹೀಗೆ ಅವರೊಳಗಣ ಅಂತರ್ಯವು ಎಷ್ಟು ದೂರ ದೂರ ಸಾರಿ ಅಂತರಾಳವು ಹೆಚ್ಚುವುದೋ ಅಷ್ಟು ಶೀಘ್ರವಾಗಿ ನಮ್ಮ ಕೆಲಸವು ಸಾಧಿಸುವುದು. ಇನ್ನು ನಾನು ಈಕಡೆ ತೆರಳಿ ಆ ಹಿಂದುವಿನ ಸೊಂಟದಲ್ಲೊಂದು ಚೂರಿಯನ್ನು ತೂಗಹಾಕಿ ಬರುವೆನು. (ಹೋಗಿ ಬರುವನು)

**ನಾರದ**—(ಚಪ್ಪಾಳೆ ಹೊಡೆದು ನಗುತ್ತ) ನೋಡು ತುಂಬುರ! ದೇಶದ ಸರ್ವ ವಿನಾಶಕ್ಕೆ ನಾರದನ ಚಾಡಿಯೊಂದು ಸಾಕು. ಆ ಹಿಂದುವಿನ ಸೊಂಟದಲ್ಲಿ ಕತ್ತಿ ತೂಗುತ್ತ ಏನು ಹೇಳಿ ಬಂದಿರುವೆನು ಗೊತ್ತೆ?

**ತುಂಬುರ**—ಏನು ಹೇಳಿರುವಿ?

**ನಾರದ**—ಮ್ಲೇಂಚ್ಛ ನಿಧನ ನಿಮಿತ್ತಂ
ಕಲಯಸಿ ಕರವಾಲಂ—

**ತುಂಬುರ**—ಮತ್ತೇನಾಯಿತು?

**ನಾರದ**—ಮತ್ತೇನಾಗಬೇಕಾಗಿದೆ? ಆ ಚೂರಿಯು ರಕ್ತದಿಂದ ಕೆಂಪಾಗಿ ಹೋಯಿತು!

**ತುಂಬುರ**—(ಆಶ್ಚರ್ಯದಿಂದ) ಅಷ್ಟು ಬೇಗನೆ?

**ನಾರದ**—ಬೇಗನೇನಿದೆ? ಧರ್ಮ—ಧರ್ಮ! ಆ ಶಬ್ದದೊಡನೆ ಪ್ರಪಂಚದಲ್ಲಿ ಪ್ರಳಯವಾಗುತ್ತಿದೆ! ಯಾವನು ಧರ್ಮಕ್ಕೆ ಮಾರುಹೋಗಿರುವನೋ ಅವನು ತನ್ನ ವಿಚಾರಶಕ್ತಿಯನ್ನೂ ಅಂದಿಗೇ ಮಾರಿರುವನು. ಅಂತವನು ತನ್ನ ಮನೆಯ ಕಡೆ ಹೆಜ್ಜೆಗಾಗಿ ಇನ್ನೊಬ್ಬರೊಡನೆ ಮಾರ್ಗ ಕೇಳುತಿರುವನು. ಆಗ ಆತನನ್ನು ಹೆಜ್ಜೆ ತಪ್ಪಿಸುವುದೊಂದು ಬಹು ಸುಲಭ! ಅದೇ ಧರ್ಮದ ಅಂಧಾನುಸರಣೆ! ಆದುದರಿಂದಲೇ ನೋಡು—ಆ ಹಿಂದುವಿನ ಕೈಯಲ್ಲಿ ನನ್ನ ಕಾವಿ ಶಾಟಿಯ ಒಂದು ಚೂರನ್ನು ಹರಿದುಕೊಟ್ಟಿರುವೆನು. ಅದೇ ಅವನ ಪತಾಕೆ! ಆ ಪತಾಕೆಯ ಅಡಿಯಲ್ಲಿ ಅವನು ಹಿಂಸ್ರಪಶುವಾಗುತ್ತ ನಡೆಯುವನು. ಅವನೀಗ ಮನುಷ್ಯನಲ್ಲ ಧರ್ಮದ ಒಂದು ಕಾಡುಮೃಗ! ತುಂಬುರ—ನೀನೀಗ ಏನುಮಾಡಬೇಕಾಗಿದೆಗೊತ್ತೆ?

**ತುಂಬುರ**—ಹೇಳು—ಏನುಮಾಡಬೇಕಾಗಿದೆ?

**ನಾರದ**—ನಿನ್ನ ಭಿಕ್ಷಾ ಪಾತ್ರವನ್ನು ಎತ್ತಿಹಿಡಿದು ಜಹಾದ್—ಜಹಾದ್ ಎಂದು ಕೂಗುತ್ತ ಉತ್ತರಾಭಿಮುಖವಾಗಿ ಹೋಗಬೇಕಾಗಿದೆ.

**ತುಂಬುರ**—ಏಕೆ? ಅದರ ಅರ್ಥವೇನು?

**ನಾರದ**—ಅದರ ಅರ್ಥವೇ ಅನರ್ಥ—ಧರ್ಮಯುದ್ಧ! ಇದು ಬರೇ ಮನುಷ್ಯನ ಮನುಷ್ಯನ ಯುದ್ಧವಲ್ಲ. ಧರ್ಮಯುದ್ಧ! ಮನುಷ್ಯನ ಕಲಸು ರಕ್ತದಲ್ಲಿ ಹೆಂಗಸರ ಹೆಣದ ಮೇಲೆ ಚಿಕ್ಕ ಚಿಕ್ಕ ಮಕ್ಕಳ ದಿಂಡಿನಿಂದ ಒಂದು ಭಯಂಕರವಾದ ಧರ್ಮದ ಗೋರಿಯು ನಿರ್ಮಾಣವಾಗಲಿದೆ. ಆದರೆ ಇದನ್ನು ಇಂದು ಕಾಣಬೇಕಾಯಿತಲ್ಲ—

ಅದೂ ನಾರದನ ಒಂದು ಚಾಡಿಯಿಂದಾಗಿ—ಎಂದು ನನ್ನ ಮನಸ್ಸು ಹಾಗರೆಯುತ್ತಿದೆ. ಆದರೂ ಚಿಂತಿಲ್ಲ. ಇದರಲ್ಲೂ ನನ್ನದೊಂದು ಸಮುದ್ದೇಶವಿದೆ. ನಾರದನ ಚಾಡಿಯು ಕ್ಷಣದಲ್ಲಿ ಕಳಚಿ ಬಿಟ್ಟ ಮಾನವ ನಾಗರಿಕತೆಯ ಕಟ್ಟಡದ ತಳಹದಿಯನ್ನು ಆ ಮಹಾತ್ಮನ ಯಾವ ಅಮರ ಶಕ್ತಿಯು ಹೊಂದಿಸಲಿದೆ ಎಂಬುದನ್ನು ಕಾಣಬೇಕಾಗಿದೆ. ಇದೊಂದು ಸತ್ಯದ ಅಹಿಂಸೆಯ ಪರೀಕ್ಷಾ ಕಾಲ! ಇದರಲ್ಲಿ ಉತ್ತೀರ್ಣವಾಗಲಿರುವುದು ಧರ್ಮವೋ ಅಧರ್ಮವೋ ತಿಳಿಯಬೇಕಾಗಿದೆ.

**ತುಂಬುರ**—ಏನು? ಅದಕ್ಕಾಗಿ ಇಷ್ಟು ಹತ್ಯಾಕಾಂಡ! ರಕ್ತಪಾತ!

**ನಾರದ**–(ನಗುತ್ತ) ಆ ಹಿಂಸೆಯ ಆವೇಶವು ಹೆಚ್ಚಿದಷ್ಟು ಅಹಿಂಸೆಯ ಭವಿತವ್ಯವು ಉಜ್ವಲವಾಗುವುದು. ಈ ನಿದರ್ಶನದಿಂದ ಜಗತ್ತು ಇಂದು ಒಂದು ಪಾಠಕಲಿಯಬೇಕಾಗಿದೆ. ಅಂತಹ ಪಾಠಕ್ಕೆ ಬಹಳ ಬೆಲೆಕೊಡಬೇಕಾಗಿ ಬರಬಹುದು. ಆದರೂ ನಿರ್ವಾಹವಿಲ್ಲ. ಆತ್ಮಶಕ್ತಿಗೆ ದೇವತೆಗಳೂ ನಾಚಿ ತಲೆಬಾಗಲೇ ಬೇಕು. ಅದೂ ಇಂದೇ ಆಗಿತೀರಲಿ! ಈ ನಿಷ್ಕರ್ಷೆಯಲ್ಲಿ ಯಾವುದು ಸರ್ವಸತ್ಯವಾಗಿದೆಯೋ ಯಾವುದು ಸಮಾಜ ಸುದೃಢವಾಗಿದೆಯೋ ಅದು ಮಾತ್ರ ಬದುಕೀತು. ಮತ್ತಿನದು ಸತ್ತು ಹೋದರೆ ಹೋಗಲಿ. ಅಂತಹ ಅನಾಗರಿಕ—ಅಸಾಮಾಜಿಕ ಸಂಸ್ಥೆಗಳು ಬಾಳಬೇಕಾಗಿಲ್ಲ.

**ತುಂಬುರ**—(ತಲೆದೂಗಿ) ಸಹಜ. ಸತ್ಯವು ಯಾವತ್ತಿಗೂ ನಿತ್ಯವಾಗಿದೆ—ಶಾಶ್ವತವಾಗಿದೆ!

**ನಾರದ**—ಅಶಾಶ್ವತವು ಅಸುಂದರವಾಗಿದೆ—ಅಮಂಗಳವಾಗಿದೆ! (ಸುತ್ತಲೂ ನೋಡಿ) ಬಾ. ನಾವಿನ್ನು ಇಲ್ಲಿ ಹೆಚ್ಚು ನಿಲ್ಲಬೇಕಾಗಿಲ್ಲ. ದೇಶದಲ್ಲಿ ಹೊತ್ತಿಸಿದ ಕಾಳ್ಗಿಚ್ಚು ನಮ್ಮ ಕಾಲಬುಡಕ್ಕೆ ಬರುವ ಮುಂಚಿತವಾಗಿ—

(ಒಳಗಡೆಯಿಂದ ರೋದನಧ್ವನಿಯು ಕೇಳಿಸುವುದು. ಮತ್ತೆ ಹಾಹಾಕಾರ)

ನೋಡು—ಈಗಾಗಲೇ ದೇಶದಲ್ಲಿ ತುಮುಲು ಎದ್ದಂತಿದೆ. ಈ ತುಫಾನಿನಲ್ಲಿ ಎಷ್ಟೋ ಹಡಗುಗಳು ಮುಳುಗಲಿವೆ. ಎಷ್ಟೋ ಅಬೋಧಜೀವಿಗಳು ಘಾಸಿಯಾಗಲಿವೆ. ಎಂದರೆ ಅವು ಧರ್ಮದ ಆಹುತಿ! ಜಾತೀಯತೆಯ ಮಾರಣಯಜ್ಞ! ಹೋಗು—ನೀನು ಆ ಕಡೆಗೆ ತೆರಳು. ನಾನು ಈಚೆಕಡೆ ಹೋಗುವೆನು. (ನಗುತ್ತ) ನೀನು ಬೆಂಕಿಯಾದರೆ ನಾನು ಗಾಳಿಯಾಗುವೆನು. (ಪುನಃ ಒಳಗಡೆಯಿಂದ ಹಾಹಾಕಾರ—ಮಾರೋ ಮಾರೋ—ಎಂದು ಕೇಳುವುದು) ಇದೇ ಧರ್ಮದ ಪೂರ್ಣಾಹುತಿ.

**ತುಂಬುರ**—ಜಹಾದ್—ಜಹಾದ್—! (ಎಂದು ಒಂದುಕಡೆ ತೆರಳುವನು)

**ನಾರದ**—(ಕಾವಿಶಾಟಿಯನ್ನು ಎತ್ತಿಹಿಡಿದು)

ಮ್ಲೇಂಚ್ಛ ನಿಧನ ನಿಮಿತ್ತಂ ಕಲಯುಸಿಕರವಾಲಂ!
ಕ್ಲೈಬ್ಯಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಟ ಪರಂತಪ—
ಅತೋ ಯುದ್ಧಾಯ ಯುಜ್ಯಸ್ವ! —(ಎನ್ನುತ್ತ ಮತ್ತೊಂದು ಕಡೆ ಹೋಗುವನು)

**ಅಂಕ ೨** **ದೃಶ್ಯ ೪ ಉಪವನ**

(ಗರುಡ ಸನಕ ಇವರು ಮಾತಾಡುತ್ತ ಬರುವರು)

**ಗರುಡ**—ಸೋತೆವಪ್ಪ—ನಾವು ಸೋತೆವು. ನಮ್ಮ ಮುಷ್ಕರವು ಫಲಕಾರಿಯಾಗುವ ಸಂದರ್ಭ ಬಹಳ ದೂರವಿದ್ದಂತೆ ಕಂಡು ಬರುತ್ತದೆ. ವಿಷ್ಣುವು ನನ್ನನ್ನು ಬಿಟ್ಟಂದಿನಿಂದ ಕಾಲು ನಡೆಯಲ್ಲೇ ತಿರುಗುವುದರಲ್ಲಿ ಪ್ರವೀಣನಾಗಿದ್ದಾನೆ. ಅವನ ದೇಹದ ಭಾರಯಿಳಿಯಲಿಕ್ಕೆ ಅದು ಬಹಳ ಒಳ್ಳೆಯದಂತೆ! ಮತ್ತೇನು ಮಾಡುವುದು?

**ಸನಕ**—ಹೌದು. ನಾನೂ ಸಹ ಬ್ರಹ್ಮನನ್ನು ಸುತ್ತಿಸದೆ ಬಹಳ ಸಮಯವಾಯಿತು. ಇದರಿಂದಾಗಿ ಅವನು ಜಗ್ಗುವನೆಂದೇ ನನ್ನ ಭಾವನೆ ಇದ್ದಿತು. ಆದರೆ ಅದೇನೂ ಪರಿಣಾಮಕಾರಿಯಾಗುವ ಲಕ್ಷಣವೇ ಕಂಡು ಬರುವುದಿಲ್ಲ. ಅದರಿಂದಾಗಿ ನಾನು ಸ್ಥೈರಣೆಗೆಟ್ಟು, ಇನ್ನು ತೆಗಳಬೇಕೋ ಎಂದು ಯೋಚಿಸತೊಡಗಿದ್ದೇನೆ!

**ಗರುಡ**—ಆ ಕೊಮ್ರೇಡ್ ಶೇಷನು ಓಟಕಿತ್ತಂದಿನಿಂದ ನಿಜವಾಗಿಯಾದರೆ ವಿಷ್ಣುವು ರಾತ್ರಿ ಜಾಗರಣೆ ಮಾಡಬೇಕಿದ್ದಿತು.

**ಸನಕ**—ಸಹಜ. ಅದರಿಂದಾಗಿ ಅವನು ತಲೆಗೆಟ್ಟು ನಮ್ಮ ಶರಣು ಬರಬೇಕಿದ್ದಿತು.

**ಗರುಡ**—ಆದರೆ ಹಾಗಾಗಲಿಲ್ಲ. ಅವನು ಲಕ್ಷ್ಮಿಯ ತೊಡೆಯ ಮೇಲೆ ತಲೆಯಿರಿಸಿ ಸುಖವಾಗಿ ಗೊರಕೆ ಹೊಡೆದು ನಿದ್ರಿಸತೊಡಗಿರುವನು! ಮತ್ತೆ ಅವನ ಚಕ್ರಾಯುಧ—

**ಸನಕ**—ಏನಾಯಿತು?

**ಗರುಡ**—ಅದೀಗ ಉಪಯೋಗವಿಲ್ಲದೆ ತುಕ್ಕು ಹಿಡಿದು ಹಾಳಾಗತೊಡಗಿದೆ. ವಿಷ್ಣುವು ನಾಲ್ಕು ಕೈಗಳಿಂದಲೂ ಹೊಗೆಬತ್ತಿ ಸೇದತೊಡಗಿದ ಮೇಲೆ ಮತ್ತೆ ಆ ಚಕ್ರವೇಕೆ?

**ಸನಕ**—ಆ ವಿಚಾರದಲ್ಲಿ ನಮ್ಮ ಬ್ರಹ್ಮನೆ ಬಹಳ ಬಿಗು! ವಿಷ್ಣುವಿಗೆ ನಾಲ್ಕು ಕೈಗಳು ಮಾತ್ರ, ಇವನಿಗಾದರೆ ನಾಲ್ಕುಬಾಯಿಗಳಿರುವುದರಿಂದ ಈತ ಸ್ಪರ್ಧೆಯಲ್ಲಿ ಎಲ್ಲರನ್ನೂ ಮೀರಿಸಬಲ್ಲ! ಆದುದರಿಂದ ಮೊತ್ತ ಮೊದಲಿಗೆ ಆ ಹೊಗೆಬತ್ತಿಯನ್ನು ಅಡಗಿಸಿಡಬೇಕಾಗಿದೆ!

(ರಂಭೆ ಊರ್ವಶಿ ತಿಲೋತ್ತಮೆಯರ ಪ್ರವೇಶ)

**ಎಲ್ಲರೂ**—(ನಿರುತ್ಸಾಹದಿಂದ) ಉಸ್ಸಪ್ಪ!

**ರಂಭೆ**—ಕೆಲಸವಿಲ್ಲದೆ ಸುಮ್ಮನಿರುವುದೂ ಬಹಳ ಕಷ್ಟ.

**ಊರ್ವಶಿ**—ನನಗೂ ಹಾಗೆಯೇ ಕಾಣತೊಡಗಿದೆ. ಕೆಲಸದಲ್ಲೂ ಒಂದು ಸುಖವಿದೆ.

**ತಿಲೋತ್ತಮೆ**—ನಮ್ಮ ಸೇವೆಗಳನ್ನು ಕೈಕೊಂಡು ನಮ್ಮ ಬೆನ್ನು ತಟ್ಟುವವರು ಇಲ್ಲವಾದರೆ ಮತ್ತೇನು ನಮಗೆ ಸಂತೋಷ? ಹೀಗಾಗಿ ನನಗೆ ಬಹಳ ಜಿಡ್ಡು ಹತ್ತಿಹೋಗಿದೆ.

**ಗರುಡ**—(ಅವರೊಡನೆ) ಏನು—ನೀವೂ ಬಹಳವಾಗಿ ಯೋಚಿಸುತಿದ್ದೀರಿ?

**ರಂಭೆ**—ಯೋಚಿಸದೆ ಮತ್ತೇನು ಮಾಡಲಿ?

**ಸನಕ**—ಏಕೆ? ನಿಮ್ಮ ಅಮೃತವು ಬರಿದಾಯಿತೆ?

**ತಿಲೋತ್ತಮೆ**—ಅಮೃತವೊಂದರಿಂದ ಉಪಯೋಗವೇನು? ದೇವತೆಗಳಂತೂ ಗಂಗಾಜಲ ಕುಡಿಯತೊಡಗಿದ್ದಾರೆ!

**ಊರ್ವಶಿ**—ಆದುದರಿಂದಲೇ ನಮಗೂ ಅಮೃತದ ಮೇಲೆ ವೈರಾಗ್ಯ ಬಂದಿದೆ!

**ರಂಭೆ**—ಯಾರಿಗೂ ಬೇಡವಾದ ವಸ್ತು ನಮಗೇಕೆ ಬೇಕು? ಅದರಲ್ಲೇನೂ ರುಚಿಯಿಲ್ಲ.

**ಗರುಡ**—ಅಂತೂ ನಾವೆಲ್ಲ ಮೋಸಹೋದಂತಿದೆ.

**ಸನಕ**—ಅದೂ ಅಲ್ಲದೆ ನಾವೆಲ್ಲ ಭೂಲೋಕದಿಂದ ಏನು ಸಹಾಯವನ್ನು ಎಣಿಸಿದ್ದೆವೋ ಅದು ಬರಲೇ ಇಲ್ಲ. ಹಾಗಾದರೆ ನಮ್ಮ ಸಂಸ್ಥೆಯನ್ನು ಯಾವ ರೀತಿಯಿಂದ ಸಾಗಿಸಬೇಕು?

**ಗರುಡ**—ದೇವತೆಗಳು ನಮಗಿಲ್ಲಿ ಒಂದು ಕವಡಿಯನ್ನೂ ಕೊಡಲೊಪ್ಪಲಿಲ್ಲ. ಅದರಿಂದಾಗಿ ನಮ್ಮ ಜೀವನವು ಅಗಮ್ಯವಾಗಿದೆ.

**ರಂಭೆ**—ನಾವು ತಟ್ಟೆಹಿಡಿದು ಮನೆ ಮನೆಸುತ್ತಿದರೆ ಯಾರೂ ನಮ್ಮ ಕಡೆ ನೋಡಲೇ ಇಲ್ಲ!

**ಊರ್ವಶಿ**—(ಸಿಟ್ಟಿನಿಂದ)ನಮಗೆ ಬಹಿಷ್ಕಾರವಂತೆ!

**ತಿಲೋತ್ತಮೆ**—ನಾವು ಸಮಾಜದ್ರೋಹಿಗಳಂತೆ!

**ರಂಭೆ**—ಮೊನ್ನೆ ಮೊನ್ನೆ ನಮ್ಮ ಸಭೆಗೆ ಕಲ್ಲೊಗೆಯಲು ಯತ್ನಿಸಿದ್ದರು.

**ಗರುಡ**—ಅದಕ್ಕೆಲ್ಲಾ ನಾವು ಬೆದರಬಾರದು.

**ಸನಕ**—ಬೆದರದಿರಬಹುದು. ಆದರೆ ನಮಗೆ ಕರಪತ್ರ ಕೈಕಾಸುಗಳನ್ನು ಯಾರು ಒದಗಿಸಿ ಕೊಡಬೇಕು?(ಎಂದು ನಿಟ್ಟುಸಿರು ಬಿಡುವನು)

(ನಂದಿ—ಭೃಂಗಿ-ಶೃಂಗಿ ಮೊದಲಾದವರು ಬಸವಳಿದು ಪ್ರವೇಶಿಸುವರು)

**ನಂದಿ**—(ಉಸಿರುಬಿಟ್ಟು)ಈ ಕಷ್ಟ ನಮ್ಮ ಶತ್ರುಗಳಿಗೂ ಬಂದೊದಗಬಾರದು!

**ಗರುಡ**—ಏನಾಯಿತು ನಿಮ್ಮ ಪಾಡು?

**ನಂದಿ**—ಮತ್ತೇನಾಗುವುದು?(ಹೊಟ್ಟೆ ತೋರಿಸಿ)ಇದೇ?

**ರಂಭೆ**—ಏನು? ನಿಮ್ಮ ಅನ್ನಸತ್ಯಾಗ್ರಹ!

**ಶೃಂಗಿ**—ನಮ್ಮ ಅನ್ನಸತ್ಯಾಗ್ರಹದಿಂದಾಗಿ ಕೈಲಾಸದ ಕಣಜ ಇಮ್ಮಡಿಯಾಯಿತಂತೆ!

**ಭೃಂಗಿ**—(ಹಲ್ಲು ಕಡಿದು) ನನಗೆ ಹಸಿವಿನಿಂದ ಅಲ್ಲ—ಸಿಟ್ಟಿನಿಂದ ಹಲ್ಲು ಕಡಿತ ತೊಡಗಿದೆ!

**ಗರುಡ**— ಸ್ಥೈರಿಸಬೇಕು-ಸ್ಥೈರಿಸಬೇಕು! ನಾವು ನಮ್ಮ ಸಂಘವನ್ನು ಇನ್ನೂ ಬಲಗೊಳಿಸಬೇಕು.

**ನಂದಿ**— (ಬೇಸರದಿಂದ) ಅನ್ನವಿಲ್ಲದೇನೇ? ಪ್ರಾಯಶ ನಿಮ್ಮ ಊಟವಾಗಿರಬೇಕು!

**ಸನಕ**— ಏಕೆ? ಈ ಅಪ್ಸರೆಯರಿಗೆ ಅಮೃತ ಕುಡಿದೂ ಕುಡಿದೂ ಜಾಡ್ಯ ತೊಡಗಿದೆಯಂತೆ! ಅದನ್ನು ನೀವು ಕುಡಿಯುಬಹುದಲ್ಲ?

**ಭೃಂಗಿ**- ಎಂದರೆ—ನಮ್ಮ ಅನ್ನಸತ್ಯಾಗ್ರಹದ ಗತಿ?

**ಗರುಡ**—ರಾತ್ರಿ ಹೊತ್ತಿನಲ್ಲಿ ಯಾರೂ ನೋಡದಂತೆ ಕುಡಿದರೆ ಹಾನಿಯೇನುಂಟು? ನಿಮ್ಮ ವ್ರತಭಂಗವಾಗುವುದಿಲ್ಲ.

**ಸನಕ**—ಏಕೆ? ನಾವು ಸತ್ಯಲೋಕದಲ್ಲಿ ಏಕಾದಶಿ ದಿನ ಯಾರೂ ಕಾಣದಂತೆ ರಾತ್ರಿ ಹೊತ್ತು ಫಳಾರ ಮಾಡುತಿದ್ದಿಲ್ಲವೆ? ಬ್ರಹ್ಮನು ನಾಲ್ಕು ಬಾಯಿಗಳಿಂದಲೂ ಫಳಾರ ಮಾಡುತಿದ್ದ!

**ಗರುಡ**—ಹೌದು. ಅದರಿಂದಾಗಿ ನಮ್ಮ ವ್ರತಭಂಗವಾಗಲಿಲ್ಲ. ವಿಷ್ಣುವಂತೂ ಉಪವಾಸವೇ ಮಾಡಲಿಲ್ಲ. ಅದು ಬೇರೆಯವರಿಗಂತೆ! ಇನ್ನು ಲಕ್ಷ್ಮಿಯಬಗ್ಗೆ ಕೆಲವೊಮ್ಮೆ ನಾವು ಉಪವಾಸ ಮಾಡಿ ಅವಳಿಗೆ ಕೃಷ್ಣಾರ್ಪಣ ಬಿಟ್ಟದ್ದೂ ಉಂಟು!

**ಭೃಂಗಿ**—ದೊಡ್ಡವರು ಉಪವಾಸ ಮಾಡಿದರೂ ಅದು ಲೋಕೋದ್ಧಾರಕ್ಕೆ ಬಡವರು ಮಾಡಿದರೆ ಅದು ಹೊಟ್ಟೆಗಿಲ್ಲದ ಕರ್ಮ! ಅದಕ್ಕಾಗಿ ಯಾರ ಸಹಾನುಭೂತಿಯೂ ಇಲ್ಲ. ಅವರ ಪಾಡಿಗೆ ಅವರೇ ಸಾಯಬೇಕು!

**ನಂದಿ**—(ಬೇಸರದಿಂದ) ನನಗೆ ಆ ಲಕ್ಷ್ಮಿಯ ಸುದ್ದಿ ತೆಗೆದರೇ ಗರ್ವ ಬರುತ್ತಿದೆ. ಅದು ನಮ್ಮ ತತ್ವಕ್ಕೇ ತೀರಾ ವಿರುದ್ಧ. ಆ ಭಂಡವಾಳಶಾಹಿಯು ನಮ್ಮ ಕುಲಕ್ಕೇ ಕೇಡು! ಮತ್ತೆ ಅವರ ಆಶ್ವಾಸನೆಗಳೆಲ್ಲ ಸುಳ್ಳೇ ಸುಳ್ಳು! ಅದು ದೊಡ್ಡವರ ಮೊಸಳೆ ಕಣ್ಣೀರು!

**ಭೃಂಗಿ**—(ದುಃಖದಿಂದ) ಅದು ಬೇಡವಾದರೆ—ನಮಗೆ ಬೇಕಾದ ಬೇರೆ ಭಂಡವಾಳವು ಇನ್ನೂ ಭೂಲೋಕದಿಂದ ಬಾರದೆ ಹೋದರೆ ನಮ್ಮ ಗತಿ?

**ಗರುಡ**—(ಧೈರ್ಯದಿಂದ) ಏನೇ ಬರಲಿ. ನಾವು ಧೈರ್ಯಗೆಡದೆ ಮತ್ತೊಮ್ಮೆ ಪೂರ್ಣಶಕ್ತಿಯಿಂದ ಸಂಪು ಹೂಡಬೇಕು. ಅದರಿಂದಲೂ ನಮ್ಮ ಗುರಿಸಾಧಿಸದೆ ಹೋದರೆ ಮತ್ತೆ ಆಗ ಬೇಕಾಗಿರುವದು ಒಂದೇ!

**ಸನಕ**—ಏನದು ಗರುಡ! ಏನದು? ನಾವೆಲ್ಲರೂ ಒಟ್ಟಿಗೆ ಉಪವಾಸ ಮಾಡ ಬೇಕೆ?

**ಗರುಡ**—ನಮ್ಮ ಕೊನೆಯ ಬ್ರಹ್ಮಾಸ್ತ್ರ—ಕ್ರಾಂತಿ—ರಕ್ತಕ್ರಾಂತಿ!

**ತಿಲೋತ್ತಮೆ** ಆದರೆ ಈ ವಿಚಾರವು ನಮ್ಮ ಭಂಡವಾಳದ ಮಾಲಕರಿಗೆ ತಿಳಿದುಹೋದರೆ ಬಹಳ ರಂಪಾಟವಾದೀತು!

**ಗರುಡ**—(ಗರ್ವದಿಂದ) ಅಂತಹ ರಂಪಾಟಗಳಿಗೆ ನಾವು ಹೆದರಬೇಕಾಗಿಲ್ಲ. ಮುಖ್ಯವಾಗಿ ನಮಗೆ ಬೇರೆ ಲೋಕದವರ ಹೊರಗಣ ಸಹಾಯ ಸಸೂತ್ರವಾಗಿ ದೊರೆಯಿತೆಂದರೆ ನಾವು ಯಾರಿಗೂ ಹೆದರಬೇ ಕಾಗಿಲ್ಲ.

**ನಂದಿ**—(ಕಿವಿಗೊಟ್ಟು) ಅದೋ ನಾರದರು ಈ ಕಡೆ ಬರುವಂತಿದೆ.

**ಗರುಡ**—ಹಾಗಾದರೆ ನಾವಿನ್ನು ಅವರ ಕೂಡೆ ವಿಚಾರ ನಡೆಸಿ ಕೆಲಸವನ್ನು ಯುಕ್ತರೀತಿಯಿಂದ ಮುಂಬರಿಸಬೇಕಾಗಿದೆ.

**ನಂದಿ**—ಆದರೆ—(ಆಶಂಕೆಯಿಂದ) ಆದರೆ ನನಗೆ ಆ ನಾರದನಲ್ಲಿ ಭರವಸೆ ಯಿಲ್ಲ. ಆ ಜಗಳಗಂಟಿ ಚಾಡಿಕೋರನ ವಿಚಾರ ಬಹಳವಾಗಿ ಯೋಚಿಸಬೇಕಾಗಿದೆ.

**ಶೃಂಗಿ**—ನಮ್ಮ ಅಭಿಪ್ರಾಯದಲ್ಲಿ ಅವನೊಬ್ಬ ಭಂಡವಾಳಗಾರರ ದೂತ. ಎಂದಿಗೂ ನಂಬಬಾರದು.

**ಗರುಡ**—ಆದರೆ ನಮ್ಮ ಈ ಸಂಘಟನೆಗೆ ಅವನೇ ಮೂಲಕಾರಣನಷ್ಟೆ? ಯಾವುದಾದರೂ ಭಂಡವಾಳವಿಲ್ಲದೆ ಸಂಘ ಬೆಳೆಯುವುದೆ?

**ಸನಕ**– ನಮಗೆ ಕರಪತ್ರ ಬಾವುಟಗಳನ್ನು ಒದಗಿಸಿಕೊಟ್ಟು ನಮ್ಮ ಆತ್ಮೋದ್ಧಾರವನ್ನು ಮಾಡಿದಾತನೂ ಅವನೇ ತಾನೆ!

**ರಂಭೆ**—ಆದುದರಿಂದ ಅವನ ಮೇಲೆ ಸಂಶಯವಿರಬಾರದು.

**ಊರ್ವಶಿ**—ನಾವು ಯಾರನ್ನೂ ನಂಬದೆ ಹೋದರೆ ಮತ್ತೆ ನಮಗೆ ಯಾರು ಗತಿ?

**ತಿಲೋತ್ತಮೆ**– ಯಾವನಾದರೊಬ್ಬನು ಯಾವುದಾದರೊಂದು ಕತ್ತೆಯ ಕಾಲು ಕಟ್ಟಿಕೊಳ್ಳಲೇ ಬೇಕಷ್ಟೆ?

**ಗರುಡ**—(ಒಪ್ಪಿಗೆಯಿಂದ) ನ್ಯಾಯ ನ್ಯಾಯ! ಕೆಲವು ತಡವೆ ಅದರ ಸಹಾಯವಾದರೂ ಬೇಕು. ಮತ್ತೆ ಕೆಲವು ತಡವೆ ಅದರ ಲತ್ತೆ ಯಾದರೂ ಬೇಕು. ಬೇರೆ ಉಪಾಯವಿಲ್ಲ.

(ಎಲ್ಲರೂ ತಲೆದೂಗುವರು)

**ನಾರದ**—(ಪ್ರವೇಶಿಸುತ್ತ)

ಲೋಕದ ಮಣೆಯಲಿ ಜೀವದ ಪಗಡೆಯ
ನಾಡುವುದೇನಿದು ದೇವ
ಲೋಕವೆ ಕೈಯೊಳಗಣ ಕಿರುನೆಲ್ಲಿಯು
ಇದೆ ನಿನ್ನಯ ಅನುಭಾವ

**ಎಲ್ಲರೂ**—(ಸುತ್ತುಗಟ್ಟಿ) ಮುನಿವರ್ಯರಿಗೆ ಅಭಿವಂದಿಸುವೆವು.

**ನಾರದ**—(ಸುತ್ತಲೂ ನೋಡಿ) ಏನಿದು ಮಹಾಪರಿಷತ್ತು! ಎಲ್ಲರನ್ನೂ ಒಂದೇ ಕಡೆಯಲ್ಲಿ ಕಾಣುವ ಸುಯೋಗವಿದ್ದಂತೆ ಕಾಣುತ್ತದೆ!

**ಗರುಡ**—ಸುಯೋಗವಲ್ಲ ಸ್ವಾಮಿ! ಕುಹೂಯೋಗ!

**ನಾರದ**—ಏನಿದು? ನಿಮ್ಮೆಲ್ಲರ ಮುಖವೂ ಕಳೆಗುಂದಿದೆ?

**ನಂದಿ**—ಕಳೆಗುಂದದೆ ಮತ್ತೇನು? ಕೂಳಿಗಾದುದು ಸೊನ್ನೆಯು!

**ನಾರದ**—ಏಕೆ—ಏನಾಯಿತು? ಕೈಲಾಸದಲ್ಲಿ ಏನು ಕೊರತೆ ಬಂದಿದೆ?

**ಗರುಡ**—ಎಲ್ಲಾ ದಿಕ್ಕುಗಳಲ್ಲೂ ಬಡವರ ಬೇಡಿಕೆಗಳಿಗೆ ಮಾತ್ರ ಕೊರತೆ ಬಂದಿದೆ. ಮತ್ತೆ ಯಾವುದಕ್ಕೂ ಅಲ್ಲ!

**ನಾರದ**—(ತಲೆದೂಗಿ) ಓಹೋ ತಿಳಿಯಿತು! ನೀವು ಮೊನ್ನೆ ಮೊನ್ನೆ ಸಂಪು ಹೂಡಿರುವಿರೆಂಬುದು ಈಗ ಜ್ಞಾಪಕಕ್ಕೆ ಬಂದಿತು.

**ನಂದಿ**—ಹೌದು. ಸಂಪು ಹೂಡಿರುವೆವು. ಆದರೆ ಈಗ ನಿಮ್ಮ ದಾರಿ ನೋಡುತ್ತ ಕಾದಿರುವೆವು.

**ನಾರದ**—ಸರಿ. ನಾನು ಈಗತಾನೇ ಭೂಲೋಕದಿಂದ ಬರುತಿದ್ದೇನೆ.

**ಎಲ್ಲರೂ**—(ಆಶೆಯಿಂದ) ಏನು ಭೂಲೋಕದಿಂದ?

**ಗರುಡ**—ಹಾಗಾದರೆ ನಮಗಾಗಿ ಈ ತಡವೆ ತುಂಬಾ ಸಹಾಯ ಸಹಾನು ಭೂತಿಗಳನ್ನು ಒದಗಿಸಿಕೊಂಡು ಬಂದಿರಬಹುದು. (ಎಲ್ಲರೂ ಅವನನ್ನು ಸುತ್ತುಗಟ್ಟುವರು)

**ನಾರದ**—(ದುಃಖದಿಂದ ಉಸಿರ್ಗರೆದು) ಅಯ್ಯೋ! ಏನು ಹೇಳಲಿ?

**ನಂದಿ**—ಏನು ನಾರದರೆ! ಭೂಲೋಕದ ಕಮ್ಯುನಿಷ್ಟರ ಸಂಸ್ಥೆಗಳು ಹಾಳು ಗೆಟ್ಟಿಲ್ಲವಲ್ಲ?

**ರಂಭೆ**—ಅಥವಾ ಅದರ ಮೇಲೂ ಧನಿಕರ ವಜ್ರಾಘಾತವಾಗಿದೆಯೆ?

**ನಾರದ** - (ಸುಮ್ಮನಿರುವನು)

**ಎಲ್ಲರೂ**—(ಕುತೂಹಲದಿಂದ)ಹೇಳಿರಿ ಹೇಳಿರಿ!

**ರಂಭೆ**—ಅದೇ ನಮ್ಮ ಅಮೃತ ಕಲಶ!

**ಗರುಡ**—ಅದೇ ನಮ್ಮ ಸಂಪತ್ತು!

**ನಂದಿ**— ಏಕೆ ನಾರದರೆ? ಅದೇ ನಮ್ಮ ಸರ್ವಸ್ವ!

**ನಾರದ**—(ನಿರುತ್ಸಾಹದಿಂದ)ಹಾಗಾದರೆ ನಾನು ಹೇಗೆ ನಿಮ್ಮ ಅಮೃತ ಕಲಶವನ್ನು ಒಡೆದು ಹಾಕಲಿ!

**ಅಪ್ಸರೆಯರು**—(ಗಾಬರಿಯಿಂದ)ಹಾ—

**ನಾರದ** - ಹೇಗೆ ನಿಮ್ಮ ಸಾಧನ ಸಂಪತ್ತನ್ನು ನಾಶ ಮಾಡಲಿ!

**ಗರುಡ ಸನಕರು**—ಏನು?

**ನಾರದ**—ಹೇಗೆ ನಿಮ್ಮ ಸರ್ವಸ್ವವನ್ನು ಸೂರೆ ಮಾಡಿಬಿಡಲಿ!

**ನಂದಿ**—ಇದೇನು ನಾರದರೆ—ಇಂತಹ ವಿಪರೀತವಾದ ಮಾತು?

**ನಾರದ**—ಆಹಾ! ಭೂಲೋಕವು ಛಿನ್ನ ವಿಚ್ಛಿನ್ನವಾಗಿದೆ. ಜಾತೀಯ ಕಲಹಗಳಿಂದಾಗಿ ರಕ್ತ ಹರಿದು ಹೊಲಸು ನಾರುತಿದೆ!

**ಎಲ್ಲರೂ**—(ಗಾಬರಿಯಿಂದ) ಅದೇಕೆ ಹಾಗಾಯಿತು?

**ನಾರದ**—ದೈವೇಚ್ಛೆ! ತಂದೆಯು ಮಗನನ್ನು ಕಂಡುದಿಲ್ಲ. ಹೆಂಡತಿಯು ಗಂಡನನ್ನು ಕೂಡಿದುದಿಲ್ಲ—ಮಕ್ಕಳು ಬೀದಿಬೀದಿಯಲ್ಲಿ ಹಪ್ಪಳ ವಾಗಿವೆ. ಗೆಳೆಯರು ಗೆಳೆಯರನ್ನು ನಂಬಿರುವುದಿಲ್ಲ. ಎಲ್ಲರ ಬೆನ್ನಹಿಂದೆಯೂ ಚೂರಿಯು ಸುಳಿದಾಡಿದೆ! ತಲೆಯ ಮೇಲೆ ದೊಣ್ಣೆಯು ಬಡಿದಿದೆ, ಮನೆಮನೆಗಳಲ್ಲಿ ಬೆಂಕಿಯು ಹತ್ತಿದೆ. ಹಗೆತನದ ಬೆಂಕಿ!

**ಎಲ್ಲರೂ**—(ದುಃಖದಿಂದ) ಅದನ್ನು ಊದಿದವರಾರು?

**ನಾರದ**—(ಮೇಲೆ ಕೈ ತೋರಿಸಿ) ದೈವೇಚ್ಛೆ! ಯಾರಾದರೂ ಅದು ನೆಪ ಮಾತ್ರ—ಎಲ್ಲವೂ ದೈವೇಚ್ಛೆ!

**ನಂದಿ**—ಹಾಗಾದರೆ ನಮ್ಮ ಕೊಮ್ರೇಡುಗಳಿಂದ ನಮಗೆ ಸಹಾಯ ಬರುವಂತಿಲ್ಲವೆ?

**ನಾರದ**—ಅವರೇ ಅಲ್ಲಿ ನಿಸ್ಸಹಾಯರಾಗಿದ್ದಾರೆ.

**ಗರುಡ**—ಹಾಗಾದರೆ ನಮ್ಮ ಇನ್ಕಿಲಾಬ್ ಏನಾಗಬೇಕು? ನಮ್ಮ ಟ್ರೇಡ್ ಯೂನಿಯನ್ ಏನಾಗಬೇಕು?

**ಅಪ್ಸರೆಯರು**—ಹಾಗಾದರೆ ನಮಗೆ ದಾತಾರರಿಲ್ಲವಾಯಿತು!

**ಎಲ್ಲರೂ**—ಹಾ—ಕಷ್ಟ ಕಷ್ಟ!

**ಭೃಂಗಿ**—ಆಹಾ—ನಮ್ಮ ಅಲ್ಲಿಯ ಕೊಮ್ರೇಡುಗಳ ದುಃಸ್ಥಿತಿಯನ್ನು ಕೇಳಿ ನನ್ನ ಕಂಠವು ಬಿಗಿದು ಬರುತ್ತದೆ.

**ರಂಭೆ**—ನನಗೆ ಅಳುಬರುತ್ತದೆ!

**ಗರುಡ**—ನನಗೆ ಗರ್ವದಿಂದ ಮೂಗು ನಡುಗುತ್ತಿದೆ!

**ನಂದಿ**—ಆದರೆ ನಾವೇನು ಮಾಡಬಲ್ಲೆವು? ನಮ್ಮ ಗತಿಯೇನು? ನಮ್ಮ ನೆನಸು ಕನಸಾಗಿ ಹೋಯಿತಲ್ಲ.

**ಸನಕ** ಹಾಗಾದರೆ ನಮಗಾಗಿ ನೀವು ಏನೂ ತಂದಿಲ್ಲವೆ? ಅಯ್ಯೋ ನಮ್ಮ ಮಹತ್ತಾದ ಆಶೆಯು ಒಂದೇ ಕ್ಷಣದಲ್ಲಿ ಹೇಗೆ ಕುಸಿದು ಬಿದ್ದು ಹೋಯಿತು!(ಕಣ್ಣೀರು ಸುರಿಸುತ್ತ)ಕೊಮ್ರೇಡ್ ನಂದಿ!-ಈ ಅನ್ನ ತ್ಯಾಗ ಇನ್ನು ಯಾರಿಗಾಗಿ?

**ತಿಲೋತ್ತಮೆ**—ನಮ್ಮ ಭವಿಷ್ಯವು ಕತ್ತಲು ಕವಿದಿದೆ. ಇನ್ನು ಸ್ವರ್ಗವನ್ನೇ ಸೇರಿ ಇಂದ್ರನ ಪಾದಸೇವೆಯನ್ನು ಒಪ್ಪಿಕೊಳ್ಳುವುದೇ ಗತಿಯೆ?

**ಗರುಡ**—ವೈಕುಂಠದಲ್ಲಿ ನಮ್ಮನ್ನಿನ್ನು ಮಹಾಲಕ್ಷ್ಮಿಯು ಅವಜ್ಞೆಯಿಂದ ಕಾಣಲಾರಳೆ?

**ಸನಕ**--ಸರಸ್ವತಿಯ ವ್ಯಂಗ್ಯ ಕವಿತೆಗಳನ್ನು ನಾವಿನ್ನು ಹೇಗೆ ಸಹಿಸಲಿ!

**ನಂದಿ**— ಪಾರ್ವತಿಯಂತೂ ನಮ್ಮನಿನ್ನು ನಾಯಿಯಂತೆ ಕಂಡೇ ಕಾಣು ವಳು! ಆದುದರಿಂದ ನಮಗೆ ಅವಳ ಆ ಅನ್ನಕ್ಕಿಂತಲೂ ಈ ಅನ್ನ ಸತ್ಯಾಗ್ರಹವೇ ಆದೀತು!

**ನಾರದ**—(ಆಶ್ವಾಸನೆಯಿಂದ) ಗೆಳೆಯರೆ!—ನಿಮ್ಮ ದುಃಖವನ್ನು ಕಂಡು ಸಹಾನುಭೂತಿಯಿಂದಾಗಿ ನನ್ನ ಹೃದಯವು ತುಂಬಿಬರುತ್ತಿದೆ. ಆದರೆ ನಾನೇನು ಮಾಡಬಲ್ಲೆ? ಇನ್ನು ನೀವೆಲ್ಲರೂ ಇಷ್ಟಪಡುವು ದಾದರೆ—ನಿಮಗೆ ನನ್ನ ಮೇಲೆ ವಿಶ್ವಾಸವಿರುವುದಾದರೆ—ನಿಮ್ಮ ಮೇಲೆ ಬ್ರಹ್ಮಾದಿಗಳಿಗೆ ಕೋಪ ಬಾರದಂತೆ ಒಪ್ಪಿಸಿ ನಿಮ್ಮನ್ನು ಯಥಾ ಸ್ಥಾನದಲ್ಲಿ ಇರಿಸಿಯೇನು. ಆದರೆ ನಿಮ್ಮ ಧ್ಯೇಯ—ಉದ್ದೇಶ—(ಎಂದು ಕೈ ತಿರುಗಿಸುವನು) (ಎಲ್ಲರೂ ಒಬ್ಬರೊಬ್ಬರ ಮುಖವನ್ನು ನೋಡಿ ಕೊಳ್ಳುವರು)

**ನಂದಿ**—ಏನೇ ಇರಲಿ, ನನಗಂತೂ ಹಸಿವಿನಿಂದ ಪ್ರಾಣವೇ ಹೋಗುತ್ತಿದೆ. ನಾವು ಕೈಲಾಸದವರು ಯಾರ ಬಗ್ಗೆಯೂ ಈ ತನಕ ಉಪವಾಸ ಮಾಡಿದವರಲ್ಲ! ಸದ್ಯ ಊಟವೇ ನನ್ನ ಧ್ಯೇಯ - ಹೊಟ್ಟೆ ತುಂಬ

ವುದೇ ಉದ್ದೇಶ! ಆದುದರಿಂದ ನಾರದರ ಮಾತಿನಲ್ಲಿ ನನಗೀಗ ಅನ್ನದ ಮೇಲಿರುವಷ್ಟೆ ವಿಶ್ವಾಸವು ಇದೆ.

**ಗರುಡ**—ಹಾಗಾದರೆ ನಾವೆಲ್ಲ ಇನ್ನೊಮ್ಮೆ ರಕ್ತ ಕ್ರಾಂತಿಗಾಗಿ ಹೋರಾಡುವುದು ಬೇಡವೆ?

**ಸನಕ**—ನಾರದರು ಮಹರ್ಷಿಗಳು. ಅವರ ಮಾತನ್ನು ನಾನು ಮೀರಲು ಸಮರ್ಥನಲ್ಲ. ಹೇಗಿದ್ದರೂ ನಾವು ಪರಾಶ್ರಯದಿಂದ ಇದನ್ನೆಲ್ಲ ತೊಡಗಿದುದೇ ತಪ್ಪು!

**ರಂಭೆ**—ಹಾಗಾದ ಮೇಲೆ ನಾವು ಹೆಂಗಸರು ಏನು ಮಾಡಬಲ್ಲೆವು? ನಿಮ್ಮ ಮಾರ್ಗವೇ ನಮ್ಮ ಮಾರ್ಗ!

**ನಾರದ**- (ಎಲ್ಲರನ್ನು ನೋಡಿ) ಸರಿ. ಲೋಕೋಪಕಾರವೇ ನನ್ನ ಧ್ಯೇಯ. ಆದುದರಿಂದ ನಿಮಗೆ ಒಪ್ಪಿಗೆಯಾದರೆ ನಿಮ್ಮ ಹಿತಕ್ಕಾಗಿ ನಾನು ಯತ್ನಿಸುವೆನು. ನೀವೆಲ್ಲರೂ ನಾಳೆ ಕೈಲಾಸದಲ್ಲಿ ಕೂಡಬೇಕಾಗಿದೆ ನಾನು ಎಲ್ಲರನ್ನೂ ಅಲ್ಲಿ ಬರಮಾಡಿಸಿ ನಿಮ್ಮ ಪರವಾಗಿ ಎಲ್ಲವನ್ನೂ ಸಸೂತ್ರಗೊಳಿಸುವೆನು, ನೀವಿನ್ನು ಅಂಜಬೇಕಾಗಿಲ್ಲ. ಹೋಗಿರಿ. ನಾನೂ ಆ ಕಡೆ ಹೋಗುವೆನು.

(ಎಲ್ಲರೂ ಹೋಗುವರು)

ಅಂಕ ೨ ದೃಶ್ಯ ೫ ಮಹಲು

(ತ್ರಿಮೂರ್ತಿಗಳು ಮತ್ತು ಇಂದ್ರನು ಸುತ್ತ ಕುಳಿತು ಸಿಗರೇಟು ಸೇದು ತಿರುವರು. ಲಕ್ಷ್ಮಿ ಸರಸ್ವತಿ ಪಾರ್ವತಿ ಶಚಿಯರು ಈ ಕಡೆಕುಳಿತು ಹರಟೆ ಹೊಡೆಯುತ್ತಿರುವರು)

**ಲಕ್ಷ್ಮಿ**—(ತನ್ನ ಕಸೂತಿಯ ಚಿತ್ರ ತೋರಿಸುತ್ತ) ನಮ್ಮ ನಾರದನು ನಮಗಾಗಿ ಎಂತಹ ಉಪಕಾರವನ್ನು ಮಾಡಿರುವನು! ಅಲ್ಲವಾದರೆ ನಮ್ಮದು ವೃಥಾ ಕಾಲಹರಣವಾಗಿ ನಮ್ಮ ಜೀವನವೇ ವ್ಯರ್ಥವಾಗುತಿದ್ದಿತು. ಏಕೆ? ನಾನು ಈಗ ಕೆಲವೇ ದಿನಗಳಲ್ಲಿ ಹತ್ತು ಕಸೂತಿ ಹಾಕಿದ ತಲೆದಿಂಬಿನ ಚೀಲಗಳನ್ನು ಹೊಲಿದಿರುವೆನು. ಅದಿಲ್ಲದೆ ಹೋಗಿದ್ದರೆ ಈ ಸಂಪಿನವರ ಹಾವಳಿಯ ಸಮಯದಲ್ಲಿ ಮಹಾವಿಷ್ಣುವಿನ ತಲೆ ಸಿಡಿದು ಒಡೆದು ಹೋಗುತಿದ್ದಿತು! ನೋಡು—ಇದು ಎಷ್ಟು ಸುಂದರವಾಗಿದೆ!

**ಸರಸ್ವತಿ**—ನಾರದನ ವಿಚಾರ ನನಗೆ ಮೊದಲಿನಿಂದಲೂ ಗೊತ್ತಿದೆ. ಅವನು ಎಷ್ಟೋ ಸಂದರ್ಭಗಳಲ್ಲಿ ಎಷ್ಟೋ ಉಪಕಾರಗಳನ್ನು ಮಾಡಿದುದಿದೆ. ಸತ್ಯ ಲೋಕದಲ್ಲಿ ಯಾರೂ ಇಲ್ಲದೆ ಹೋದವೇಳೆಯಲ್ಲಿ ನಾರದನ ಈ ಗೀತೆಯ ಕೈಪಿಡಿಯೇ ಪ್ರವಚನಕ್ಕೆ ಒದಗಿ ಬಂದು ಬ್ರಹ್ಮನ ದೀರ್ಘವಾದ ಕಾಲವನ್ನು ಕಳೆಯಲು ಅನುಕೂಲವಾಗುತಿದ್ದಿತು.(ಎಂದು ಇಸ್ಪೀಟು ಪಿಡಿ ತೋರಿಸುವಳು)

**ಪಾರ್ವತಿ**— ಹೇಗೇಯಿರಲಿ. ನನಗಂತೂ ಆ ಯಾವ ವಿಚಾರವೂ ತಿಳಿಯದು. ಸಂಪಿನಿಂದಾಗಿ ನನಗೇನೂ ಬಾಧಕವಿಲ್ಲ. ಆ ಕೋತಿ ಮುಖದ ಭೂತಗಳಿಗೆ ಅನ್ನ ಬೇಯಿಸಿಹಾಕುವ ಕೆಲಸವೊಂದು ಉಳಿದು ನಾನೇನೋ ಧವಳಚೂರ್ಣ-ಈ ರಂಗಿನ ಕಡ್ಡಿಯನ್ನು ಅನುಭವಿಸುತ್ತ ಬರುತ್ತೇನೆ. ಅದರಿಂದಾಗಿ ನನ್ನ ಸಮಯವು ಎಷ್ಟು ಸದ್ವಿನಿಯೋಗವಾಯಿತು ಗೊತ್ತೆ? (ಎಂದು ತುಟಿಗೆ ರಂಗು ತಾಗಿಸುವಳು)

**ಶಚಿ**—(ಸಿಗರೇಟಿನ ಹೊಗೆ ಬಿಡುತ್ತ) ಆದರೆ ನನ್ನಷ್ಟು ಸಮಯದ ಬೆಲೆ ನಿಮಗಾರಿಗೂ ತಿಳಿದಿಲ್ಲ. ನಿಜ ನಿಜವಾಗಿಯೂ ನಾಲ್ಕೇ ನಿಮಿಷಗಳಲ್ಲಿ ನನ್ನ ಹೊಗೆಬತ್ತಿಯು ಮುಗಿದು ನನ್ನನ್ನು ಮತ್ತೆ ಕೈ ಸುಟ್ಟು ಎಚ್ಚರಿಸುತ್ತಿದೆ! ನಿಜವಾಗಿಯೂ ಇದೊಂದು ಕಾಲಮಾಪಕಯಂತ್ರ! ನೋಡಬಾರದೇ ಈ ಹೊಗೆ? ಇದು ಬ್ರಹ್ಮಾಂಡದ ಮೇಲೆ ಮಾಯೆ ಬೀಸಿದ ಬಲೆ! (ಎಂದು ಹೊಗೆ ಬಿಡುವಳು)

**ಈಶ್ವರ** - (ಚಿಂತೆಯಿಂದ) ನಮ್ಮ ಕಾರ್ಯಾರ್ಥವಾಗಿ ಭೂಲೋಕಕ್ಕೆ ತೆರಳಿದ ತುಂಬುರ ನಾರದರು ಇನ್ನೂ ಬಂದಿಲ್ಲವಲ್ಲ! ನಿರರ್ಥಕವಾಗಿ ಅವರು ಅಲ್ಲಿ ಕಾಲಹರಣ ಮಾಡತಕ್ಕವರಲ್ಲ.

**ವಿಷ್ಣು**— ಅಲ್ಲೇನು ತೊಂದರೆಗಳು ಒದಗಿದುವೋ? ಅವನ ಕೆಲಸವು ಅಲ್ಲಿ ವಿಳಂಬವಾದಷ್ಟು ನನ್ನ ದೇಹವೆಲ್ಲ ಗುದ್ದಿಟ್ಟಂತೆ ಬೇನೆಯಾಗತೊಡಗಿದೆ. (ನೋವನ್ನು ಮೈಮುರಿದು ಅನುಭವಿಸುತ್ತ) ಎಷ್ಟು ದಿನ ಹಾಸುಗೆ ಇಲ್ಲದೆ ಮಲಗಿರಬೇಕೋ! ಕವಿಗಳು ಪದ್ಮ ಸದೃಶವೆನುವ ನನ್ನ ಪಾದಗಳಾದರೂ ವಾಹನವಿಲ್ಲದೆ ಶತಶಃ ಛಿನ್ನ ಭಿನ್ನಗಳಾಗಿವೆ! ಅದನ್ನು ತನ್ನ ಮೃದು ಕೈಗಳಿಂದ ಪೂಸಲಾದರೂ ಲಕ್ಷ್ಮಿಗೆ ಸಮಯವೆಲ್ಲಿದೆ? ಸಮಯವಿದ್ದಾಗ ನನ್ನ ಕಚ್ಚೆ ಪೀತಾಂಬರದ ಮೇಲೆಲ್ಲಾ ಕಸೂತಿಯೇ ನಡೆದಿದೆ! ಚಿತ್ರವೇ ಚಿತ್ರ! ಇಲ್ಲಿ ಸ್ವಲ್ಪ ನೋಡಬಾರದೆ? (ಪೀತಾಂಬರ ತೋರಿಸುವನು)

**ಬ್ರಹ್ಮ**—(ನಿಟ್ಟುಸಿರು ಬಿಟ್ಟು) ಅಂತಹ ಪೀಡೆಯನ್ನು ನಾನೇನು ಹೇಳಲಿ! ನನ್ನ ನಿಟ್ಟುಸಿರಿನಿಂದಾಗಿ ಸತ್ಯಲೋಕವೇ ಸೊರಗಿ ಬತ್ತಿ ಹೋಗಿದೆ. ಆದರೆ ನನ್ನ ಕಣ್ಣೀರಿನಿಂದ ಅದೇ ಪುನಃ ನೀರು ತುಂಬಿ ಚಿಗುರ ತೊಡಗಿದೆ!

**ಇಂದ್ರ**—ನಿಮ್ಮದು ಬಾಹ್ಯಪೀಡೆಯಾದರೆ ನನ್ನದು ಆಂತರ್ಯಪೀಡೆ! ಅಮೃತವನ್ನು ಸವಿಯದ ಈ ಪಾನನಿರೋಧದಿಂದಾಗಿ ನನ್ನ ಆತ್ಮವು ದಾವಾನಲನಂತೆ ಸುಡುತ್ತಿದೆ. ನಮ್ಮ ನಂದನವನವು ಅದರಿಂದಾಗಿ ಸುಟ್ಟು ಬೂದಿಯಾಗಿದೆ!

**ಈಶ್ವರ**—(ನಿಟ್ಟುಸಿರುಬಿಟ್ಟು) ಏನು? ನೀವೆಲ್ಲ ನಿಮ್ಮ ನಿಮ್ಮ ಸುಖದುಃಖಗಳನ್ನೇ ಮಾತಾಡುತಿದ್ದೀರಲ್ಲ! ನನ್ನ ದುಃಖಜ್ವಾಲೆಯಿಂದ ಕರಗಿ ನೀರಾಗಿ ಹೋದ ಆ ಹಿಮವತ್ಪರ್ವತ ಶಿಖರವನ್ನು ನೀವು ಒಂದು ಕ್ಷಣವೂ ಕಂಡಂತಿಲ್ಲ. ನನ್ನ ತಲೆಯ ಮೇಲಣ ಗಂಗಾಪ್ರವಾಹ ಜಟೆಯುಮೇಲಣ ಚಂದ್ರಚೂಡ ಇವಾವುವೂ ನನ್ನ ತಲೆಯನ್ನು ತಂಪಾಗಿರಿಸುವುದಿಲ್ಲ. ಅರಾಜಕವಾದ ನನ್ನ ಕೈಲಾಸವು ಈಗಂತೂ ಆ ಅಸಂತುಷ್ಟ ಪಿಶಾಚಿಗಳ ಪೀಡೆಯಿಂದಾಗಿ ಮತ್ತಷ್ಟು ಅಸಹ್ಯವಾಗಿದೆ! ಇದರಿಂದಾಗಿ ಈ ಮೊದಲು ವಿಷ ತಿಂದು ದಕ್ಕಿಸಿಕೊಂಡ ನಾನು ಈಗಸಾಯಲೂ ಸಾಧ್ಯವಿಲ್ಲದೆ ಕಷ್ಟ ಬಿಡುತ್ತಾಯಿದ್ದೇನೆ! ಅಂತೂ ಅಲ್ಪರ ಸಂಗ—ಅಭಿಮಾನ ಭಂಗ ಎಂಬ ಮಾತು ಈಗ ಸತ್ಯವಾಗಿ ಅನುಭವವಾಗುತ್ತಿದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ(ಪಾರ್ವತಿಯನ್ನು ತೋರಿಸಿ ತಲೆಬಡಿದುಕೊಂಡು) ನಮ್ಮಾಕೆಗೆ ಧವಳಚೂರ್ಣವನ್ನು ಎಲ್ಲಿಂದ ತಂದು ಕೊಡಬೇಕು? ಅಲ್ಲಿ ನೋಡಬಾರದೆ-ಆ ದಿನ ಬಿಸುಟ ನನ್ನ ಭಸ್ಮದ ಭಾಂಡದ ಚೂರುಚೂರುಇನ್ನೂ ಹಾಗೇನೇ ಚೆಲ್ಲಿಕೊಂಡಿದೆ. (ದುಃಖದಿಂದ) ನಾನಂತೂ ನಿತ್ಯ ಶ್ಮಶಾನವಾಸಿ—ಈಗ ಕೈಲಾಸವೇ ಒಂದು ದೊಡ್ಡ ಶ್ಮಶಾನವಾಗಿದೆ!

**ವಿಷ್ಣು**—(ಯೋಚನೆಯಿಂದ)ನನಗಂತೂ ಈಗ ಕ್ಷೀರಸಾಗರಕ್ಕೆ ತೆರಳಿಯೆ ೋಗ

ನಿದ್ರೆಯಾದರೂ ತೊಡಗೋಣವೆಂದರೆ ಸದ್ಯ ನಿದ್ರೆಯೇ ಬರಲೊಲ್ಲದು!

**ಗರುಡ**—(ಪ್ರವೇಶಿಸುತ್ತ)ಕೊಮ್ರೇಡ್ ನಂದಿ–ಈಕಡೆ ಬಾರಯ್ಯ! ಇದೇನೂ ಅಂಜುವ ಕಾಲವಲ್ಲ. ಅಂಜಲು ನಾವೇನು ಮಾಡಿರುವೆವು? ಸೋತರೂ ಚಿಂತಿಲ್ಲ–ಗೆಲವಿನ ಹುಮ್ಮಸವಿರಬೇಕಯ್ಯ! ಎಲ್ಲರೂ ಹೀಗೆ ಬನ್ನಿ.

**ಈಶ್ವರಾದಿಗಳು**--(ಗಾಬರಿಯಿಂದ) ಇದೇನು ಬಂತು—ಮತ್ತೆ ಶನಿಪೀಡೆ!

**ವಿಷ್ಣು**—ನಾನೀಗಲೇ ಕ್ಷೀರಸಾಗರಕ್ಕೆ ಹೊರಟೆ! (ಎಂದು ಪೀತಾಂಬರ ಮುಸುಕು ಹಾಕಿಕೊಳ್ಳುವನು)

(ತುಂಬುರ ನಾರದರು ಪ್ರವೇಶಿಸುವರು. ಹಿಂದಿನಿಂದ ಭೂತಗಣಗಳು ಅಪ್ಸರೆಯರು ಇತ್ಯಾದಿ)

**ನಾರದ**—ದೇವಾದಿದೇವತೆಗಳಿಗೆ ವಂದನೆಗಳು.

ವಿಶ್ವೇಶ್ವರಂ ವಿಶ್ವ ವಿಶಾಲರೂಪಂ
ವಿಶ್ವಾತ್ಮಕಂ ವಿಶ್ರುತ ವಾಸುದೇವಂ—

**ವಿಷ್ಣು**—(ತಡೆದು) ದಮ್ಮಯ್ಯ ನಾರಾಯ! ನಿನ್ನ ಹಾಡು ಒಂದು ಬಗೆ ಬೇಡ! ಸದ್ಯ ನಮ್ಮ ಹಾಡೇ ಕೇಳುವವರಿಲ್ಲ!

**ಈಶ್ವರ**—(ಧೈರ್ಯ ತಂದು ಕೊಂಡು) ಅಬ್ಬಾ ನಾರದಾ!--ನಿನ್ನನ್ನು ನಂಬಿದವರಿಗೆ ಕೊನೆಗೂ ಸೋರೆ ಬುರುಡೆಯನ್ನೇ ಕೊಟ್ಟುಬಿಟ್ಟೆಯಲ್ಲ!

**ನಾರದ**—ಏನು--ಏನಾಯಿತು?

**ಈಶ್ವರ**—ಈ ದಾಂಧಲೆಯನ್ನು ನೀನೇ ಈ ಕಡೆ ದಾಳಿ ನಡಿಸಿಕೊಂಡು ಬರಬೇಕಾಯಿತೆ? ಈ ಕಡೆಯಿಂದ ಓಡಿ ಹೋಗೋಣವೆಂದರೆ ಅದೂ ಸಾಧ್ಯವಿಲ್ಲ!

**ಇಂದ್ರ**—ಅಯ್ಯೋ—ಈ ತ್ರಿಮೂರ್ತಿಗಳು ಓಡಿ ಹೋಗಿ ಸಮಾಧಿಗಾದರೂ ತೆರಳಬಹುದು. ನಾನು ಮಾತ್ರ ಎಲ್ಲಿಗೆ ಹೋಗಲಿ? ನನಗೆ ಇಲ್ಲಿಯೇ ಜೀವಂತ ಸಮಾಧಿಯಾಗಲಿದೆಯೋ ಏನೋ!

**ನಾರದ**—(ಧೈರ್ಯವಾಗಿ) ನೀವೇನೂ ಹೆದರ ಬೇಕಾಗಿಲ್ಲ. ನಾನೂ ತುಂಬುರನೂ—(ತುಂಬುರನ ಮುಖ ನೋಡುವನು)

**ತುಂಬುರ**—ಹೌದು. ನಾನೂ ನಾರದನೂ ಕೂಡಿ ಈ ಎಲ್ಲಾ ಮಹಾನುಭಾವರೊಡನೆ ಮಾತಾಡಿ ಎಲ್ಲವನ್ನು ನ್ಯಾಯವಾಗಿ ಬಗೆ ಹರಿಸುವಂತೆ ಒಪ್ಪಿ ಸುಸ್ಥಿತಿಗೆ ತಂದಿರುವೆನು.

**ಎಲ್ಲರೂ**—ನಿಜವಾಗಿಯೂ?

**ನಾರದ**—ಸಹಜವಾಗಿಯೂ. ಸ್ವಾಮಿ ಸೇವಕರು ಸುಮ್ಮನೆ ಕಾದಾಡುವುದರಲ್ಲಿ ಅರ್ಥವಿಲ್ಲವೆಂದು ನಾನು ಅವರಿಗೆ ಮನದಟ್ಟಾಗಿಸಿರುವೆನು. ನಿಮ್ಮ ನಿಮ್ಮೊಳಗೆ ಸಾಮರಸ್ಯವು ಬೆಳೆಯಬೇಕು—ಎಂದರೇನೇ ಸರ್ವವೂ ಸುಸಂಗತವಾಗುವುದು.

**ಲಕ್ಷ್ಮಿ**—(ಹೆಮ್ಮೆಯಿಂದ) ಇದು ನನಗೆ ಮೊದಲೇ ತಿಳಿದಿದ್ದಿತು. ಆದುದರಿಂದಲೇ ನಾನು ಅಂತಹ ಕಷ್ಟಕಾಲದಲ್ಲಿ ನನ್ನ ಕಸೂತಿಯ ಕೆಲಸವನ್ನು ಬಿಟ್ಟುಕೊಡಲಿಲ್ಲ. ಸ್ವಾಮಿ ಸೇವಕರಲ್ಲಿ ಭೇದವಿಲ್ಲವೆಂದವರಾರು?

**ಪಾರ್ವತಿ**—ನಮ್ಮದಂತೂ ಅಭೇದಜ್ಞಾನ. ಆದರೂ ಧನಿಕನು ಧನಿಕನೇ—ಸೇವಕನು ಸೇವಕನೇ ಸರಿ!

**ವಿಷ್ಣು**—(ಸಂತೋಷದಿಂದ) ಆಹಾ! ನನ್ನ ಸೇವಕರನ್ನು ಕಾಣುವಾಗ ನನಗೆಷ್ಟು ಸಂತೋಷವಾಗುತ್ತದೆ! ಈ ತನಕದ ನನ್ನ ಕಾಲಿನ ಕಷ್ಟವು ಪರಿಹಾರವಾಗಿ ಮಹದಾನಂದವಾಗುತ್ತಿದೆ!

**ಈಶ್ವರ**—ಸಂದೇಹವೇನು? ನನ್ನ ನಂದೀ—ನನ್ನ ನಂದೀ—ಎಷ್ಟು ಸೊರಗಿ ಹೋಗಿದ್ದಿಯಾ? (ಅವನ ಮೈತಟ್ಟಿ) ನನ್ನ ಮೈಯ ಕಾವು ಕೂಡದೆ ನಿನ್ನ ದೇಹವು ಎಷ್ಟು ಕ್ಷೀಣವಾಗಿ ಹೋಗಿದೆ!

**ಗರುಡ**—(ಭೃಂಗಿಯೊಡನೆ) ಆಹಾ! ದೊಡ್ಡವರ ಮೊಸಳೆ ಕಣ್ಣೀರು ಎಷ್ಟು ಸ್ವಾರ್ಥಪರವಾಗಿದೆ ನೋಡು!

**ಬ್ರಹ್ಮ**—ನಾರದನೇ—ನಮ್ಮ ಈ ಸಂತೋಷ ದಿನವನ್ನು ನಾವು ಹೇಗೆ ಕಳೆಯಲಿ?

**ಇಂದ್ರ**—ಏಕೆ? ನಮ್ಮ ಅಪ್ಸರೆಯರು ಹಸನ್ಮುಖಿಯರಾಗಿ ಸದಾಸನ್ನದ್ಧರಾಗಿರುವರಲ್ಲ. ಆಹಾ—ಅವರನ್ನು ಮುಖ್ಯವಾಗಿ ಅವರ ಕೈಯ ಅಮೃತ ಕಲಶವನ್ನು ನೋಡುವಾಗ ನನಗೆಷ್ಟು ಸಂತೋಷ ಉಕ್ಕಿ ಬರುತ್ತಿದೆ!(ಅದನ್ನು ತೆಗೆದುಕೊಂಡು ಒಳಗಡೆ ಹಣಕಿ ನೋಡಿ)ಆಹಾ--ನಮ್ಮ ಸೌಭಾಗ್ಯವೆ! ನಮ್ಮ ಅಮೃತ ಕಲಶವು ಇನ್ನೂ ಬರಿದಾಗಿಲ್ಲ! ಅಪ್ಸರೆಯರೆ! ನಿಮ್ಮ ಸೌಜನ್ಯವನ್ನು ಏನೆಂದು ವರ್ಣಿಸಲಿ? ಆಗಲಿ—ಈ ಮಹಾ ಸಭೆಯಲ್ಲಿ ನಿಮ್ಮ ಸೇವೆಯು ನಡೆಯಲಿ! ಇಷ್ಟು ದಿನಗಳ ಮೇಲೆ ನಿಮ್ಮ ಕೈ ಕಾಲುಗಳು ನರ್ತನಕ್ಕಾಗಿ ಎಷ್ಟು ತವಕ ಗೊಂಡಿರುವುವೋ ಏನೋ!

**ಈಶ್ವರ**—ತುಂಬುರ ನಾರದರೇ ಈ ಕಡೆ ಬನ್ನಿರಿ. ಇತ್ತ ಸುಖಾಸೀನರಾಗಿರಿ.

(ತುಂಬುರ ನಾರದರು ಕುಳಿತು ಕೊಳ್ಳುವರು. ನರ್ತನವು ತೊಡಗುವುದು)

**ಶಚಿ**—(ಅಮೃತವನ್ನು ತುಂಬಿಸಿ ಕೊಡುತ್ತ ಸುತ್ತಲೂ ನೋಡಿ)ಈ ದುರ್ಜನರಿಗೆ ಅಮೃತವನ್ನು ಕೊಡಲು ನನ್ನ ಮನಸ್ಸೇ ಒಪ್ಪುವುದಿಲ್ಲ.

**ಲಕ್ಷ್ಮಿ**—(ದರ್ಪದಿಂದ)ಈ ಅನಿಷ್ಟರಿಗೆ ಅಮೃತವೇಕೆ ಬೇಕಾಗಿದೆ? ಅವರ ಪಾಪಕ್ಕೆ ಪ್ರಾಯಶ್ಚಿತ್ತವಾಗಲೇಬೇಕು. ನನ್ನನ್ನು ದೂರಿದ ಧೂರ್ತನು ಎಂದಿಗೂ ಉನ್ನತಿಗೇರಲಾರನು. ಬ್ರಹ್ಮನು ತೊಡಗಿದ ಪ್ರಪಂಚವು ನನ್ನಿಂದ ನಡೆದಿದೆ! ನನ್ನ ದೌಲತ್ತಿನಿಂದ ರಾಜ್ಯವು ಅಭ್ಯುದಯ ಗೊಂಡಿದೆ. ನನ್ನನ್ನು ತೆಗಳುವ ಜನ ಜಂಗುಳಿಯು ಬರೇ ಅಭಾವ ವೈರಾಗ್ಯದಿಂದಾಗಿ ಅಸೂಯೆಗೊಂಡು ಒದರುತ್ತಿದೆ. ದೌಲತ್ತಿನಿಂದ ಆಕಾಂಕ್ಷೆಯು ತೊಡಗಿದೆ. ಆಕಾಂಕ್ಷೆಯಿಂದ ಪ್ರಪಂಚವು ಪ್ರವರ್ಧಮಾನವಾಗಿದೆ. ಧನವನ್ನು ದ್ವೇಷಿಸುವ ಜನಾಂಗಕ್ಕೆ ನನ್ನ ದೌಲತ್ತಿನ ಮೇಲೆ ಅಧಿಕಾರದ ಮೇಲೆ ಲಾಲಸೆಯೇಕೆ?

**ನಾರದ**—ಆ ಮಾತು ಸತ್ಯ. ಆದರೆ ಧನವು ಪ್ರವೃತ್ತಿಯಿಲ್ಲದೆ ಬೆಳೆಯುವುದಿಲ್ಲ. ಪ್ರವೃತ್ತಿಯು ಪರಸ್ಪರ ಸಹಾಯಕವಾಗಿದೆ. ಆದುದರಿಂದಲೇ ಧನ—ಪ್ರವೃತ್ತಿಗಳ ಸಂಬಂಧವು ಎಂದಿಗೂ ಸೌಹಾರ್ದಮಯವಾಗಿರಬೇಕು—ವಿಕಲ್ಪವಾಗಬಾರದು! ಪಾಪ—ಇದು ಇವರೆಲ್ಲರ ತಪ್ಪಲ್ಲ. ಎರವು ತಂದ ಬುದ್ಧಿಯಿಂದಾಗಿ ನಡೆದ ತಪ್ಪು. ಅನ್ಯಾಯಯುತ್ತವಾದ ಯಾವ ಕ್ರಾಂತಿಯೂ ಚಿರಕಾಲ ಬಾಳುವಂತಿಲ್ಲ! ತನ್ನ ಉನ್ನತಿಗಾಗಿ ತಾನು ತಳೆಯುವ ಪರಿವರ್ತನೆಯೇ ಕ್ರಾಂತಿ! ಅಂತಹ ಪರಿವರ್ತನೆಯನ್ನು ಪರರ ಮೇಲೆ ಪ್ರತಿಬಿಂಬಿಸಲಿರುವಾಗ ಅಂತಹ ಉದ್ಯಮದ ವೇದನೆಯು ಇತರರಿಗೆ ಹಾನಿ ತಟ್ಟದಂತೆ ಇರಬೇಕಾದುದು ಅತ್ಯಗತ್ಯ. ಆದರೆ ಅಂತಹ ಶುದ್ಧ ಪರಿವರ್ತನೆಯ ಗೌರವವನ್ನು ತಿಳಿದು ಸುಗಮವಾಗಿ ಸಮಾಜದಲ್ಲಿ ಸಾಗಲಿರುವ ಹಿರಿತನವೂ ಪ್ರತಿಯೊಬ್ಬ ಸ್ವಾಮಿಗೂ ಬೇಕೇಬೇಕು! ಈ ಮಾತು ಎಂದಿಗೂ ನೆನಪಿನಲ್ಲಿರಲಿ!

**ತುಂಬುರ**—(ಕೈತಟ್ಟಿ) ಇದು ಸಮಂಜಸವಾದ ಅಭಿಪ್ರಾಯ. ಇದನ್ನು ಎಲ್ಲರೂ ಒಪ್ಪಿಕೊಳ್ಳಬಹುದು. ಅಲ್ಲದೆ ಅದರ ದ್ಯೋತಕವಾಗಿ ಆ ಕೆಂಪು ಬಾವುಟವನ್ನು ಈಶ್ವರನ ಪಾದತಲದಲ್ಲೇ ಒಪ್ಪಿಸಿಬಿಡಬಹುದು.

**ನಂದಿ**—(ಮುಂದೆ ಬಂದು ಕೈಮುಗಿದು) ನಾವು ಎಂದಿಗೂ ಯಾವ ರೀತಿಯಿಂದಲೂ ಕಮ್ಯುನಿಷ್ಟರಲ್ಲ—ಯಾವತ್ತಿಗೂ ತಮ್ಮ ಸನ್ನಿಧಾನದ ಅಧಿಕ ಸೇವಾನಿಷ್ಠರು! (ಎಂದು ಪತಾಕೆಯನ್ನು ಒಪ್ಪಿಸುವನು)

**ಈಶ್ವರ**—(ಅಹಂಕಾರದಿಂದ) ಕೈಲಾಸವು ಕಮ್ಯುನಿಷ್ಟರ ಕಾರಸ್ಥಾನವಲ್ಲ—ಪಾರ್ವತೀ ಪರಮೇಶ್ವರರ ಆಸ್ಥಾನ! ಇದೇ ದೇವತೆಗಳ ವಿಜಯ!

**ನಾರದ**—(ಅಟ್ಟಹಾಸವಾಗಿ ನಗುವನು)

**ಬ್ರಹ್ಮ**—(ಆಶ್ಚರ್ಯದಿಂದ) ನಾರದ—ನೀನೇಕೆ ನಗುತ್ತಿರುವಿ?

**ನಾರದ**—ನಗದೆ ಮತ್ತೇನು ಮಾಡಲಿ? ದೇವಾಧಿದೇವತೆಗಳಿಗೂ ಅಹಂಕಾರದ ಅಭಿಭವವು ಬರುತ್ತಿದೆಯಲ್ಲ—ಎಂದು ನಗುತಿದ್ದೇನೆ! (ಎಂದು ಮತ್ತೂ ನಗುವನು)

**ಈಶ್ವರ**– (ಕೋಪದಿಂದ) ನಾರದಾ— ಈ ತುಂಬುರನು ಬರುತ್ತಾ ಬರುತ್ತಾ ಕುಮರಿಯಾದಂತೆಯೇ ನೀನು ಬರುತ್ತಾ ಬರುತ್ತಾ ಕತ್ತೆಯಾಗುತ್ತಿರುವಿ!

**ನಾರದ**–(ಕೈಯೆತ್ತಿ) ಇದು ದೇವತೆಗಳ ವಿಜಯವಲ್ಲ—ಅಪಜಯ!

**ವಿಷ್ಣು**—ಇದು ಎಂತಹ ಅವಹೇಳನ! ಅದೂ ನಮ್ಮ ನಾರದನ ಬಾಯಿಯಿಂದ— ನಮ್ಮ ಮುಖದ ಮುಂದೆಯೇ!

**ನಾರದ**—ಕೇಳಬೇಕು! ಎಂದು ದೇವತೆಗಳಲ್ಲಿ ಈ ಹಾಳು ಹವ್ಯಾಸವು ತೊಡಗಿದೆಯೋ(ಹೊಗೆ ಬತ್ತಿಯ ಕಡೆ ಕೈ ತೋರಿಸುವನು)ಎಂದು ಈ ಪದಾರ್ಥಗಳ ಕಡೆ ದೇವತೆಗಳ ಲಾಲಸೆಯು ಹೆಚ್ಚಿದೆಯೋ(ಕಸೂತಿ ಪೌಡರುಗಳ ಕಡೆ ಕೈ ತೋರಿಸಿ)ಅಂದಿಗೇ ದೇವತ್ವದ ಅಧಃಪತನವಾಗಿದೆ. ಆದುದರಿಂದಲೇ ಇದು ಅಧರ್ಮದ ದಿಗ್ವಿಜಯ!(ಎಲ್ಲರೂ ಪಿಸು ಮಾತಾಡಿ ಸುಮ್ಮನಿರುವರು)ಇಂತಹ ಅಧರ್ಮದ ದಿಗ್ವಿಜಯದಿಂದಾಗಿಯೇ ಭೂಲೋಕದಲ್ಲಿ ಇಂದು ಹಾಹಾಕಾರವೆದ್ದಿದೆ!— ಕೇಳಬೇಕು. ರಕ್ತದ ಕೋಡಿ ಹರಿದಿದೆ—ನೋಡಬೇಕು! ಇದು ನಾರದನ ಚಾಡಿಯ ಪರಿಣಾಮ—ದೇವತೆಗಳ ಸ್ವಾರ್ಥದ ಪರಿಣಾಮ! ಆದರೆ—

**ಈಶ್ವರ**—ಆದರೇನು? ಮುಂದೆ ಹೇಳು.

**ನಾರದ**—ಆದರೆ ಅಂತಹ ಅಧರ್ಮಗಳನ್ನು ಮೀರಿ ಒಂದು ದಿವ್ಯತೆಯು ಮೆರೆದಿದೆ. ಆ ಪುಣ್ಯ ಪ್ರಭಾವದಿಂದಾಗಿ ಇನ್ನೂ ಭೂಮಿಯ ಸುಸಂಸ್ಕೃತಿಯು ನಾಶವಾಗಲಿಲ್ಲ. ಅವನ ತಪಃ ಶಕ್ತಿಯ ಪ್ರಭಾವದಿಂದಾಗಿ ಅವನ ಅನಶನವ್ರತದ ಅಮೋಘ ಶಕ್ತಿಯ ಪರಿಣಾಮದಿಂದಾಗಿ ನಾನು ಹೊತ್ತಿಸಿದ ಬೆಂಕಿಯು ನಂದಿ ಹೋಗಿದೆ! ಆ ಕಡೆ ನೋಡಬೇಕು—ಜಾತೀಯ ದ್ವೇಷಗಳ ದುರ್ಘಟನೆಗಳಿಂದಾಗಿ ಅವನ ಮಾಹಾತ್ಮ್ಯವು ಮತ್ತಷ್ಟು ಉದ್ದೀಪ್ತವಾಗಿದೆ–ಉಜ್ವಲವಾಗಿದೆ. ಅವರಿಂದಲೇ ದೇಶದ ಕ್ಷೋಭೆಯು ಕಳೆದು ಅವನ ವಿಜಯ ಧ್ವಜವು ಶಾಂತಿ-ಅಹಿಂಸೆ—ತ್ಯಾಗಗಳ ತ್ರಿವರ್ಣ

ರಂಜಿತ ಪ್ರತೀಕವಾಗಿ ಮುಗಿಲಮಟ್ಟದಲ್ಲಿ ಹಾರಾಡುತ್ತಿದೆ. ಇದು ದೇವತೆಗಳ ವಿಜಯವಲ್ಲ—ಮನುಷ್ಯನ ವಿಜಯ!

**ವಿಷ್ಣು**—ಮತ್ತೆ ನೀನೇಕೆ ಈ ಪ್ರವೃತ್ತಿಯಲ್ಲಿ ತೊಡಗಬೇಕಿದ್ದಿತು?

**ನಾರದ**—ಇದು ಮನುಷ್ಯನ ಕಾಲವೆಂದು ತೋರಿಸುವುದಕ್ಕಾಗಿ. ಅಂತಹ ಮನುಷ್ಯರಲ್ಲಿ ಅತಿಮಾನುಷನೊಬ್ಬನಿದ್ದಾನೆ ಎಂಬುದನ್ನು ಪ್ರಪಂಚಕ್ಕೇ ಸಾರುವುದಕ್ಕಾಗಿ!

**ಈಶ್ವರ**—(ತಲೆದೂಗಿ) ಸಹಜ. ನಾರದನ ಮಾತು ಸತ್ಯವಿದೆ. ನಾವೇ ನಮ್ಮ ಮಟ್ಟದಿಂದ ಕೆಳಗಿಳಿದಿರುವೆವು. ಧರ್ಮವು ಸ್ವಾರ್ಥದಲ್ಲಿ ಪರ್ಯವಸಾಯಿಯಾದಂತೆ ದೇವತ್ವವೂ ಅಹಂಕಾರದತ್ತ ಸಾಗಿದೆ. ದೈತ್ಯರ ನಾಶಕ್ಕಾಗಿ ತೊಡಗಿದ ಮಾಯೆಯು ಇಂದು ದೇವತೆಗಳನ್ನೇ ಆಹುತಿಗೊಂಡಿದೆ.

**ನಾರದ**—ಆದುದರಿಂದ ಈಗ ಜಗತ್ತಿನ ಉದ್ಧಾರಕ್ಕಾಗಿ—ದೇವತ್ವದ ಶುದ್ಧೀಕರಣಕ್ಕಾಗಿ ಮೊತ್ತಮೊದಲಿಗೆ ದೇವತೆಗಳ ಉದ್ಧಾರವಾಗಲಿ. ಆ ಹವ್ಯಾಸಗಳನ್ನೆಲ್ಲ ಈ ಕಡೆ ಕೊಡೋಣಾಗಲಿ!

**ಪಾರ್ವತಿ**—(ವ್ಯಥೆಯಿಂದ) ನಾರದಾ—ಇದೇನು ವಿಚಿತ್ರ? ಇವುಗಳನ್ನು ಮೊತ್ತಮೊದಲಿಗೆ ನಮಗೆ ತೆತ್ತವನೂ ನೀನೇ! ಮತ್ತೆ ಈಗ ನೀನೇ ಹಿಂತೆಗೆದುಕೊಂಡು—

**ನಾರದ**—(ನಗುತ್ತ) ಸಹಜ. ಆದರೆ ನನಗೆ ಈ ದೇವತ್ವವು ಎಷ್ಟು ಮೆಟ್ಟಲುಗಳು ಕೆಳಗಿಳಿಯಲು ಸಾಧ್ಯವಿದೆ ಎಂಬುದನ್ನು ತಿಳಿಯಬೇಕಿದ್ದಿತು. ಅದನ್ನು ತಿಳಿದಾಯಿತು. ಆದುದರಿಂದಲೇ ಅದನ್ನೀಗ ಲೋಕ ಕಲ್ಯಾಣಕ್ಕಾಗಿ ಹಿಂದೆ ತೆಗೆದುಕೊಳ್ಳುತಿದ್ದೇನೆ.

**ಲಕ್ಷ್ಮಿ**—(ದುಃಖದಿಂದ) ನಾರದಾ—ನೀನು ಬಹಳ ನಿಷ್ಕರುಣಿ! ನನ್ನ ಈ ಸುಂದರವಾದ ಕಸೂತಿಯು ಇನ್ನೂ ಮುಗಿದಿಲ್ಲವಲ್ಲ?

**ನಾರದ**—ಸುಖದ ವೃಥಾನುಸರಣೆಯು ಯಾವ ಮಹದ್ವ್ಯಕ್ತಿಗಾದರೂ ಕೊನೆಗೆ ದುಃಖಕ್ಕೇ ಕಾರಣವಾಗುವುದು. ಅದನ್ನು ಎಷ್ಟುಬೇಗನೆ

ಬಿಟ್ಟುಗೊಡುವೆವೋ ಅಷ್ಟು ಹಿತಕಾರಿಯಾಗುವುದು. ಆದುದರಿಂದ ತುಂಬುರಾ–ಅವುಗಳನ್ನೆಲ್ಲಾ ಹಿಂದೆ ತೆಗೆದುಕೊಂಡುಬಿಡು. (ತುಂಬುರನು ಲಕ್ಷ್ಮಿಯಿಂದ ಕಸೂತಿ, ಸರಸ್ವತಿಯಿಂದ ಇಸ್ಪೀಟು ಏಡಿ, ಪಾರ್ವತಿಯಿಂದ ಪೌಡರಿನ ಕೈಚೀಲ, ಶಚಿ ಮತ್ತು ಇತರರಿಂದ ಸಿಗರೇಟುಗಳನ್ನು ಹಿಂದೆಗೆದುಕೊಳ್ಳುವನು.)

**ನಾರದ**—(ಅವುಗಳನ್ನು ತನ್ನ ಜೋಳಿಗೆಯಲ್ಲಿ ತುಂಬಿಸಿಕೊಂಡು) ಅಧರ್ಮದೊಂದಿಗೆ ಇವುಗಳ ನಾಶವಾಗಲಿ–ಜಗತ್ತಿಗೆ ಕಲ್ಯಾಣವಾಗಲಿ! ಶಾಂತಿ–ಸಹನೆ—ಸಾಹಚರ್ಯದ ಒಂದು ದಿವ್ಯ ಮಾರ್ಗವು ಜೀವನಕ್ಕೆ ತೃಪ್ತಿಯನ್ನು ತುಂಬಿಕೊಡಲಿ!

**ಈಶ್ವರ**—(ಕಾಲಬುಡದ ಕೆಂಪುಪತಾಕೆಯನ್ನು ಕೈಗೆ ತೆಗೆದುಕೊಂಡು) ನಾರದಾ! ನನಗೇಕೆ ಈ ಕೆಂಪು ಬಾವುಟ? ನಾನಂತೂ ದಿಗಂಬರ!

**ವಿಷ್ಣು**—ನನಗದು ಒಪ್ಪುವುದೇಯಿಲ್ಲ. ನನ್ನದು ನೋಡಬಾರದೆ?—ಪೀತಾಂಬರ—ದಿವ್ಯ ಪೀತಾಂಬರ!

**ಬ್ರಹ್ಮ ಇಂದ್ರರು**—ನಮಗದು ಬೇಡವೇ ಬೇಡ. ಅದನ್ನು ನೋಡುವಾಗಲೇ ನಮಗೆ ಭಯವಾಗುತ್ತದೆ.

**ನಾರದ**—(ಕೈಗೆತ್ತಿಕೊಂಡು) ಹಾಗಾದರೆ ಅದನ್ನು ಅದರ ಯಥಾಸ್ಥಾನಕ್ಕೇ ತೂರಿ ಬಿಡೋಣ. ದೇವಲೋಕದಲ್ಲಿ ಅದು ಹೇಗೆ ಹಿತಕಾರಿಯಲ್ಲವೋ ಅಂತೆಯೇ ಭಾರತ ವರ್ಷಕ್ಕೂ ಅದು ಹಿತಕಾರಿಯಾಗಿಲ್ಲ. ಅದರ ರಕ್ತ ವರ್ಣದ ಹಿಂದೆ ದೌರ್ಜನ್ಯದ ಕಳಂಕವಿದೆ! ಅಸಹನೆ ಅಸಂತುಷ್ಟಿಯ ಕಾಳಿಮೆಯಿದೆ! ಅವರ ಚಿಹ್ನೆಗಳಲ್ಲಿ ಸರ್ವಾಧಿಕಾರಿತ್ವದ ನಿಗೂಢ ಕಾರಸ್ಥಾನವಿದೆ. ಇದು ಶಾಂತಿಯಲ್ಲಿ ತೂರಿಲ್ಲ—ಸಹನೆಯಲ್ಲಿ ಬಾಳಿಲ್ಲ—ಅಹಿಂಸೆಯಲ್ಲಿ ಪುಟಗೊಂಡಿಲ್ಲ! ಆದುದರಿಂದಲೇ ಇದು ಭಾರತಕ್ಕೆ ಭೂಷಣವಾಗಿಲ್ಲ. ಇದು ಅಲ್ಲಿಯೇ ಹೋಗಿ ಬೀಳಲಿ—ಎಲ್ಲಿ ವ್ಯಕ್ತಿತ್ವವು ಅಧಿಕಾರದ ಅಧೀನವಾಗಿದೆಯೋ—ಎಲ್ಲಿ ಮನುಷ್ಯತ್ವವು ಯಂತ್ರದ ಅಧೀನವಾಗಿದೆಯೋ ಎಲ್ಲಿ ಆತ್ಮಶಕ್ತಿಯು ಪಶುಶಕ್ತಿಯ ಅಧೀನವಾ

ಗಿದೆಯೋ ಅಲ್ಲಿಯೇ ಇದು ಹೋಗಿ ಬೀಳಲಿ!(ಆ ಕಡೆ ಎತ್ತಿ ತೂರಿ ಬಿಡುವನು)ಇನ್ನು ನಾವು ಮಾಡತಕ್ಕುದೇನಿದೆ? ಅಪ್ಪಣೆಯಾಗಲಿ. (ಕೈ ಮುಗಿಯುವನು)

**ಈಶ್ವರ**—(ನಗುತ್ತ)ನಾವು ನಿನ್ನ ಉದ್ದೇಶವನ್ನು ಮೆಚ್ಚಿರುವೆವು. ಅಂತೆಯೇ ನಮ್ಮ ಈ ಮಾಯೆಯು ಪ್ರಪಂಚಕ್ಕೆ ಮಾರ್ಗದರ್ಶಕವಾಗಲಿ. ನಮ್ಮ ಈ ಹುಚ್ಚು ನಟನೆಯನ್ನು ಕಂಡು ಲೋಕವು ತನ್ನ ಹೆಜ್ಜೆ ಯನ್ನು ಸಕಾಲದಲ್ಲಿ ತಿದ್ದಿಕೊಳ್ಳಲಿ! ಸೇವೆ—ಸಂಯಮ-ಸ್ವಾರ್ಥ ತ್ಯಾಗಗಳ ಹೊರತು ಲೋಕಕ್ಕೆ ಕ್ಷೇಮವಿಲ್ಲವೆಂಬುದು ಇದ ರಿಂದ ವಿದಿತವಾಗಲಿ! ನಾರದಾ ಹೇಳು! ನಮ್ಮಿಂದ ನೀನು ಬೇರೆ ಯಾವ ವರವನ್ನು ಆಶಿಸುವಿ?

**ನಾರದ**—(ಕೈಮುಗಿದು) ಸನ್ನಿಧಿಯಲ್ಲಿ ನಾನೇನನ್ನು ಕೇಳಲಿ? ಆದರೂ ಈ ಪರಮಾನುಗ್ರಹವಾಗಲಿ. ಭಾರತ ವರ್ಷದಲ್ಲಿ ಶಾಂತಿಯ ಶುಭ ಸಂದೇಶವು ಚಿರಸ್ಥಾಯಿಯಾಗಲಿ! ದೇವತ್ವದ ಅಭಿವ್ಯಕ್ತಿಗಾಗಿ ಆ ಮಹಾತ್ಮನ ಪೂರ್ಣ ಕಾಮನೆಗಳು ಫಲಪ್ರದಗಳಾಗಿ ಆತ್ಮ ಸ್ವಾತಂ ತ್ರ್ಯದ ಪೂರ್ಣ ಪ್ರಕಾಶವು ಜಗತ್ತಿಗೇ ಮಾರ್ಗದರ್ಶಕವಾಗಲಿ! ಅವನತಿಯು ಉನ್ನತಿಯನ್ನೇರಿ ಉನ್ನತಿಯು ಅವನತಿಯ ಉತ್ಥಾ ನಕ್ಕೆ ಸಹಕಾರಿಯಾಗಿ ಭಾರತ ಜನಾಂಗವು ಸುಖ ಸಮೃದ್ಧಿಯಿಂದ ಬಾಳಿ ಬದುಕಲಿ! ಇದೇ ನನ್ನ ಅಭಿಲಾಷೆ!

**ವಿಷ್ಣು**—(ನಗುತ್ತಾ) ನಾರದಾ—ಇನ್ನೂ ತ್ಯಾಗದ ಪೂರ್ಣಾಹುತಿಯಾಗಿಲ್ಲ!

**ನಾರದ**—(ಗಾಬರಿಯಿಂದ) ಇದೇನು ಪ್ರಭೋ! ಹೀಗೆನ್ನುತ್ತಿರುವಿ? ಜೀವನ ವನ್ನೇ ಸೇವೆಗೆ ಮುಡಿಪಾಗಿಸಿ ಆತ್ಮ ಸುಖಗಳನ್ನು ದೇಶಕ್ಕೆ ಮೀಸ ಲಾಗಿಸಿ ಸರ್ವಸ್ವವನ್ನೂ ಲೋಕ ಕ್ಷೇಮಕ್ಕಾಗಿ ಸಮರ್ಪಿಸಿದ ತ್ಯಾಗಕ್ಕೂ ಮಿಕ್ಕಿದ ಸೇವೆ ಬೇರೆಯಿದೆಯೆ?

**ವಿಷ್ಣು**—ನಾರದಾ—ನಾನು ನಿನಗಾಗಿ ಇಲ್ಲಿಯೊಮ್ಮೆ ವಿಶ್ವರೂಪವನ್ನೇ ತೋರಿಸಬೇಕಾಗುವುದು. ನನ್ನ ಕಾಲಬಳಿ ನೋಡು!

**ನಾರದ**-(ಕೈಮುಗಿದು) ನೋಡುತ್ತಿರುವೆನು ಮಹಾಪ್ರಭೋ! ಆದರೆಕಾಲಿಗೆ ತಾಗಿದ ಭಯಂಕರವಾದ ಬಾಣವನ್ನು ನೋಡುತ್ತಿರುವೆನಲ್ಲ!

**ವಿಷ್ಣು**—ಈಗ ನನ್ನ ಎದೆಯ ಕಡೆ ನೋಡು!

**ನಾರದ**—(ಆಶ್ಚರ್ಯದಿಂದ) ಆಹಾ! ಅಲ್ಲಿ ಕಾಲಕೂಟವೇ ಕುದಿಯು ಯಲ್ಲ! ಅದನ್ನೂ ಸಹನೆಯಿಂದ ತಾಳಿದ ಪ್ರಶಾಂತ ಮೂರ್ತಿ!

**ವಿಷ್ಣು**—ಇನ್ನು ನನ್ನ ತಲೆಯ ಕಡೆ ನೋಡು!

**ನಾರದ**—(ಗಾಬರಿಯಿಂದ) ಅಯ್ಯೋ! ತನ್ನ ಮೃತ್ಯುವನ್ನು ತಾನೇ ತಲೆ ಮೇಲೆ ಹೊತ್ತು ನಗುತ್ತ ನಗುತ್ತ ಶಿಲುಬೆಯೇರಿದ ಮಹದ್ವ್ಯ

**ವಿಷ್ಣು**—ಹಾಗಾದರೆ ಇನ್ನೊಮ್ಮೆ ಆ ಕಡೆ ನೋಡು!–(ಆಕಡೆ ಕೈನೀಡು ನಾರದಾ—ಬೆಚ್ಚಿ ಬೀಳಬೇಡ. ಸಾವಧಾನ!

(ನಾರದನು ಕುತೂಹಲದಿಂದ ನೋಡುವನು. ಆ ಕಡೆಯಿಂದ ಮೂ ಗುಂಡುಗಳ ಸದ್ದು ಕೇಳುವುದು. ಒಂದಿಗೆ ಹಾ ರಾಮ!—ಹಾ ರಾ ಎಂದು ಗಂಭೀರವಾಗಿ ನುಡಿದು ದೊಪ್ಪನೆ ಬಿದ್ದ ಸದ್ದಾಗುವುದು. ರ ಭೂಮಿಯ ಮೇಲೆ ಕೆಂಪು ಕವಿಯುವುದು)

**ನಾರದ**—(ದುಃಖ ಭೀತಿಗಳಿಂದ ಕಣ್ಣಿಗೆ ಕೈ ಹಿಡಿದು)ಅಯ್ಯೋ! ಇದೇನು ಅ ರ್ಥ! ತ್ಯಾಗದ ಪೂರ್ಣಾಹುತಿಯಾಯಿತೆ? ಸತ್ಯ—ಸ್ನೇಹ— ಸಂಯಮಗಳ ಸ್ವರ್ಣಶಿಖರವು ಕೆಡೆದು ಹೋಯಿತೆ? ಆ ಮಹಾ —ಆ ಹುತಾತ್ಮ! ಅಯ್ಯೋ! ದುರ್ಭಾಗ್ಯ ಭಾರತವೇ! ಇನ್ನೆಲ್ಲಿ ಮಹಾತ್ಮ— ಆ ಹುತಾತ್ಮ!—ಅಯ್ಯೋ!

(ರಂಗ ಭೂಮಿಯ ಮೇಲೆ ಕತ್ತಲೆ ಕವಿಯುವುದು. ಹಿಮ್ಮೇಳದೊ —ರಘುಪತಿ ರಾಘವ ರಾಜಾರಾಮ್—ಭಜನೆ ಕೇಳಿಸುತ್ತಿರುವ ಕ್ರಮೇಣಕೆಂಪು ಬೆಳಕು ಹಬ್ಬಿದಾಗ ಮತ್ತೆಲ್ಲರೂ ಹೊರಟು ಹೋಗಿ ವಿಷ್ಣು ತನ್ನ ಇದಿರು ಮೊಳಕಾಲೂರಿ ಕೈ ಮುಗಿದು ನಿಂತ ಅರ್ಜುನ ಉಪದೇಶಿಸುತ್ತಿರುವನು)


(ಮೇಳ ಸಂಗೀತ)

"ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ."

(ಅಂಕದ ಪರದೆ ಬೀಳುವುದು)

---

# ಹರಾಪರ್ಕೆಗಾಣಿ



ಶ್ರೀ. ಎಸ್. ವೆಂಕಟರಾಜರ
ಅನೋಘ ಕೃತಿಗಳು

★

**ಕಿರಿಯರ ಪ್ರಪಂಚ, ಉಡುಪಿ. ಇವರಿಂದ—**

೧ ರಂಗಭೂಮಿ
೨ ಆಕಾಶಗಂಗೆ
೩ ಎರಡು ಏಕಾಂಕ ನಾಟಕಗಳು
೪ ಕವಿತಾ ಕಾಮಿನಿ ಭಾಗ ೧
೫ ಸಪ್ತಸಾಗರ

**ಶ್ರೀಕೃಷ್ಣಪ್ರಕಾಶನ, ಉಡುಪಿ. ಇವರಿಂದ—**

೬ ಅಂಬುಜಾಕ್ಷಿ
೭ ಧರ್ಮಶಾಲೆ
೮ ತುಂಗಮ್ಮನ ತವರುಮನೆ
೯ ಕೈಲಾಸದಲ್ಲಿ ಕಮ್ಯುನಿಷ್ಟರು

**ಅಚ್ಚಿನಲ್ಲಿ**

೧೦ ಕಾವ್ಯಮನೋರಮಾ (ಕನ್ನಡ—ಸಂಸ್ಕೃತ)